ಜ್ಞಾನಭಾರತಿ ಆವರಣದಲ್ಲಿ ವೈಟ್ ಟಾಪಿಂಗ್: ಅನುದಾನ ಮರು ಹಂಚಿಕೆಗೆ ಶಾಸಕರ ಆಕ್ಷೇಪ

ಒಂದು ರಸ್ತೆಗಾಗಿ 3 ಕ್ಷೇತ್ರಗಳ ಕಾಮಗಾರಿಗೆ ಕತ್ತರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲು ಮೂರು ಕ್ಷೇತ್ರಗಳ ನಾಲ್ಕು ಕಾಮಗಾರಿಗಳಿಗೆ ಕತ್ತರಿ ಪ್ರಯೋಗ ಮಾಡಲಾಗಿದೆ. ಇದಕ್ಕೆ ಕಾಂಗ್ರೆಸ್ ಹಾಗೂ ಬಿಜೆಪಿ ಶಾಸಕರಿಂದ ಆಕ್ಷೇಪ ವ್ಯಕ್ತವಾಗಿದೆ.

ರಾಜರಾಜೇಶ್ವರಿನಗರ ಕ್ಷೇತ್ರ ವ್ಯಾಪ್ತಿಯ ಜ್ಞಾನಭಾರತಿ ಆವರಣದಲ್ಲಿ ₹ 35.50 ಕೋಟಿ ಮೊತ್ತದ ಕಾಮಗಾರಿಯನ್ನು ಮರು ಟೆಂಡರ್ ಆಹ್ವಾನಿಸದೆ ಕೈಗೆತ್ತಿಕೊಳ್ಳಲು ಬಿಬಿಎಂಪಿ ಮುಂದಾಗಿದೆ.

2017–18ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಒದಗಿಸಿದ್ದ ಅನುದಾನದಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಾಗಿ ಕ್ರಿಯಾಯೋಜನೆ ತಯಾರಿಸಲಾಗಿತ್ತು. ಆದರೆ, ಇದೀಗ ಬ್ಯಾಟರಾಯನಪುರ ಕ್ಷೇತ್ರದಲ್ಲಿ ಎರಡು ಕಾಮಗಾರಿ, ಸರ್ವಜ್ಞನಗರ ಮತ್ತು ಚಿಕ್ಕಪೇಟೆ ಕ್ಷೇತ್ರದ ತಲಾ ಒಂದು ಕಾಮಗಾರಿ ಸೇರಿ ಒಟ್ಟು 4.03 ಕಿಲೋ ಮೀಟರ್‌ನಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಬಿಡಲಾಗಿದೆ.

‘ಒಂದು ಕ್ಷೇತ್ರಕ್ಕೆ ಮಂಜೂರಾದ ಕಾಮಗಾರಿಯನ್ನು ಮತ್ತೊಂದು ಕ್ಷೇತ್ರಕ್ಕೆ ವರ್ಗಾವಣೆ ಮಾಡಬಾರದು ಎಂದು ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಸೂಚಿಸಿದ್ದರು. ಅನಿವಾರ್ಯವಾಗಿ ಕಾಮಗಾರಿ ಬದಲಾವಣೆ ಮಾಡಿಕೊಳ್ಳಬೇಕಿದ್ದರೆ ಆ ಕ್ಷೇತ್ರದೊಳಗೇ ಪರ್ಯಾಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು ಎಂದು ಆದೇಶವನ್ನೂ ನೀಡಿದ್ದರು. ಆದರೂ, ಕಾಮಗಾರಿಗಳನ್ನು ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ ಬಿಬಿಎಂಪಿ ಅಧಿಕಾರಿಗಳು ಬದಲಿಸುತ್ತಿದ್ದಾರೆ. ಸಚಿವರ ಒತ್ತಡಕ್ಕೆ ಮಣಿದು ಅಧಿಕಾರಿಗಳು ಈ ಕೆಲಸಕ್ಕೆ ಕೈ ಹಾಕಿದ್ದಾರೆ’ ಎಂದು ನಗರದ ಹಲವು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆಡಳಿತ ಪಕ್ಷದ ಶಾಸಕರ ಕ್ಷೇತ್ರದ ಒಂದು ಕಾಮಗಾರಿಯ ಹಣವನ್ನು ರಾಜರಾಜೇಶ್ವರಿನಗರಕ್ಕೆ ಹಂಚಿಕೆ ಮಾಡಲಾಗಿದ್ದು, ಇದು ಬಿಜೆಪಿಯ ಮೂಲ ಶಾಸಕರ ಕೋಪಕ್ಕೆ ಕಾರಣವಾಗಿದೆ. ‘ವಲಸೆ ಬಂದವರ ಕ್ಷೇತ್ರಕ್ಕೆ ಈಗಾಗಲೇ ₹1 ಸಾವಿರ ಕೋಟಿಗೂ ಅಧಿಕ ಅನುದಾನ ನೀಡಲಾಗಿದೆ. ನಮ್ಮ ಕ್ಷೇತ್ರಕ್ಕೆ ಅನುದಾನ ನೀಡಲು ಸತಾಯಿಸಲಾಗುತ್ತಿದೆ. ಅದರ ನಡುವೆ, ಈ ರೀತಿ ಅನುದಾನ ಕಿತ್ತುಕೊಂಡರೆ ನಾವೇನು ಮಾಡಬೇಕು. ನಮ್ಮ ಕ್ಷೇತ್ರದಲ್ಲಿ ಸಮಸ್ಯೆಗಳು ಇಲ್ಲವೇ’ ಎಂದು ಬಿಜೆಪಿಯ ಶಾಸಕರೊಬ್ಬರು ಪ್ರಶ್ನಿಸಿದರು. ಮುಖ್ಯಮಂತ್ರಿ ಸಚಿವಾಲಯದಿಂದ ಬಂದ ಒತ್ತಡದ ಕಾರಣಕ್ಕೆ ಅನುದಾನ ಮರು ಹಂಚಿಕೆ ಮಾಡಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸಿದರು.

‘ಜಲಮಂಡಳಿ ಪೈಪ್‌ಲೈನ್ ಇದೇ ಮಾರ್ಗದಲ್ಲಿ ಹಾದು ಹೋಗುತ್ತಿದ್ದ ಕಾರಣಕ್ಕೆ ನಾಲ್ಕು ಕಾಮಗಾರಿಗಳನ್ನು ತಡೆ ಹಿಡಿಯಲಾಗಿತ್ತು. ಉಳಿತಾಯ ಮೊತ್ತ ಇದ್ದರೆ ಜ್ಞಾನಭಾರತಿ ಆವರಣದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರದಿಂದ ನಿರ್ದೇಶನ ಬಂದಿದ್ದರಿಂದ ವೈಟ್ ಟಾಪಿಂಗ್ ಯೋಜನೆ ಸಿದ್ಧಪಡಿಸಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ಯೋಜನೆ) ಎಂ.ಲೋಕೇಶ್ ತಿಳಿಸಿದರು.

‘ರಾಜರಾಜೇಶ್ವರಿನಗರ ಕ್ಷೇತ್ರದ ಹೊರವರ್ತುಲ ರಸ್ತೆಯಲ್ಲಿ ಈ ಹಿಂದೆ ಕಾಮಗಾರಿಯನ್ನು ನಿಲ್ಲಿಸಿದ್ದೆವು. ಆ ಮೊತ್ತವನ್ನು ಬ್ಯಾಟರಾಯನಪುರ ಕ್ಷೇತ್ರದ ಥಣಿಸಂದ್ರ ಮುಖ್ಯ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಗೆ ಬಳಸಿಕೊಳ್ಳಲಾಗಿತ್ತು. ಅಗತ್ಯಕ್ಕೆ ಅನುಗುಣವಾಗಿ ಅನುದಾನ ಮರು ಹಂಚಿಕೆ ಮಾಡಲಾಗುತ್ತದೆ. ಈ ವಿಷಯವನ್ನು ಬ್ಯಾಟರಾಯನಪುರ ಶಾಸಕರ ಗಮನಕ್ಕೂ ತರಲಾಗಿದೆ’ ಎಂದು ಸ್ಪಷ್ಟಪಡಿಸಿದರು.

ದ್ವೇಷದ ರಾಜಕೀಯ: ಕೃಷ್ಣ ಬೈರೇಗೌಡ



ಕೃಷ್ಣ ಬೈರೇಗೌಡ

‘ನನ್ನ ಕ್ಷೇತ್ರಕ್ಕೆ ಮಂಜೂರಾಗಿದ್ದ ಎರಡು ವೈಟ್ ಟಾಪಿಂಗ್ ಕಾಮಗಾರಿಯನ್ನು ರದ್ದುಪಡಿಸಿ ರಾಜರಾಜೇಶ್ವರಿನಗರ ಕ್ಷೇತ್ರಕ್ಕೆ ಕೊಟ್ಟಿದ್ದಾರೆ. ಬಿಜೆಪಿಯ ದ್ವೇಷದ ರಾಜಕೀಯಕ್ಕೆ ಮತ್ತೊಂದು ಉದಾಹರಣೆ’ ಎಂದು ಶಾಸಕ ಕೃಷ್ಣ ಬೈರೇಗೌಡ ಹೇಳಿದರು.

‘ಅಧಿಕಾರ ದುರುಪಯೋಗ ಮಾಡಿಕೊಂಡು ನನ್ನ ಕ್ಷೇತ್ರದ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ಬಿಜೆಪಿಗೆ ಇಡೀ ಬೆಂಗಳೂರಿನ ಅಭಿವೃದ್ಧಿ ಬೇಕಿಲ್ಲ, ತಮ್ಮ ಪಕ್ಷದ ಶಾಸಕರ ಅಭಿವೃದ್ಧಿ ಅಷ್ಟೇ ಬೇಕಿದೆ’ ಎಂದರು.

‘ನಗರದ ಯಾವುದೇ ಪ್ರಮುಖ ರಸ್ತೆಗೆ ಎರಡು ವರ್ಷಗಳಿಂದ ಡಾಂಬರು ಹಾಕಿಲ್ಲ. ಕಾಂಗ್ರೆಸ್ ಅವಧಿಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭಿಸಿದಾಗ ಬಿಜೆಪಿ ವಿರೋಧ ಮಾಡಿತ್ತು. ಈಗ ಬೆಂಗಳೂರಿನಲ್ಲಿ ಗುಂಡಿ ಇಲ್ಲದ ರಸ್ತೆಗಳೆಂದರೆ ವೈಟ್ ಟಾಪಿಂಗ್ ರಸ್ತೆಗಳು ಮಾತ್ರ’ ಎಂದು ಹೇಳಿದರು.

ಬದಲಾದ ಕಾಮಗಾರಿಯ ವಿವರ

ರಸ್ತೆಯ ಹೆಸರು	ಉದ್ದ (ಕಿ.ಮೀಗಳಲ್ಲಿ)	ಅಂದಾಜು ವೆಚ್ಚ (₹ ಕೋಟಿಗಳಲ್ಲಿ)	ಕ್ಷೇತ್ರ
ಕೊಡಿಗೇಹಳ್ಳಿ ವೃತ್ತದಿಂದ ಭದ್ರಯ್ಯ ಲೇಔಟ್‌ನ ಹೊರ ವರ್ತುಲ ರಸ್ತೆ	1.05	7.20	ಬ್ಯಾಟರಾಯನಪುರ
೩೦ಡ್ಲು ವೃತ್ತದಿಂದ ನಂಜಪ್ಪ ವೃತ್ತ	0.94	7.50	ಬ್ಯಾಟರಾಯನಪುರ
ಎಚ್‌ಬಿಆರ್ ವಾರ್ಡ್‌ನ ದೋಬಿಘಾಟ್‌ನಿಂದ ಹೊರ ವರ್ತುಲ ರಸ್ತೆ	1.76	15.20	ಸರ್ವಜ್ಞನಗರ
ವಿಲ್ಸನ್ ಗಾರ್ಡನ್‌ನ ಬಿಟಿಎಸ್ ರಸ್ತೆ	0.28	1.90	ಚಿಕ್ಕಪೇಟೆ

ಉಳಿತಾಯ ಅಲ್ಲ; ಬದಲಾದ ಕಾಮಗಾರಿ

ಉಳಿತಾಯ ಮೊತ್ತದಲ್ಲಿ ಜ್ಞಾನಭಾರತಿ ಆವರಣದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಸುವುದರಿಂದ ಮರು ಟೆಂಡರ್ ಆಹ್ವಾನಿಸುವ ಅಗತ್ಯವಿಲ್ಲ ಎಂಬುದು ಬಿಬಿಎಂಪಿ ವಾದ.

‘ಆದರೆ, ನಾಲ್ಕು ಕಾಮಗಾರಿಗಳ ಮೊತ್ತವನ್ನು ಇಲ್ಲಿಗೆ ಬಳಸಲಾಗುತ್ತಿದೆ. ಹೀಗಾಗಿ, ಟೆಂಡರ್ ಪ್ರಕ್ರಿಯೆ ನಡೆಸಲೇಬೇಕು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಿಂದ ವಿನಾಯಿತಿ ಪಡೆದುಕೊಳ್ಳಲು ಕೆಲ ಅಧಿಕಾರಿಗಳು ದಿಕ್ಕು ತಪ್ಪಿಸುತ್ತಿದ್ದಾರೆ’ ಎಂದು ಬಿಬಿಎಂಪಿಯ ಹಿರಿಯ ಎಂಜಿನಿಯರ್ ಒಬ್ಬರು ಹೇಳಿದರು.



ಜಿಟಿಜಿಟಿ ಮಳೆ ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಶುಕ್ರವಾರ ಸುರಿದ ಜಿಟಿಜಿಟಿ ಮಳೆಯಲ್ಲಿ ಯುವಕ–ಯುವತಿಯರು ಛತ್ರಿ ಹಿಡಿದು ಸಾಗಿದರು –ಪ್ರಜಾವಾಣಿ ಚಿತ್ರ

‘ಅತಿ ದಟ್ಟಣೆ ಕಾರಿಡಾರ್ ಹೆಸರಿನಲ್ಲಿ ಲೂಟಿಗೆ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 12 ಅತಿ ದಟ್ಟಣೆಯ ಕಾರಿಡಾರ್ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹೆಸರಿನಲ್ಲಿ ಬಿಜೆಪಿ ಸರ್ಕಾರ ನೂರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಮಾಜಿ ಮೇಯರ್‌ಗಳೊಂದಿಗೆ ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ‘191 ಕಿ.ಮೀ. ಉದ್ದ ರಸ್ತೆಗಳನ್ನು ₹1,120 ಕೋಟಿ ವೆಚ್ಚದಲ್ಲಿ ನಿರ್ಮಿಸುವ ಮತ್ತು ಐದು ವರ್ಷಗಳ ನಿರ್ವಹಣೆಗೆ ಹೆಚ್ಚುವರಿಯಾಗಿ ₹787 ಕೋಟಿ ನಿಗದಿಪಡಿಸುವ ಪ್ರಸ್ತಾವವನ್ನು ಹಿಂದೆ ತಡೆ ಹಿಡಿಯಲಾಗಿತ್ತು. ಈಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದಿಢೀರನೆ ಕಡತಗಳನ್ನು ತರಿಸಿಕೊಂಡಿದ್ದು, ಅನುಮೋದನೆ ನೀಡಲು ಹೊರಟಿದ್ದಾರೆ’ ಎಂದರು.

ರಸ್ತೆ ನಿರ್ಮಿಸಿದ ಗುತ್ತಿಗೆದಾರರೇ ಕನಿಷ್ಠ ಎರಡು ವರ್ಷಗಳವರೆಗೆ ನಿರ್ವಹಣೆಯನ್ನೂ ಮಾಡಬೇಕೆನ್ನುವ ನೀತಿ ದೇಶದಲ್ಲಿ ಜಾರಿಯಲ್ಲಿದೆ. ಆದರೆ, ಬಿಬಿಎಂಪಿಯ 12 ಅತಿ ದಟ್ಟಣೆ ಕಾರಿಡಾರ್‌ಗಳ ವಿಚಾರದಲ್ಲಿ ಈ ನಿಯಮ ಅನ್ವಯವಾಗುತ್ತಿಲ್ಲ. ರಸ್ತೆ ನಿರ್ಮಾಣಕ್ಕೆ ಅನುದಾನ ನೀಡುವುದರ ಜತೆಗೆ ನಿರ್ವಹಣೆಗೂ ಪ್ರತ್ಯೇಕ ಹಣ ಒದಗಿಸಲಾಗುತ್ತಿದೆ. ಇದರ ಹಿಂದೆ ದೊಡ್ಡ ಅವ್ಯವಹಾರ ಇದೆ ಎಂದು ದೂರಿದರು.



ರಾಮಲಿಂಗಾ ರೆಡ್ಡಿ

ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಯನ್ನು ಪಾಲಿಕೆಯ ಬದಲಿಗೆ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಡಿಸಿಎಲ್) ನೀಡಲಾಗಿದೆ. ಕಳಪೆ ಕಾಮಗಾರಿಯ ಕಾರಣಕ್ಕಾಗಿ ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸು ಮಾಡಿರುವ ಗುತ್ತಿಗೆದಾರರಿಗೆ ಈ ಕಾಮಗಾರಿಗಳ ಗುತ್ತಿಗೆ ನೀಡುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ಕೆಆರ್‌ಡಿಸಿಎಲ್‌ಗೆ ಪ್ರತಿ ವರ್ಷ ₹ 150 ಕೋಟಿ ನೀಡುವುದು ಸರಿಯಲ್ಲ. ಈ ರಸ್ತೆಗಳ ಅಭಿವೃದ್ಧಿ ಹೆಸರಿನಲ್ಲಿ ಪೋಲು ಅನುದಾನವನ್ನು ಬೆಂಗಳೂರಿನ ರಸ್ತೆಗಳ ಗುಂಡಿ ಮುಚ್ಚಲು ಬಳಸಬೇಕು ಎಂದು ಆಗ್ರಹಿಸಿದರು.

ಅವೈಜ್ಞಾನಿಕವಾಗಿ ವಾರ್ಡ್ ವಿಂಗಡಣೆ: ಬಿಬಿಎಂಪಿ ಆಡಳಿತ ನಿರ್ವಹಣೆಗಾಗಿ ರೂಪಿಸಿರುವ ಪ್ರತ್ಯೇಕ ಕಾಯ್ದೆಯ ಪ್ರಕಾರ, ಪಾಲಿಕೆಯ ವಾರ್ಡ್‌ಗಳ ಗರಿಷ್ಠ ಮಿತಿಯನ್ನು 243ಕ್ಕೆ ಏರಿಕೆ ಮಾಡಲು ಸರ್ಕಾರ ಈಗ ಮುಂದಾಗಿದೆ. ವಾರ್ಡ್‌ಗಳ ಪುನರ್ ವಿಂಗಡಣೆ ಆಯೋಗ ರಚಿಸಲಾಗಿದೆ. ಬಿಜೆಪಿಗೆ ಅನುಕೂಲವಾಗುವ ರೀತಿಯಲ್ಲಿ ವಾರ್ಡ್‌ಗಳ ಪುನರ್ ವಿಂಗಡಣೆ ಪ್ರಕ್ರಿಯೆ ನಡೆಯುತ್ತಿದೆ ಎಂದು ಅವರು ದೂರಿದರು.

ಬೆಂಗಳೂರು ನಗರದ ಉಸ್ತುವಾರಿ ಮುಖ್ಯಮಂತ್ರಿ ಬಳಿಯಲ್ಲೇ ಇದೆ. ನಗರದ ಅಭಿವೃದ್ಧಿ ಕುರಿತು ಚರ್ಚಿಸಲು ಮುಖ್ಯಮಂತ್ರಿಯವರು ಈವರೆಗೂ ಸಮಯ ಮೀಸಲಿಟ್ಟಿಲ್ಲ. ಎರಡು ಬಾರಿ ನಗರ ಪ್ರದಕ್ಷಿಣೆ ನಡೆಸಿರುವುದರ ಹೊರತಾಗಿ ಯಾವುದೇ ಕ್ರಮ ಕೈಗೊಂಡಿಲ್ಲ. ಅವರಿಗೆ ಸಾಧ್ಯವಾಗದೇ ಇದ್ದರೆ ಬೆಂಗಳೂರು ನಗರದ ಉಸ್ತುವಾರಿಗೆ ಬೇರೊಬ್ಬ ಸಚಿವರನ್ನು ನಿಯೋಜಿಸಲಿ ಎಂದು ಅವರು ಆಗ್ರಹಿಸಿದರು.

ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್, ಮಾಜಿ ಮೇಯರ್‌ಗಳಾದ ಎಂ.ರಾಮಚಂದ್ರಪ್ಪ, ಜಿ. ಪದ್ಮಾವತಿ, ಬಿ.ಎನ್.ಮಂಜುನಾಥ್ ರೆಡ್ಡಿ, ಆರ್. ಸಂಪತ್ ರಾಜ್, ಕೆ.ಚಂದ್ರಶೇಖರ್, ಗಂಗಾಂಬಿಕಾ ಮಲ್ಲಿಕಾರ್ಜುನ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಸುದ್ದಿ 2 ನಿಮಿಷ

ಬಿಎಂಟಿಸಿ ‘ಸಹಾಯ ಹಸ್ತ’ ಪಾಸ್

ಬೆಂಗಳೂರು: ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ‘ಸಹಾಯ ಹಸ್ತ’ ಬಸ್ ಪಾಸ್‌ಗಳನ್ನು ನಗರದ 20 ಕಡೆ ವಿತರಿಸಲಾಗುವುದು ಎಂದು ಬಿಎಂಟಿಸಿ ತಿಳಿಸಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಶಿವಾಜಿನಗರ, ವೈಟ್‌ಫೀಲ್ಡ್ ಟಿಟಿಎಂಸಿ, ಯಶವಂತಪುರ ಟಿಟಿಎಂಸಿ, ಬನಶಂಕರಿ, ಜಯನಗರ, ದೊಮ್ಮಲೂರು, ಕೋರಮಂಗಲ, ಕೆಂಗೇರಿ, ಯಲಹಂಕ, ಹೊಸಕೋಟೆ, ಸುಮ್ಮನಹಳ್ಳಿ ಡಿಪೊ, ಕೆ.ಆರ್.ಪುರ ಡಿಪೊ, ಎಚ್‌ಎಸ್‌ಆರ್ ಲೇಔಟ್ ಡಿಪೊ, ಹೆಬ್ಬಾಳ ಡಿಪೊ, ನೆಲಮಂಗಲ ಡಿಪೊ, ಬಗಲಗುಂಟೆಯ ಕಾರ್ಮಿಕ ಇಲಾಖೆ ಕಚೇರಿ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಕೇಂದ್ರ ಕಚೇರಿಯಲ್ಲಿ ಪಾಸ್‌ಗಳನ್ನು ವಿತರಿಸಲಾಗುವುದು.

ಗುರುತಿನ ಚೀಟಿ, ಆಧಾರ್ ಕಾರ್ಡ್, ಭಾವಚಿತ್ರಗಳ ಸಹಿತ ದಾಖಲೆಗಳನ್ನು ಸಲ್ಲಿಸಿ ಪಾಸ್ ಪಡೆಯಬಹುದು ಎಂದು ತಿಳಿಸಿದೆ.

‘ಫಿನ್‌ಟೆಕ್‌ಗಳಿಗೆ ಅಗತ್ಯ ನೆರವು’



ಬೆಂಗಳೂರು: ‘ಫಿನ್‌ಟೆಕ್ ಕಂಪನಿಗಳು ರಾಜ್ಯದಲ್ಲಿ ಹೂಡಿಕೆ ಮಾಡಲು ಮುಂದೆ ಬಂದರೆ, ಅಗತ್ಯವಿರುವ ಎಲ್ಲ ರೀತಿಯ ನೆರವು ನೀಡಲಾಗುವುದು’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ತಿಳಿಸಿದರು.

ಇನ್‌ಸ್ಟಿಟ್ಯೂಟ್ ಆಫ್ ವ್ಯಾಲ್ಯೂವರ್ಸ್ (ಐಐವಿ) ಹಾಗೂ ಭಾರತೀಯ ಹಣಕಾಸು ನಷ್ಟ ಮತ್ತು ದಿವಾಳಿ ಮಂಡಳಿ (ಐಬಿಬಿಐ) ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಭಾರತೀಯ ಮೌಲ್ಯಮಾಪಕರ ಸಮಾವೇಶ’ ಹಾಗೂ ‘ಮೌಲ್ಯಮಾಪನ ಪರಿಸರ ವ್ಯವಸ್ಥೆಯನ್ನು ಪರಿವರ್ತಿಸುವುದು’ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಕರ್ನಾಟಕ ದೇಶದಲ್ಲೇ ಅತ್ಯಂತ ಜನಪ್ರಿಯ ಹಣಕಾಸು ತಂತ್ರಜ್ಞಾನ ಕಂಪನಿಗಳ ನೆಲೆಯಾಗಿದೆ. ರಾಜ್ಯದಲ್ಲಿ ಅತ್ಯುತ್ತಮ ಆರ್ಥಿಕ ಕೈಗಾರಿಕಾ ಪರಿಸರ ವ್ಯವಸ್ಥೆ ನಿರ್ಮಿಸುವುದು ನಮ್ಮ ಮೊದಲ ಆದ್ಯತೆ. ಮೂಲಸೌಕರ್ಯ ಮತ್ತು ಉದಯೋನ್ಮುಖ ಕೈಗಾರಿಕೆಗಳಲ್ಲಿ ಕರ್ನಾಟಕವನ್ನು ಅಗ್ರಸ್ಥಾನಕ್ಕೆ ಏರಿಸುವುದು ನಮ್ಮ ಗುರಿ’ ಎಂದರು.

‘ಉದ್ಯಮಶೀಲ ಪರಿಸರ ವ್ಯವಸ್ಥೆಯು ಯುವ ವೃತ್ತಿಪರರು ಉದ್ಯೋಗದಾತರಾಗಲು ಹಾಗೂ ವಿವಿಧ ಕ್ಷೇತ್ರಗಳನ್ನು ಅನ್ವೇಷಿಸಲು ಅನುವು ಮಾಡಿಕೊಡುತ್ತದೆ. ಹಾಗಾಗಿ, ಉದ್ಯೋಗದಾತರಾಗಿ ರಾಜ್ಯದಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಸರ್ಕಾರ ಬಯಸುತ್ತದೆ’ ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್.ವೇಣುಗೋಪಾಲ್ ಹಾಗೂ ಇತರರು ಭಾಗವಹಿಸಿದ್ದರು.

ಜಿಎಸ್‌ಟಿ ವಂಚನೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಲವು ಪ್ರಮುಖ ಕಾಮಗಾರಿಗಳ ಗುತ್ತಿಗೆ ನಿರ್ವಹಿಸಿರುವ ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ, ಜಿಎಸ್‌ಟಿ ವಂಚನೆ ಮಾಡಿರುವ ಆರೋಪದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ನೋಟಿಸ್ ನೀಡಿದೆ.

ಪದ್ಮನಾಭನಗರದಲ್ಲಿನ ಗುತ್ತಿಗೆದಾರರ ಕಚೇರಿಗೆ ಅ.12ರಂದು ಭೇಟಿ ನೀಡಿದ್ದ ಇಲಾಖೆಯ ಅಧಿಕಾರಿಗಳ ತಂಡ ದಾಖಲೆಗಳನ್ನು ಪರಿಶೀಲನೆ ನಡೆಸಿತ್ತು.

ಜುಲೈ 2017ರಿಂದ ಆಗಸ್ಟ್ 2021ರ ಅವಧಿಯಲ್ಲಿ ತೆರಿಗೆ ಪಾವತಿಸಬೇಕಿದ್ದರೂ, ವಿನಾಯಿತಿ ನೀಡಲಾಗಿದೆ ಎಂದು ಗುತ್ತಿಗೆದಾರರು ತಪ್ಪಾಗಿ ಘೋಷಿಸಿಕೊಂಡಿದ್ದಾರೆ.

ಸಂಬಂಧಪಟ್ಟವರಿಂದ (ಬಿಬಿಎಂಪಿ) ಗುತ್ತಿಗೆದಾರರು ತೆರಿಗೆ ಮೊತ್ತವನ್ನು ಬಿಲ್ ಜತೆಗೆ ಪಡೆದುಕೊಂಡಿದ್ದು, ಅದನ್ನು ಇಲಾಖೆಗೆ ಪಾವತಿಸಿಲ್ಲ. ಮುಂದಿನ ಆರು ತಿಂಗಳಲ್ಲಿ ಬಾಕಿ ತೆರಿಗೆಯನ್ನು ಪಾವತಿಸಬೇಕು. ಇಲ್ಲದಿದ್ದರೆ ಶೇ 18ರಷ್ಟು ಬಡ್ಡಿಯೂ ತೆರಿಗೆ ಮೊತ್ತಕ್ಕೆ ಸೇರಿಕೊಳ್ಳಲಿದೆ ಎಂದು ತೆರಿಗೆ ಇಲಾಖೆ ದಕ್ಷಿಣ ವಲಯದ ಸಹಾಯಕ ಆಯುಕ್ತರು (ಜಾರಿ) ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಹೆಚ್ಚುವರಿ ಕಾಮಗಾರಿಗಳ ನೆಪದಲ್ಲಿ ಮೂಲ ಗುತ್ತಿಗೆ ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚು ಮೊತ್ತದ ಕಾಮಗಾರಿಯನ್ನು ಇದೇ ಗುತ್ತಿಗೆದಾರರಿಗೆ ವಹಿಸುವ ಮೂಲಕ ಬಿಬಿಎಂಪಿಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಆಶಯವನ್ನೇ ಗಾಳಿಗೆ ತೂರಿದೆ ಎಂಬ ಆರೋಪವೂ ಇದೆ. ಪಶ್ಚಿಮ ಕಾರ್ಡ್ ರಸ್ತೆಯಲ್ಲಿನ ಮೇಲ್ಸೇತುವೆ ಕಾಮಗಾರಿಗಳ ಪ್ಯಾಕೇಜ್ ಗುತ್ತಿಗೆಯನ್ನು ಟೆಂಡರ್ ಕರೆಯದೇ ಇದೇ ಕಂಪನಿಗೆ ನೀಡಲಾಗಿತ್ತು. ಶಿವಾನಂದ ವೃತ್ತದ ಉಕ್ಕಿನ ಸೇತುವೆ ಕಾಮಗಾರಿಯನ್ನೂ ಇದೇ ಕಂಪನಿ ನಿರ್ವಹಿಸುತ್ತಿದೆ.

ಇತ್ತೀಚೆಗೆ ಈ ಕಂಪನಿ ನಿರ್ವಹಿಸಿರುವ ಕಾಮಗಾರಿ

ಕಾಮಗಾರಿ	ಅಂದಾಜು ಮೊತ್ತ (₹ ಕೋಟಿಗಳಲ್ಲಿ)	ಗುತ್ತಿಗೆ ಮೊತ್ತ (₹ ಕೋಟಿಗಳಲ್ಲಿ)
ಪದ್ಮನಾಭನಗರದ ಚೆನ್ನಮ್ಮ ಮೇಲ್ಸೇತವೆ	26.42	35.80
ಶಿವಾನಂದ ವೃತ್ತದ ಉಕ್ಕಿನ ಸೇತುವೆ	14.48	19.86
ಕಾರ್ಡ್ ರಸ್ತೆಯ ಮಂಜುನಾಥನಗರ ಮೇಲ್ಸೇತುವೆ	12.96	18.18
ಕಾರ್ಡ್ ರಸ್ತೆಯ ಶಿವನಗರದಲ್ಲಿನ ಇಂಟಗ್ರೇಡೆಡ್ ಅಂಡರ್ ಪಾಸ್	35.45	49.77
ಕಾರ್ಡ್ ರಸ್ತೆಯಲ್ಲಿನ ಬಸವೇಶ್ವರನಗರದ ಮೇಲ್ಸೇತುವೆ	15.59	21.19
ಶಿವನಗರ 8ನೇ ಮತ್ತು 1ನೇ ಮುಖ್ಯ ರಸ್ತೆಯ ಕೂಡ ರಸ್ತೆಗೆ ಮೇಲ್ಸೇತುವೆ	47.85	71.98
72ನೇ ಅಡ್ಡರಸ್ತೆಯಲ್ಲಿ ಮೇಲ್ಸೇತುವೆ	24.30	33.71
ಬಸವೇಶ್ವರನಗರ ಜಂಕ್ಷನ್‌ನಲ್ಲಿ ಹೆಚ್ಚುವರಿ ಮೇಲ್ಸೇತುವೆ	18.40	23.62

ವಾಣಿಜ್ಯ ತೆರಿಗೆ ಇಲಾಖೆಯವರು ಕೆಲವು ಸ್ಪಷ್ಟನೆಗಳನ್ನು ಕೇಳಿದ್ದರು. ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ನಾವು ಜಿಎಸ್‌ಟಿ ವಂಚನೆ ಮಾಡಿಲ್ಲ.

ರಘುನಾಥ ನಾಯ್ಡು, ಗುತ್ತಿಗೆದಾರ

ಫೈನಾನ್ಶಿಯರ್ ಆತ್ಮಹತ್ಯೆ

ಬೆಂಗಳೂರು: ಯಲಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ತಮ್ಮ ಕಚೇರಿಯಲ್ಲಿ ಫೈನಾನ್ಶಿಯರ್ ರಾಜಣ್ಣ ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜೆ.ಪಿ. ನಗರ 9ನೇ ಹಂತದ ಅಂಜನಾಪುರ ನಿವಾಸಿ ರಾಜಣ್ಣ, ತಮ್ಮದೇ ಕಚೇರಿ ತೆರೆದು ಹಲವು ವರ್ಷಗಳಿಂದ ಫೈನಾನ್ಸ್ ವ್ಯವಹಾರ ಮಾಡುತ್ತಿದ್ದರು. ಸಾವಿನ ಬಗ್ಗೆ ಸಂಬಂಧಿಕರು ದೂರು ನೀಡಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾಜಣ್ಣ ಚೀಟಿ ವ್ಯವಹಾರ ಸಹ ನಡೆಸುತ್ತಿದ್ದರೆಂದು ಗೊತ್ತಾಗಿದೆ. ಅವರು ಪರಿಚಯಸ್ಥರೊಬ್ಬರಿಗೆ ₹ 8 ಲಕ್ಷ ನೀಡಬೇಕಿತ್ತು. ಹಣ ಸಿಗದಿದ್ದರಿಂದ ಪರಿಚಯಸ್ಥ, ಪೊಲೀಸರಿಗೆ ದೂರು ನೀಡಿದ್ದ. ರಾಜಣ್ಣ ಅವರನ್ನು ಪೊಲೀಸರು ವಿಚಾರಣೆ ಸಹ ನಡೆಸಿದ್ದರು. ಈ ಸಂಗತಿ ಸಂಬಂಧಿಕರಿಂದ ತಿಳಿದುಬಂದಿದೆ. ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದ ರಾಜಣ್ಣ, ಹಣ ಹೊಂದಿಸಲು ಸಾಧ್ಯವಾಗಿರಲಿಲ್ಲ. ₹ 8 ಲಕ್ಷ ಪಾವತಿಸುವ ಒತ್ತಡವೂ ಹೆಚ್ಚಾಗಿತ್ತು. ಇದರಿಂದ ನೊಂದ ಅವರು, ಆತ್ಮಹತ್ಯೆಗೆ ಶರಣಾಗಿರುವ ಸಾಧ್ಯತೆ ಇದೆ.’ ಎಂದೂ ಮೂಲಗಳು ತಿಳಿಸಿವೆ.

ಪಬ್‌ನಲ್ಲಿ ಕಿರಿಕ್: ಬಾಟಲಿಯಿಂದ ಹಲ್ಲೆ ಆರೋಪ

ಬೆಂಗಳೂರು: ‘ಕ್ಷುಲ್ಲಕ ಕಾರಣಕ್ಕೆ ವಿಡಿಯೊ ತೆಗೆದಿದ್ದನ್ನು ಪ್ರಶ್ನಿಸಿದ್ದಕ್ಕೆ ಅಪರಿಚಿತರ ತಂಡವೊಂದು, ಬಿಯರ್ ಬಾಟಲಿಯಿಂದ ನನ್ನ ಮೇಲೆ ಹಲ್ಲೆ ಮಾಡಿದೆ’ ಎಂದು ಆರೋಪಿಸಿ ‘ಬಿಗ್‌ಬಾಸ್’ ರಿಯಾಲಿಟಿ ಶೋ ಸ್ಪರ್ಧಿ ಕಿರಿಕ್ ಕೀರ್ತಿ, ಸದಾಶಿವನಗರ ಠಾಣೆಗೆ ದೂರು ನೀಡಿದ್ದಾರೆ.

‘ಸದಾಶಿವನಗರ ಠಾಣೆ ವ್ಯಾಪ್ತಿಯ ಪಬ್‌ವೊಂದರಲ್ಲಿ ಗುರುವಾರ ರಾತ್ರಿ ನಡೆದಿರುವ ಘಟನೆ ಬಗ್ಗೆ ಕೀರ್ತಿಕುಮಾರ್ ಉರ್ಫ್ ಕಿರಿಕ್ ಕೀರ್ತಿ ದೂರು ಸಲ್ಲಿಸಿದ್ದಾರೆ. ಅಕ್ರಮ ಕೂಟ ರಚಿಸಿಕೊಂಡು ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿರುವ ಆರೋಪದಡಿ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ನೇಹಿತರ ಜೊತೆಯಲ್ಲಿ ಕೀರ್ತಿಕುಮಾರ್ ಪಬ್‌ಗೆ ಹೋಗಿದ್ದರು. ಅವರ ಟೇಬಲ್ ಸಮೀಪದ ಮತ್ತೊಂದು ಟೇಬಲ್‌ನಲ್ಲಿ ಆರೋಪಿಗಳು ಕುಳಿತಿದ್ದರು. ಕೀರ್ತಿಕುಮಾರ್ ಹಾಗೂ ಇತರರು ಸೆರೆಯಾಗುವ ರೀತಿಯಲ್ಲಿ ಆರೋಪಿಯೊಬ್ಬ, ವಿಡಿಯೊ ಚಿತ್ರೀಕರಿಸಿದ್ದ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಕೀರ್ತಿಕುಮಾರ್, ಆರೋಪಿಗಳ ಬಳಿ ಹೋಗಿ ಪ್ರಶ್ನಿಸಿದ್ದರು. ಮಾತಿನ ಚಕಮಕಿ ನಡೆದು, ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು.’

‘ಕೋಪಗೊಂಡ ಆರೋಪಿಗಳು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಕೀರ್ತಿ ಅವರ ತಲೆಗೆ ಬಿಯರ್ ಬಾಟಲಿಯಿಂದ ಹೊಡೆದಿದ್ದರು ಎನ್ನಲಾಗಿದೆ. ಗಾಯಗೊಂಡ ಕೀರ್ತಿ, ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದಾರೆ. ಕೃತ್ಯದ ನಂತರ ಆರೋಪಿಗಳು ಪರಾರಿಯಾಗಿದ್ದಾರೆ. ಕುಡಿದ ಮತ್ತಿನಲ್ಲಿ ಗಲಾಟೆ ನಡೆದಿರುವುದು ಗೊತ್ತಾಗಿದೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸಿ.ಸಿ ಟಿ.ವಿ ದೃಶ್ಯ ಪರಿಶೀಲನೆ: ‘ಪ್ರಕರಣ ದಾಖಲಾಗುತ್ತಿದ್ದಂತೆ ಪಬ್‌ಗೆ ಹೋಗಿ ಮಾಹಿತಿ ಕಲೆಹಾಕಲಾಯಿತು. ಸಿಸಿಟಿವಿ ಕ್ಯಾಮೆರಾ ಡಿವಿಆರ್ ಸುಪರ್ದಿಗೆ ಪಡೆಯಲಾಗಿದ್ದು, ದೃಶ್ಯಗಳ ಪರಿಶೀಲನೆ ನಡೆಸಲಾಗುತ್ತಿದೆ. ಆರೋಪಿಗಳ ಹೆಸರು ಹಾಗೂ ವಿಳಾಸ ಸದ್ಯಕ್ಕೆ ಗೊತ್ತಾಗಿಲ್ಲ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಬಿಬಿಎಂಪಿ ಆವರಣದಲ್ಲೇ ₹ 5 ಲಕ್ಷ ಕಳವು

ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ನಿಲ್ಲಿಸಿದ್ದ ಮರ್ಸಿಡಿಸ್ ಬೆನ್ಜ್ ಕಾರಿನ ಕಿಟಕಿ ಗಾಜು ಒಡೆದು ₹ 5 ಲಕ್ಷ ಕಳವು ಮಾಡಲಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಶುಕ್ರವಾರ ಬೆಳಿಗ್ಗೆ ಈ ಘಟನೆ ನಡೆದಿದೆ. ಕಾರಿನ (ಕೆಎ 03 ಎನ್‌ಇ 3420) ಮಾಲೀಕ ದೂರು ನೀಡಿದ್ದಾರೆ. ಘಟನಾ ಸ್ಥಳದಲ್ಲಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಿಬಿಎಂಪಿ ಮುಖ್ಯ ಕಚೇರಿಗೆ ಬಂದಿದ್ದ ಮಾಲೀಕ, ಪಾರ್ಕಿಂಗ್ ಜಾಗದಲ್ಲಿ ಕಾರು ನಿಲ್ಲಿಸಿ ಹೋಗಿದ್ದರು. ಕಾರಿನೊಳಗೆ ₹ 5 ಲಕ್ಷ ನಗದು ಇದ್ದ ಬ್ಯಾಗ್ ಇತ್ತು. ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡ ಮಾಲೀಕ, ನಂತರ ಕಾರಿನ ಬಳಿ ಬಂದಿದ್ದರು. ಕಿಟಕಿ ಗಾಜು ಒಡೆದಿದ್ದು ನೋಡಿ, ಪರಿಶೀಲಿಸಿದಾಗ ಕಾರಿನಲ್ಲಿ ಹಣದ ಬ್ಯಾಗ್ ಇರಲಿಲ್ಲ. ನಂತರ, ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದೂ ತಿಳಿಸಿವೆ.

ಜಲಮಂಡಳಿ ಫೋನ್ ಇನ್ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇದೇ 4ರಂದು ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅಹವಾಲು ಆಲಿಸಲಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆಗಳಿಂದ ತ್ಯಾಜ್ಯ ನೀರು ಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ಚಾಕು ತೋರಿಸಿ ಸುಲಿಗೆ: ಆರೋಪಿ ಬಂಧನ

ಬೆಂಗಳೂರು: ವಸಂತನಗರದ ಅಂಗಡಿಯೊಂದಕ್ಕೆ ನುಗ್ಗಿ ಮಾಲೀಕರಿಗೆ ಚಾಕು ತೋರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಸಿದ್ದಿಕ್ ಅಲಿಯಾಸ್ ಬರ್ನಲ್‌ನನ್ನು (27) ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ವೈಟ್‌ಫೀಲ್ಡ್ ಚನ್ನಸಂದ್ರದ ಉಡುಪಿ ಗಾರ್ಡನ್ ನಿವಾಸಿ ಸಿದ್ದಿಕ್, ನ. 28ರಂದು ಅಂಗಡಿಗೆ ನುಗ್ಗಿ ಸುಲಿಗೆ ಮಾಡಿದ್ದ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಪುರಾವೆಗಳನ್ನು ಸಂಗ್ರಹಿಸಿ ಆರೋಪಿಯನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ ಚಾಕು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಗರದ ವಿವಿಧ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿದ್ದ. ಆತನ ವಿರುದ್ಧ ಇದುವರೆಗೂ 15 ಪ್ರಕರಣಗಳು ದಾಖಲು ಆಗಿದ್ದವು. ಜೈಲಿಗೂ ಹೋಗಿದ್ದ ಆತ, ಜಾಮೀನು ಮೇಲೆ ಹೊರಗೆ ಬಂದಿದ್ದ. ಆತನ ಬಂಧನಕ್ಕೆ ಜಾಮೀನು ರಹಿತ ವಾರೆಂಟ್ ಸಹ ಜಾರಿಯಾಗಿತ್ತು.’ ಎಂದೂ ತಿಳಿಸಿದರು.

ಸುಳ್ಳು ಹೇಳಿದ್ದ: ‘ಆರೋಪಿ ವಾಸಸ್ಥಳದ ಬಗ್ಗೆ ಮಾಹಿತಿ ಕಲೆ ಹಾಕಲಾಗಿತ್ತು. ಸ್ಥಳಕ್ಕೆ ಹೋದ ಪೊಲೀಸರ ತಂಡ, ಆತನನ್ನು ವಶಕ್ಕೆ ಪಡೆದಿತ್ತು. ಗಂಟಲು ಹಿಡಿದು ನರಳಾಗಿದ್ದ ಆರೋಪಿ, ಬ್ಲೇಡ್ ನುಂಗಿರುವುದಾಗಿ ಹೇಳಿದ್ದ. ಗಾಬರಿಗೊಂಡ ಪೊಲೀಸರು, ಆತನನ್ನು ಆಸ್ಪತ್ರೆಗೆ ಕರೆದೊಯ್ದು ಸ್ಕ್ಯಾನಿಂಗ್ ಮಾಡಿಸಿದ್ದರು. ಆದರೆ, ಯಾವುದೇ ಬ್ಲೇಡ್ ಇರಲಿಲ್ಲ. ಆರೋಪಿ ಸುಳ್ಳು ಹೇಳಿದ್ದ ಎಂಬುದು ಗೊತ್ತಾಯಿತು’ ಎಂದೂ ತಿಳಿಸಿವೆ.

ಕಾಂಗ್ರೆಸ್ ಮುಖಂಡನಿಗೆ ನಿರೀಕ್ಷಣಾ ಜಾಮೀನು

ಬೆಂಗಳೂರು: ಯಲಹಂಕ ಕ್ಷೇತ್ರದ ಬಿಜೆಪಿ ಶಾಸಕ ಎಸ್. ಆರ್. ವಿಶ್ವನಾಥ್ ಕೊಲೆಗೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ, ಕಾಂಗ್ರೆಸ್ ಮುಖಂಡ ಗೋಪಾಲ ಕೃಷ್ಣ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರಾಗಿದೆ.

ವಿಶ್ವನಾಥ್ ನೀಡಿದ್ದ ದೂರಿನನ್ವಯ ರಾಜಾನುಕುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಆರೋಪಿಗಳಲ್ಲಿ ಒಬ್ಬನಾದ ಕುಳ್ಳ ದೇವರಾಜ್‌ನನ್ನು ಗುರುವಾರ ಬಂಧಿಸಲಾಗಿತ್ತು. ಬಂಧನ ಭೀತಿಯಲ್ಲಿದ್ದ ಗೋಪಾಲಕೃಷ್ಣ, ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ, ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ದೇವರಾಜ್‌ಗೂ ಜಾಮೀನು: ‘ಬಂಧಿತ ಆರೋಪಿ, ಕುಳ್ಳ ದೇವರಾಜ್‌ಗೂ ನ್ಯಾಯಾಲಯ ಷರತ್ತು ಬದ್ಧ ಜಾಮೀನು ನೀಡಿದೆ. ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗುವಂತೆ ಷರತ್ತು ವಿಧಿಸಿದೆ’ ಎಂದೂ ಮೂಲಗಳು ತಿಳಿಸಿವೆ.

ಬೆಂಗಳೂರು ವಿ.ವಿ ಕುಲಪತಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಕುಲಪತಿ ಕೆ.ಆರ್. ವೇಣುಗೋಪಾಲ್ ಮತ್ತು ಪ್ರೊ. ಎಂ. ಕೊಟ್ರೇಶ್ ಅವರ ವಿರುದ್ಧ ದೂರು ನೀಡಲಾಗಿದೆ.

ವರ್ಗಾವಣೆಗೊಂಡಿರುವ ಕುಲಸಚಿವರಾದ ಕೆ. ಜ್ಯೋತಿ ಅವರು ಈ ಬಗ್ಗೆ ಜ್ಞಾನಭಾರತಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಐಎಎಸ್ ಅಧಿಕಾರಿಯಾಗಿರುವ ಜ್ಯೋತಿ ಅವರನ್ನು ವರ್ಗಾವಣೆ ಮಾಡಿ ನವೆಂಬರ್ 26ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಆದೇಶ ಹೊರಡಿಸಿತ್ತು. ಇವರ ಸ್ಥಾನಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಎಂ. ಕೊಟ್ರೇಶ್ ಅವರನ್ನು ನೇಮಿಸಲಾಗಿತ್ತು.

ಆದರೆ, ತಾವು ಅಧಿಕಾರ ಹಸ್ತಾಂತರಿಸದಿದ್ದರೂ ಕೊಟ್ರೇಶ್ ಅವರು ತಮ್ಮ ಕಚೇರಿಗೆ ಅನಧಿಕೃತವಾಗಿ ಪ್ರವೇಶಿಸಿ ಕಾರ್ಯನಿರ್ವಹಿಸಿದ್ದಾರೆ ಎಂದು ಜ್ಯೋತಿ ಅವರು ದೂರಿನಲ್ಲಿ ತಿಳಿಸಿದ್ದಾರೆ.

‘ಡಿ.2ರಂದು ಸಂಜೆ ಸುಮಾರು 6.14ರ ಸಮಯದಲ್ಲಿ ನಾನು ಕಚೇರಿಯಲ್ಲಿ ಇಲ್ಲದ ಸಮಯದಲ್ಲಿ ಅನಧಿಕೃತವಾಗಿ ಪ್ರವೇಶಿಸಿ ನನ್ನ ಸುಪರ್ದಿಯಲ್ಲಿದ್ದ ಕಡತಗಳು ಮತ್ತು ಪತ್ರಗಳನ್ನು ಪಡೆದು ಕೊಟ್ರೇಶ್ ಕಾರ್ಯನಿರ್ವಹಿಸಿದ್ದಾರೆ ಎಂದು ಸಿಬ್ಬಂದಿ ತಿಳಿಸಿದ್ದಾರೆ. ಈ ವಿಷಯ ಸಿಸಿಟಿವಿ ದೃಶ್ಯಾವಳಿಗಳ ಪರಿಶೀಲನೆಯಿಂದಲೂ ಖಚಿತವಾಗಿದೆ. ಈ ಬಗ್ಗೆ ಕೊಟ್ರೇಶ್ ಅವರನ್ನು ಕೇಳಿದಾಗ, ಕುಲಪತಿ ಅವರ ಮೌಖಿಕ ನಿರ್ದೇಶನ ಮೇರೆಗೆ ಕಾರ್ಯನಿರ್ವಹಿಸಿರುವುದಾಗಿ ತಿಳಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳು ನನ್ನ ಬಳಿ ಲಭ್ಯ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ದೂರಿನ ಬಗ್ಗೆ ಪ್ರತಿಕ್ರಿಯಿಸಿರುವ ಜ್ಯೋತಿ ಅವರು, ‘ನಾನು ಇದುವರೆಗೆ ಅಧಿಕಾರ ಹಸ್ತಾಂತರಿಸಿಲ್ಲ. ಹೀಗಾಗಿ, ವಿಶ್ವವಿದ್ಯಾಲಯಕ್ಕೆ ಹೋಗುತ್ತೇನೆ. ಮುಂದಿನ ಕ್ರಮದ ಬಗ್ಗೆ ನಿರ್ದೇಶನ ನೀಡುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಸರ್ಕಾರದ ನಿರ್ದೇಶನ ಮೇರೆಗೆ ಕರ್ತವ್ಯ ನಿರ್ವಹಿಸುತ್ತೇನೆ’ ಎಂದು ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆಗಾಗಿ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಅವರಿಗೆ ಕರೆ ಮಾಡಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ಹೆಸರು ಬದಲಿಸಿ ಹೊಸ ಅವತಾರದಲ್ಲಿ ಗೇಮ್ ಬಿಡುಗಡೆ

‘ಪಬ್‌ಜಿ ಇಂಡಿಯಾ’ ನಿಯಂತ್ರಣಕ್ಕೆ ಸಿದ್ಧತೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ದೇಶದಲ್ಲಿ ನಿಷೇಧಿಸಲಾಗಿದ್ದ ‘ಪಬ್‌ಜಿ’ ಆನ್‌ಲೈನ್ ಗೇಮ್, ಹೊಸ ಅವತಾರದಲ್ಲಿ ‘ಪಬ್‌ಜಿ ಇಂಡಿಯಾ’ ಹೆಸರಿನಲ್ಲಿ ಭಾರತಕ್ಕೆ ಲಗ್ಗೆ ಇಟ್ಟಿದೆ. ಚಾಲ್ತಿಯಲ್ಲಿರುವ ಕಾನೂನು ಉಲ್ಲಂಘಿಸುತ್ತಿರುವ ಆರೋಪ ಎದುರಿಸುತ್ತಿರುವ ಗೇಮ್‌ಗೆ ರಾಜ್ಯದಲ್ಲಿ ನಿಯಂತ್ರಣ ಹೇರಲು ಗೃಹ ಇಲಾಖೆ ಸಿದ್ಧತೆ ಆರಂಭಿಸಿದೆ.

ಕೆಲ ತಿಂಗಳ ಹಿಂದಷ್ಟೇ ಚೀನಾದ 118 ಆ್ಯಪ್‌ಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿತ್ತು. ಭಾರತದಲ್ಲಿ ಕೋಟ್ಯಂತರ ಬಳಕೆದಾರರನ್ನು ಹೊಂದಿದ್ದ ಆ್ಯಪ್‌ಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದವು. ಇದಕ್ಕೆ ಪರಿಹಾರ ಕಂಡುಕೊಂಡಿರುವ ಕೆಲ ಗೇಮ್ ಆ್ಯಪ್ ಕಂಪನಿಗಳು, ‘ಇಂಡಿಯಾ’ ಹೆಸರಿನಲ್ಲಿ ಕಂಪನಿ ನೋಂದಣಿ ಮಾಡಿಸಿಕೊಂಡು ದೇಶದೊಳಗೆ ಪುನಃ ಪ್ರವೇಶಿಸಿವೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಮನ್ನಣೆ: ಕೇಂದ್ರ ಸರ್ಕಾರದ ನಿಷೇಧವಿದ್ದರೂ ಪುನಃ ಕಾರ್ಯಾಚರಣೆ ಆರಂಭಿಸಿರುವ ‘ಪಬ್‌ಜಿ ಇಂಡಿಯಾ’ ಆನ್‌ಲೈನ್ ಗೇಮ್ ಕಂಪನಿ ವಿರುದ್ಧ ವಕೀಲ ಅನಿಲ್ ಸ್ಟೀವೆನಸನ್ ಜನಗಮ್ ಎಂಬುವರು ತೆಲಂಗಾಣ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ಅರ್ಜಿ ಮನ್ನಿಸಿರುವ ಹೈಕೋರ್ಟ್, ಗೇಮ್ ನಿರ್ವಹಣೆ ಮಾಡುತ್ತಿರುವ ‘ಪಬ್‌ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್’ ಕಂಪನಿ ಹಾಗೂ ಗೇಮ್ ಅಭಿವೃದ್ಧಿಪಡಿಸಿರುವ ‘ಕ್ರಾಫ್ಟೊನ್’ ಕಂಪನಿಗೆ ನೋಟಿಸ್ ನೀಡಿದೆ. ಆ್ಯಪ್ ನಿಯಂತ್ರಣಕ್ಕೆ ಕ್ರಮಕೈಗೊಳ್ಳದ ಕೇಂದ್ರ ಸರ್ಕಾರವನ್ನೂ ಅರ್ಜಿಯಲ್ಲಿ ಎದುರಾಳಿಯಾಗಿ ಉಲ್ಲೇಖಿಸಲಾಗಿದೆ.

‘ಪಬ್‌ಜಿ ಗೇಮ್, ಮಕ್ಕಳು–ಯುವಜನರಲ್ಲಿ ಹಿಂಸಾ ಮನೋಭಾವ ಹೆಚ್ಚಿಸುತ್ತಿದೆ. ಹಿಂಸೆಗೆ ಪ್ರಚೋದನೆ ಸಹ ನೀಡುತ್ತಿದೆ. ನಿಷೇಧವಿದ್ದರೂ ಹೆಸರು ಬದಲಾಯಿಸಿಕೊಂಡು ದೇಶದಲ್ಲಿ ಕಾರ್ಯಾಚರಣೆ ಆರಂಭಿಸಿದೆ’ ಎಂಬ ಅಂಶವೂ ಅರ್ಜಿಯಲ್ಲಿತ್ತು.

ಕಾನೂನು ತಜ್ಞರ ಅಭಿಪ್ರಾಯ: ತೆಲಂಗಾಣ ಹೈಕೋರ್ಟ್ ಆದೇಶ ಪ್ರತಿ ತರಿಸಿಕೊಂಡಿರುವ ಗೃಹ ಇಲಾಖೆ, ರಾಜ್ಯದಲ್ಲೂ ಪಬ್‌ಜಿ ನಿಯಂತ್ರಣಕ್ಕೆ ಯಾವೆಲ್ಲ ಕ್ರಮ ಕೈಗೊಳ್ಳಬಹುದೆಂಬುದನ್ನು ತಿಳಿಯಲು ಕಾನೂನು ತಜ್ಞರ ಅಭಿಪ್ರಾಯ ಕೇಳಿದೆ.

‘ಪಬ್‌ಜಿ ಗೇಮ್‌ನಿಂದಾಗಿ ಮಕ್ಕಳು ಮಾನಸಿಕ ಕಾಯಿಲೆಗೆ ಒಳಗಾಗುತ್ತಿದ್ದು, ಈ ಬಗ್ಗೆ ನಿಮ್ಹಾನ್ಸ್ ವೈದ್ಯರು ಅನೇಕ ವರದಿಗಳನ್ನು ಸಲ್ಲಿಸಿದ್ದಾರೆ. ಹೀಗಾಗಿ, ಕರ್ನಾಟಕದಲ್ಲೂ ಈ ಗೇಮ್ ನಿಯಂತ್ರಣಕ್ಕೆ ಕ್ರಮ ಜರುಗಿಸಲು ಸಿದ್ಧತೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

'ಕಾನೂನಿನ ಚೌಕಟ್ಟಿನಡಿ ಷರತ್ತುಗಳನ್ನು ವಿಧಿಸುವುದು, ಗೇಮ್ ಆ್ಯಪ್‌ಗಳ ಕಂಪನಿಗಳ ವ್ಯವಹಾರದ ಮೇಲೆ ನಿಗಾ ವಹಿಸಲು ಸೂಕ್ತ ಪ್ರಾಧಿಕಾರ ರಚಿಸುವುದು ಸೇರಿದಂತೆ ಹಲವು ಮಾರ್ಗೋಪಾಯಗಳು ನಮ್ಮ ಮುಂದಿವೆ’ ಎಂದೂ ತಿಳಿಸಿದರು.

ಮುಖ್ಯಾಂಶಗಳು

- ಹಿಂಸಾ ಮನೋಭಾವ ಹೆಚ್ಚಿಸುವ ಗೇಮ್
- ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಮನ್ನಣೆ



‘ಪ್ರತ್ಯೇಕ ಕಾಯ್ದೆಗೆ ಒತ್ತಾಯ’

‘ಆನ್‌ಲೈನ್ ಜೂಜು ಹಾಗೂ ಬೆಟ್ಟಿಂಗ್ ಮೇಲೆ ನಿಷೇಧ ವಿಧಿಸಿ ಕರ್ನಾಟಕ ಪೊಲೀಸ್ ಕಾಯ್ದೆಗೆ ಇತ್ತೀಚೆಗಷ್ಟೇ ತಿದ್ದುಪಡಿ ತರಲಾಗಿದೆ. ಪಬ್‌ಜಿ ಹಾಗೂ ಇತರೆ ಆ್ಯಪ್‌ಗಳ ನಿಯಂತ್ರಣಕ್ಕೆ ಪ್ರತ್ಯೇಕ ಕಾಯ್ದೆ ಜಾರಿಗೊಳಿಸುವಂತೆಯೂ ಬೇಡಿಕೆಗಳಿವೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪ್ರಜಾವಾಣಿ ವಿಶೇಷ

ಶನಿವಾರ, ಡಿಸೆಂಬರ್ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 335 | ಪುಟ 16 + 4
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಒಂದೂವರೆ ವರ್ಷದ ಮನೆವಾಸ ಮುಗಿಸಿ ಮತ್ತದೇ ಧಾವಂತದ ಬದುಕಿಗೆ ಮಹಿಳೆಯರು ಮರಳಿದ್ದಾರೆ. ಆದರೆ ವರ್ಕ್ ಫ್ರಮ್ ಹೋಮ್ ನಂತರದ ಬದುಕು ಸವಾಲಾಗಿರುವುದು ಸುಳ್ಳಲ್ಲ..



ಚರ್ಚೆ 7
ವಿವಿಧ ಕಾರಣಗಳನ್ನು ಮುಂದೊಡ್ಡಿ ವಿಡಂಬನಾ ಕಾರ್ಯಕ್ರಮಗಳನ್ನು ರದ್ದು ಮಾಡುವುದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಅಲ್ಲವೇ?

ವಿವಿಧೆಡೆ ಧಾರಾಕಾರ ಮಳೆ, ಬೆಳೆ ಹಾನಿ 4

ಮತ್ತೆ ಇಬ್ಬರಿಗೆ ಕೋವಿಡ್ ದೃಢ 5

ಸೆನ್ಸೆಕ್ಸ್	ನಿಫ್ಟಿ	₹/$
57,696 ▼	17,196 ▼	75.12 ▼





ಶಾಲಾ ಮಕ್ಕಳ ಪೋಷಕರಿಗೆ ಲಸಿಕೆ ಕಡ್ಡಾಯ • ಮದುವೆಗೆ 500 ಜನರ ಮಿತಿ

ಓಮೈಕ್ರಾನ್ ತಡೆಗೆ ಕಠಿಣ ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್‌ನ ಎರಡು ಪ್ರಕರಣ ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಪತ್ತೆಯಾಗಿರುವ ಬೆನ್ನಲ್ಲೇ, ಕೋವಿಡ್ ಹರಡುವುದನ್ನು ತಡೆಯುವತ್ತ ಸರ್ಕಾರ ಕಠಿಣ ಹೆಜ್ಜೆಗಳನ್ನಿಟ್ಟಿದೆ.



ಓಮೈಕ್ರಾನ್ ದೃಢಪಟ್ಟಿರುವುದು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಬೆನ್ನಲ್ಲೇ, ಅದನ್ನು ನಿಯಂತ್ರಿಸುವ ಸಲುವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಉನ್ನತ ಮಟ್ಟದ ಸಭೆ ನಡೆಸಿದರು. ಸಚಿವರು, ಹಿರಿಯ ಅಧಿಕಾರಿಗಳು ಹಾಗೂ ಆರೋಗ್ಯ ಕ್ಷೇತ್ರದ ತಜ್ಞರು ಸಭೆಯಲ್ಲಿ ಭಾಗಿಯಾಗಿದ್ದರು. ಕೋವಿಡ್ ನಿಗ್ರಹಕ್ಕೆ ಪೂರಕವಾಗಿ ಹೊಸ ಮಾರ್ಗಸೂಚಿಯನ್ನೂ ಸರ್ಕಾರ ಹೊರಡಿಸಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಂದಾಯ ಸಚಿವ ಆರ್.ಅಶೋಕ ಅವರು, ಕೊರೊನಾ ಹರಡುವಿಕೆ ತಡೆಗಾಗಿ ಮತ್ತೆ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗುವುದು ಎಂದರು.

9ನೇ ಪುಟ ನೋಡಿ

ನಿರ್ಬಂಧದ ಮಾರ್ಗಸೂಚಿ

- ಶಾಲಾ–ಕಾಲೇಜುಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು, ಉತ್ಸವ ಮತ್ತು ಕಾರ್ಯಕ್ರಮಗಳಿಗೆ 2022 ರ ಜನವರಿ 15 ರವರೆಗೆ ನಿರ್ಬಂಧ.
- ಶಾಲಾ–ಕಾಲೇಜು ವಿದ್ಯಾರ್ಥಿಗಳ ಪೋಷಕರಿಗೆ ಎರಡು ಡೋಸ್ ಕೋವಿಡ್ ಲಸಿಕೆ ಕಡ್ಡಾಯ
- ಮದುವೆ, ಸಭೆ, ಸಮಾರಂಭ, ಸಮ್ಮೇಳನಗಳಲ್ಲಿ 500 ಜನರಿಗೆ ಮಾತ್ರ ಅವಕಾಶ. ಕೋವಿಡ್ ಮಾರ್ಗಸೂಚಿ ಪಾಲಿಸುವುದು ಆಯೋಜಕರ ಜವಾಬ್ದಾರಿ.
- ಎರಡು ಡೋಸ್ ಲಸಿಕೆ ಪಡೆದವರಿಗೆ ಮಾತ್ರ ಮಾಲ್‌ಗಳು, ಚಿತ್ರಮಂದಿರಗಳಿಗೆ ಪ್ರವೇಶ.
- ಆರೋಗ್ಯ ಕಾರ್ಯಕರ್ತರು, 65 ವರ್ಷ ಮೇಲ್ಪಟ್ಟವರು ಮತ್ತು ವಿವಿಧ ರೀತಿಯ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಕೋವಿಡ್ ಪರೀಕ್ಷೆ ಕಡ್ಡಾಯ.
- ಸರ್ಕಾರಿ ನೌಕರರು ಎರಡು ಡೋಸ್ ಲಸಿಕೆ ಪಡೆಯಲೇಬೇಕು.
- ಮಾಸ್ಕ್ ಧರಿಸದೇ ಇರುವವರಿಗೆ ಬಿಬಿಎಂಪಿ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ₹250 ಮತ್ತು ಉಳಿದ ಕಡೆಗಳಲ್ಲಿ ₹100 ದಂಡ.

3ನೇ ಅಲೆ: ಚಿಕಿತ್ಸೆಗೆ ಸರ್ಕಾರ ಸಜ್ಜು

ಕೋವಿಡ್ ಸಾಂಕ್ರಾಮಿಕದ ಸಂಭವನೀಯ ಮೂರನೇ ಅಲೆ ಎದುರಿಸಲು ಮಕ್ಕಳ ತೀವ್ರ ನಿಗಾ ಘಟಕ (ಐಸಿಯು), ಹಾಸಿಗೆ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ವೈದ್ಯಕೀಯ ಕಾಲೇಜುಗಳ ನಿರ್ದೇಶಕರಿಗೆ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಸೂಚಿಸಿದರು.

ಓಮೈಕ್ರಾನ್ ಕಾಣಿಸಿಕೊಂಡಿರುವ ಬೆನ್ನಲ್ಲೇ ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರ ಜೊತೆಗೆ ಶುಕ್ರವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಜಿಲ್ಲಾಮಟ್ಟದಲ್ಲಿ ತೃತೀಯ ಹಂತದ ಆರೋಗ್ಯ ಸೇವೆ ನೀಡಲು 21 ವೈದ್ಯಕೀಯ ಕಾಲೇಜುಗಳಿವೆ. ಹೊಸ ತಳಿಯ ವೈರಾಣು ಕಾಣಿಸಿಕೊಂಡವರಿಗೆ ನೀಡಬೇಕಾದ ಚಿಕಿತ್ಸೆ ಬಗ್ಗೆ ಚರ್ಚಿಸಲಾಗಿದೆ' ಎಂದರು.

ಇನ್ನಷ್ಟು ಸುದ್ದಿಗಳು 5, 9

35 ದೇಶಗಳಿಗೆ ಹರಡಿದ ಓಮೈಕ್ರಾನ್

ವಾಷಿಂಗ್ಟನ್ (ಎಎಫ್‌ಪಿ): ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ 35 ದೇಶಗಳಲ್ಲಿ ಪತ್ತೆಯಾಗಿದೆ. ಅಮೆರಿಕ ಮತ್ತು ಆಸ್ಟ್ರೇಲಿಯಾದಲ್ಲಿ ಸ್ಥಳೀಯವಾಗಿಯೇ ತಗುಲಿದ ಓಮೈಕ್ರಾನ್ ಸೋಂಕು ಪ್ರಕರಣ ದೃಢಪಟ್ಟಿದೆ.

ಮೊದಲು ದಕ್ಷಿಣ ಆಫ್ರಿಕಾದಲ್ಲಿ ದೃಢಪಟ್ಟ ಓಮೈಕ್ರಾನ್ ಸೋಂಕು ಪ್ರಕರಣವು ತೀವ್ರಗತಿಯಲ್ಲಿ ಹರಡುವ ಸಾಮರ್ಥ್ಯ ಹೊಂದಿದೆ ಎಂದು ಹೇಳಲಾಗುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ ಪ್ರಾಥಮಿಕ ಅಧ್ಯಯನ ಪ್ರಕಾರ, ಡೆಲ್ಟಾ ಅಥವಾ ಬೀಟಾ ರೂಪಾಂತರ ತಳಿಗಳಿಗೆ ಹೋಲಿಸಿದರೆ ಓಮೈಕ್ರಾನ್ ಮರು ಸೋಂಕು ಸಾಧ್ಯತೆಯು ಮೂರು ಪಟ್ಟು ಹೆಚ್ಚು.

ಅಮೆರಿಕದಲ್ಲಿ ಒಟ್ಟು ಹತ್ತು ಪ್ರಕರಣಗಳು ದೃಢಪಟ್ಟಿವೆ. ನ್ಯೂಯಾರ್ಕ್‌ನಲ್ಲಿ ಐದು ಪ್ರಕರಣಗಳು ಗುರುವಾರವೇ ಪತ್ತೆಯಾಗಿದ್ದವು. ಲಾಸ್ ಏಂಜಲೀಸ್, ಮಿನಸೋಟಾ ಮತ್ತು ಹವಾಯಿಯಲ್ಲಿ ತಲಾ ಒಂದೊಂದು ಪ್ರಕರಣ ದೃಢಪಟ್ಟಿದೆ. ಮಿನಸೋಟಾ ಮತ್ತು ಹವಾಯಿಯಲ್ಲಿ ಸೋಂಕು ಪತ್ತೆಯಾದ ವ್ಯಕ್ತಿಗಳಿಗೆ ವಿದೇಶ ಪ್ರಯಾಣದ ಹಿನ್ನೆಲೆ ಇಲ್ಲ.

9ನೇ ಪುಟ ನೋಡಿ

40ರ ಮೇಲಿನವರಿಗೆ ಬೂಸ್ಟರ್ ಡೋಸ್‌ಗೆ ಶಿಫಾರಸು

ನವದೆಹಲಿ (ಪಿಟಿಐ): 40 ವರ್ಷಕ್ಕಿಂತ ಮೇಲಿನ ವಯಸ್ಸಿನವರಿಗೆ ಕೋವಿಡ್–19 ತಡೆ ಲಸಿಕೆಯ ಬೂಸ್ಟರ್ ಡೋಸ್ ಹಾಕಿಸಬೇಕು. ಸೋಂಕು ತಗಲುವ ಅಪಾಯ ಹೆಚ್ಚಿರುವವರು ಮತ್ತು ಸೋಂಕಿಗೆ ತೆರೆದುಕೊಳ್ಳುವ ಸಾಧ್ಯತೆ ಅಧಿಕ ಇರುವವರಿಗೆ ಆದ್ಯತೆ ನೀಡಬೇಕು ಎಂದು ಭಾರತೀಯ ಸಾರ್ಸ್ ಕೋವ್–2 ವೈರಾಣು ಸಂರಚನೆ ವಿಶ್ಲೇಷಣೆ ಒಕ್ಕೂಟದ (ಐಎನ್‌ಎಸ್‌ಎಸಿಒಜಿ) ವಿಜ್ಞಾನಿಗಳು ಸಲಹೆ ನೀಡಿದ್ದಾರೆ.

9ನೇ ಪುಟ ನೋಡಿ

ಮಯಂಕ್ ಶತಕ ಸಿರಿ

ಮುಂಬೈ: ಬೆಂಗಳೂರಿನ ಮಯಂಕ್ ಅಗರವಾಲ್ ವಾಂಖೆಡೆ ಕ್ರೀಡಾಂಗಣದಲ್ಲಿ ಶುಕ್ರವಾರ ಸುಂದರ ಶತಕ ಸಿಡಿಸಿದರು. ನ್ಯೂಜಿಲೆಂಡ್ ಎದುರಿನ ಎರಡನೇ ಟೆಸ್ಟ್‌ನಲ್ಲಿ ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿದ್ದ ಭಾರತ ತಂಡಕ್ಕೆ ಆಸರೆಯಾದರು. ಟೆಸ್ಟ್‌ನಲ್ಲಿ ಇದು ಅವರಿಗೆ ನಾಲ್ಕನೇ ಶತಕ.



ಐಎಂಎಫ್‌ನಲ್ಲಿ ಗೀತಾಗೆ ಮುಂಬಡ್ತಿ



ವಾಷಿಂಗ್ಟನ್ (ಪಿಟಿಐ): ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಅವರಿಗೆ ಸಂಸ್ಥೆಯ 'ಒಂದನೇಯ ಸಹಾಯಕ ವ್ಯವಸ್ಥಾಪಕ ನಿರ್ದೇಶಕಿ' ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಇದು ಐಎಂಎಫ್‌ನ ಎರಡನೆಯ ಅತಿದೊಡ್ಡ ಹುದ್ದೆ.

ಈಗ ಈ ಹುದ್ದೆಯಲ್ಲಿ ಇರುವ ಜೆಫ್ರಿ ಒಕಮೊಟೊ ಅವರು ಮುಂದಿನ ವರ್ಷದ ಆರಂಭದಲ್ಲಿ ಹುದ್ದೆ ತೊರೆಯಲಿದ್ದಾರೆ ಎಂದು ಐಎಂಎಫ್‌ನ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜೀವಾ ತಿಳಿಸಿದ್ದಾರೆ.

ಭಾರತ ಮೂಲದ ಗೀತಾ ಅವರು ಐಎಂಎಫ್ ತೊರೆದು 2022ರ ಜನವರಿಯಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಮರಳಬೇಕಿತ್ತು. ಆದರೆ, ಅವರು ಈಗ ಐಎಂಎಫ್‌ನಲ್ಲಿಯೇ ಮುಂದುವರಿಯಲು ತೀರ್ಮಾನಿಸಿದ್ದಾರೆ ಎಂದು ಕ್ರಿಸ್ಟಲೀನಾ ಹೇಳಿದ್ದಾರೆ.

'ಕೆಟ್ಟು ಹಾಳಾಗಿ ಹೋಗಿದ್ದಾರೆ, ಎಂಜಲು ಕಾಸು ತಿಂತಾರೆ...'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಎಂಜಲು ಕಾಸು ತಿಂದು ಬದುಕುತ್ತಿದ್ದಾರೆ. ಯೋಗ್ಯತೆ ಇಲ್ಲ ಅಂದ್ರ ಯುನಿಫಾರ್ಮ್ ಬಿಚ್ಚಿಟ್ಟು ಸಾಯಲಿ ಮನೆ ಕಡೆ...' ಎಂದು ಗೃಹಸಚಿವ ಆರಗ ಜ್ಞಾನೇಂದ್ರ ಅವರು ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಎರಡು ದಿನದ ಹಿಂದೆ ಜಿಲ್ಲೆಯ ಸ್ವಕ್ಷೇತ್ರ ತೀರ್ಥಹಳ್ಳಿಯಲ್ಲಿದ್ದ ಅವರು ಚಿಕ್ಕಮಗಳೂರಿನ ಪೊಲೀಸ್ ಅಧಿಕಾರಿಗೆ ಮೊಬೈಲ್‌ನಲ್ಲಿ ಬೈದಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡಿದೆ.

'ಇಡೀ ಚಿಕ್ಕಮಗಳೂರು ಮತ್ತು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲ ಪೊಲೀಸರು ಕೆಟ್ಟು ಹಾಳಾಗಿ ಹೋಗಿದ್ದಾರೆ. ಕೈತುಂಬಾ ಸಂಬಳ ಕೊಡ್ತಿದೀವಿ. ಯಾವನಿಗೂ ಸಂಬಳದಿಂದ ಬದುಕಬೇಕೆಂದೇನೂ ಇಲ್ಲ. ಎಂಜಲು ಕಾಸು ತಿಂದು ಬದುಕುತ್ತಿದ್ದಾರೆ. ಯೋಗ್ಯತೆ ಇಲ್ಲದೆ ಇದ್ದರೆ ಯುನಿಫಾರ್ಮ್ ಬಿಚ್ಚಿಟ್ಟು ಸಾಯಲಿ, ಎಲ್ಲಾದರೂ ಹೋಗಿ ಮಣ್ಣು ಹೊರಲಿ. ಅವರನ್ನ ನಂಬಿಕೊಂಡು ಜನ ಬದುಕೋದು ಹೇಗೆ? ತಲ್ವಾರ್ ತೋರಿಸಿ ಕೊಟ್ಟಿಗೆಯಲ್ಲಿರುವ ನಮ್ಮ ಜಾನುವಾರನ್ನು ಬಿಚ್ಚಿಕೊಂಡು ಹೋಗುತ್ತಿದ್ದಾರೆ' ಎಂದು ಹೇಳಿದ್ದಾರೆ.



> ಎಲ್ಲ ಪೊಲೀಸರನ್ನು ಉದ್ದೇಶಿಸಿ ಹೀಗೇ ಹೇಳಿಲ್ಲ. ಗೋಸಾಗಣೆದಾರರ ಜೊತೆ ಕೈಜೋಡಿಸಿದ್ದವರನ್ನು ಉದ್ದೇಶಿಸಿ ಹೇಳಿದ್ದೇನೆ. ಗೃಹ ಸಚಿವನಾಗಿ ಪೊಲೀಸರ ಬಗ್ಗೆ ಗೌರವವಿದೆ
>
> **ಆರಗ ಜ್ಞಾನೇಂದ್ರ**, ಗೃಹ ಸಚಿವ

ಚಿಕ್ಕಮಗಳೂರು ಜಿಲ್ಲೆಯಲ್ಲೂ ಗೋ ಕಳವು ಪ್ರಕರಣ ನಡೆದಿತ್ತು. ಗೃಹ ಸಚಿವರು ಗುಡ್ಡೆಕೊಪ್ಪದ ತಮ್ಮ ಮನೆಯಲ್ಲಿ ಮೊಬೈಲ್ ಮೂಲಕ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದ್ದನ್ನು ಯಾರೋ ಚಿತ್ರೀಕರಿಸಿ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

'ಗೃಹಸಚಿವರು ಯಾರಿಗೆ ಕರೆ ಮಾಡಿ ಹೀಗೆ ಮಾತನಾಡಿದ್ದಾರೆ ಎಂಬ ಮಾಹಿತಿ ಇಲ್ಲ. ಗೋ ಕಳವು ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ಪೊಲೀಸರು ಭಾಗಿಯಾಗಿರುವುದು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಲಾಗುವುದು' ಎಂದು ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀಪ್ರಸಾದ್ ಪ್ರತಿಕ್ರಿಯಿಸಿದರು.

'ಬೆಳಗಾವಿಯಲ್ಲೇ ಅಧಿವೇಶನ'

ಬೆಂಗಳೂರು: ರಾಜ್ಯದಲ್ಲಿ ಮತ್ತೆ ಕೋವಿಡ್‌ಪ್ರಕರಣಗಳು ಹೆಚ್ಚುತ್ತಿರುವುದರಿಂದ ವಿಧಾನಮಂಡಲದ ಚಳಿಗಾಲದ ಅಧಿವೇಶನವನ್ನು ಬೆಳಗಾವಿ ಬದಲು ಬೆಂಗಳೂರಿನಲ್ಲೇ ನಡೆಸಬೇಕು ಎಂಬ ಶಾಸಕರ ಒತ್ತಾಯಕ್ಕೆ ಸರ್ಕಾರ ಮಣಿದಿಲ್ಲ. 8

'ದೌರ್ಜನ್ಯ: ಬ್ರಿಟಿಷರನ್ನೂ ಮೀರಿಸಿದ ಬಿಜೆಪಿ ಸರ್ಕಾರ'

ಝಾನ್ಸಿ (ಪಿಟಿಐ): ಜನರ ಮೇಲೆ ಎಸಗಿದ ದೌರ್ಜನ್ಯಗಳ ವಿಷಯದಲ್ಲಿ, ಬಿಜೆಪಿ ಸರ್ಕಾರವು ಬ್ರಿಟಿಷ್ ಆಳ್ವಿಕೆಯನ್ನೂ ಮೀರಿಸಿದೆ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ. ಬಿಜೆಪಿಯದು 'ಕೊಂದು ಆಳು'ವ ನೀತಿ ಎಂದು ಟೀಕಿಸಿದ್ದಾರೆ. 8

ಹವಾಲಾ ದಂಧೆ; 185 ಖಾತೆ, ₹ 31.50 ಕೋಟಿ ಅಕ್ರಮ ವರ್ಗಾವಣೆ

ಬೆಂಗಳೂರು: ರಾಜ್ಯದಲ್ಲಿ ಸಕ್ರಿಯವಾಗಿದ್ದ ಹವಾಲಾ ದಂಧೆ ಜಾಲವನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಭೇದಿಸಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ಜಾಲ, ಇದುವರೆಗೂ ₹ 31.50 ಕೋಟಿ ಮೊತ್ತವನ್ನು ಅಕ್ರಮ ವರ್ಗಾವಣೆ ಮಾಡಿರುವುದನ್ನು ಪತ್ತೆ ಮಾಡಿದ್ದಾರೆ. 9

ಸೇವಾ ವಲಯದಲ್ಲಿ ಎರಡನೆಯ ಅತಿ ವೇಗದ ಬೆಳವಣಿಗೆ

ನವದೆಹಲಿ (ಪಿಟಿಐ): ನವೆಂಬರ್ ತಿಂಗಳಿನಲ್ಲಿ ದೇಶದ ಸೇವಾ ವಲಯದ ಚಟುವಟಿಕೆಗಳು ಒಂದು ದಶಕಕ್ಕೂ ಹೆಚ್ಚಿನ ಅವಧಿಯ ಎರಡನೆಯ ಅತಿವೇಗದ ಬೆಳವಣಿಗೆ ದಾಖಲಿಸಿವೆ. 10

'ವಾಹನದ ಮೇಲೆ ರಾಜಕೀಯ ಪಕ್ಷದ ಧ್ವಜ ಅಪರಾಧವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಹನಗಳ ಮೇಲೆ ರಾಜಕೀಯ ಪಕ್ಷಗಳ ಧ್ವಜ, ಚಿಹ್ನೆ ಹಾಕಿಕೊಂಡ ಕಾರ್ಯಕರ್ತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 171 (ಚುನಾವಣಾ ಖರ್ಚು ವೆಚ್ಚ ನೀಡುವಲ್ಲಿ ವಿಫಲ) ಅಡಿ ಪ್ರಕರಣ ದಾಖಲಿಸುವಂತಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಹೈಕೋರ್ಟ್‌ನ ಕಲಬುರಗಿ ಪೀಠದಲ್ಲಿ ಹನುಮಗೌಡ ಸೇರಿದಂತೆ ಮೂವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್. ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರು ದೂರಿನಲ್ಲಿ ಆರೋಪಿಸಿರುವಂತೆ ರಾಜಕೀಯ ಪಕ್ಷದ ಧ್ವಜ ಮತ್ತು ಚಿಹ್ನೆಗಳನ್ನು ಹೊಂದಿದ್ದ ವಾಹನಗಳಲ್ಲಿ ಬಂದು ಚುನಾವಣೆ ಸಂಬಂಧ ಅಕ್ರಮ ಹಣ ಹಂಚಿಕೆ ಮಾಡುತ್ತಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಒದಗಿಸಿಲ್ಲ. ಇದು ಕಾನೂನಿನ ಸ್ಪಷ್ಟ ದುರುಪಯೋಗ' ಎಂದು ಅಭಿಪ್ರಾಯಪಟ್ಟಿದೆ.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಳೆ ಬಂದರೆ ಹೊಳೆಯಂತಾಗುವ ಜಂಕ್ಷನ್ • ಪಾದಚಾರಿ ಮಾರ್ಗದಲ್ಲೇ ವ್ಯಾಪಾರ • ನಿತ್ಯವೂ ದಟ್ಟಣೆ ಕಿರಿಕಿರಿ

‘ಸಂಪಿಗೆ’ ಹಾದಿಯಲ್ಲಿ ‘ಸಂಚಾರ’ ತೊಳಲಾಟ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಇಕ್ಕಟ್ಟಾದ ರಸ್ತೆಯಲ್ಲಿ ಗುಂಡಿಗಳ ದರ್ಶನ. ಮಳೆ ಬಂದರೆ ಹೊಳೆಯಂತಾಗುವ ಜಂಕ್ಷನ್. ಪಾದಚಾರಿ ಮಾರ್ಗದಲ್ಲೇ ತಾತ್ಕಾಲಿಕ ಮಳಿಗೆ ತೆರೆದು ವ್ಯಾಪಾರ. ನಡಿಗೆ ಮಾರ್ಗ ಬಿಟ್ಟು ರಸ್ತೆಯಲ್ಲೇ ಸಂಚರಿಸುವ ಜನ. ಯಾರಿಗೆ ಏನಾಗುತ್ತದೆಯೇ? ಎಂಬ ತೊಳಲಾಟದಲ್ಲಿ ಮುಂದೆ ಸಾಗುವ ಚಾಲಕರು. ಸಾಲುಗಟ್ಟಿ ನಿಲ್ಲುವ ವಾಹನಗಳಿಂದ ನಿತ್ಯವೂ ವಿಪರೀತ ದಟ್ಟಣೆ.

ಇದು, ಮಲ್ಲೇಶ್ವರ ಸಂಪಿಗೆ ರಸ್ತೆಯ ಸಂಚಾರ ವ್ಯವಸ್ಥೆಯ ಸ್ಥಿತಿ. ಶೇಷಾದ್ರಿಪುರ ರೈಲ್ವೆ ಫ್ಲಾಟ್‌ಫಾರಂ ರಸ್ತೆಯ ಶಿರೂರ್ ಜಂಕ್ಷನ್‌ನಿಂದ ಆರಂಭವಾಗುವ ಸಂಪಿಗೆ ರಸ್ತೆ, ಸ್ಯಾಂಕಿ ರಸ್ತೆಗೆ ಸೇರಿ ಅಂತ್ಯವಾಗುತ್ತದೆ. ಮಲ್ಲೇಶ್ವರದ ಪ್ರಮುಖ ರಸ್ತೆ ಎನಿಸಿಕೊಳ್ಳುವ ಸಂಪಿಗೆ ರಸ್ತೆಯಲ್ಲಿ ಹಲವು ವರ್ಷಗಳಿಂದಲೇ ಸಂಚಾರ ಕಿರಿಕಿರಿ ಇದ್ದು, ಇದಕ್ಕೆ ಶಾಶ್ವತ ಪರಿಹಾರ ಸಿಕ್ಕಿಲ್ಲ.

ಅರಣ್ಯ ಭವನ, ಶಾಸಕರ ಕಚೇರಿ, ಮಂತ್ರಿ ಸ್ಕ್ವೇರ್ ಮಾಲ್, ಮಂತ್ರಿ ಗ್ರೀನ್ಸ್ ಅಪಾರ್ಟ್‌ಮೆಂಟ್ ಸಮುಚ್ಚಯ, ಚಿತ್ರಮಂದಿರ, ವಿವಿಧ ಕಂಪನಿಗಳ ಬಟ್ಟೆ–ಆಭರಣ ಮಳಿಗೆಗಳು, ಹೋಟೆಲ್‌ಗಳು ಈ ಮಾರ್ಗದಲ್ಲಿವೆ. ಮಲ್ಲೇಶ್ವರದ 18ನೇ ಅಡ್ಡರಸ್ತೆಯಲ್ಲಿರುವ ಹೂವಿನ ಮಾರುಕಟ್ಟೆ, ಈ ಭಾಗದಲ್ಲಿ ಪ್ರಸಿದ್ಧಿ ಪಡೆದಿದೆ. ಆದರೆ, ಈ ರಸ್ತೆಯಲ್ಲಿ ಮಾತ್ರ ಸಾರ್ವಜನಿಕರು ನೆಮ್ಮದಿಯಿಂದ ಸಂಚರಿಸಲು ಸಾಧ್ಯವಾಗುತ್ತಿಲ್ಲ.

ಕಾಮಗಾರಿ ಹೆಸರಿನಲ್ಲಿ ರಸ್ತೆಯ ಬಹುತೇಕ ಕಡೆ ಗುಂಡಿಗಳನ್ನು ಅಗೆದು, ಅವೈಜ್ಞಾನಿಕ ರೀತಿಯಲ್ಲಿ ಮುಚ್ಚಲಾಗಿದೆ. ಅಂಥ ಜಾಗದಲ್ಲಿ ಗುಂಡಿಗಳು ಹೆಚ್ಚಾಗಿದ್ದು, ವಾಹನ ಸವಾರಿ ಅಪಾಯಕಾರಿಯಾಗಿ ಮಾರ್ಪಟ್ಟಿದೆ. ಗುಂಡಿಯಿಂದಾಗಿ ದ್ವಿಚಕ್ರ ವಾಹನ ಸವಾರರು, ಆಯತಪ್ಪಿ ಬಿದ್ದು ಗಾಯಗೊಳ್ಳುತ್ತಿರುವ ಘಟನೆಗಳೂ ನಿತ್ಯವೂ ನಡೆಯುತ್ತಿರುವುದಾಗಿ ಸ್ಥಳೀಯರು ಹೇಳುತ್ತಾರೆ.

‘ಗುಂಡಿ ಬಿದ್ದ ಸ್ಥಳದಲ್ಲಿ ತಾತ್ಕಾಲಿಕವಾಗಿ ಕಲ್ಲು– ಕಾಂಕ್ರಿಟ್ ಮಿಶ್ರಣದ ತೇಪೆ ಹಾಕಿ ಹೋಗುತ್ತಾರೆ. ಮಳೆ ಬಂದರೆ ಹಾಗೂ ವಾಹನಗಳ ಓಡಾಟ ಹೆಚ್ಚಾದರೆ ತೇಪೆ ಕಿತ್ತು ಹೋಗುತ್ತದೆ. ಪುನಃ ಗುಂಡಿಗಳು ರಾರಾಜಿಸುತ್ತದೆ’ ಎಂದು ಆಭರಣ ಮಳಿಗೆಯೊಂದರ ವ್ಯವಸ್ಥಾಪಕ ರಾಮ್‌ಲಾಲ್ ಹೇಳಿದರು.

ಬಟ್ಟೆ ಮಾರಾಟ ಮಳಿಗೆ ವ್ಯಾಪಾರಿ ಆರ್. ಧನುಷ್, ‘ಜನದಟ್ಟಣೆ ಹೆಚ್ಚಿರುವ ರಸ್ತೆ ಇದು. ವ್ಯಾಪಾರವೂ ಚೆನ್ನಾಗಿದೆ. ಜನರು ಬಂದು ಹೋಗುವ ರಸ್ತೆಯೇ ಹದಗೆಡುತ್ತಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಜನರ ನಡಿಗೆಗೆ ಸಿಗದ ಪಾದಚಾರಿ ಮಾರ್ಗ: ರಸ್ತೆಯ ಎರಡೂ ಬದಿಯಲ್ಲಿ ಪಾದಚಾರಿ ಮಾರ್ಗ ವಿದ್ದು, ವ್ಯಾಪಾರಿಗಳು ಅದನ್ನು ಅತಿಕ್ರಮಿಸಿಕೊಂಡಿದ್ದಾರೆ. ಅಕ್ರಮವಾಗಿ ತಾತ್ಕಾಲಿಕ ಮಳಿಗೆಗಳನ್ನು ಇಟ್ಟುಕೊಂಡು, ವ್ಯಾಪಾರ ಮಾಡುತ್ತಿದ್ದಾರೆ. ಈ ಮಾರ್ಗದಲ್ಲಿ ಸಂಚರಿಸಲು ಸಾರ್ವಜನಿಕರಿಗೆ ಸಾಕಷ್ಟು ಅಡೆತಡೆಗಳನ್ನು ಎದುರಿಸುತ್ತಿದ್ದಾರೆ.

ರಸ್ತೆಯಲ್ಲಿ ವಾಹನಗಳ ಮಧ್ಯದಲ್ಲೇ ಜನ ನಡೆದುಕೊಂಡು ಹೋಗಬೇಕಾದ ಸ್ಥಿತಿ ಇದೆ. ಕೆಲವರು ಪಾದಚಾರಿ ಮಾರ್ಗದಲ್ಲೇ ನಿಂತುಕೊಂಡು ತಮಗಿಷ್ಟದ ವಸ್ತುಗಳನ್ನು ಖರೀದಿಸುವ ದೃಶ್ಯ ಸಾಮಾನ್ಯ.

‘ಅಗತ್ಯ ವಸ್ತುಗಳನ್ನು ತರಲು ರಸ್ತೆಗೆ ಹೋದರೆ, ನಿಗದಿತ ಅಂಗಡಿಗೆ ಹೋಗಲು ಜಾಗವೇ ಇರುವುದಿಲ್ಲ. ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡದಂತೆ ಹೇಳಿದರೆ, ವ್ಯಾಪಾರಿಗಳು ನಮ್ಮ ಮೇಲೆಯೇ ಹರಿಹಾಯುತ್ತಿದ್ದಾರೆ. ಇದೇ ಕಾರಣಕ್ಕೆ ಜಗಳಗಳೂ ನಡೆಯುತ್ತಿವೆ’ ಎಂದು ಸ್ಥಳೀಯ ನಿವಾಸಿ ಕಮಲಮ್ಮ ಹೇಳಿದರು.

ಮಲ್ಲೇಶ್ವರ ನಿವಾಸಿ ಎಂ. ಸುಲೋಚನಾ, ‘ಪಾದಚಾರಿ ಮಾರ್ಗ ಅತಿಕ್ರಮಣವಾಗಿದ್ದರಿಂದ ಜನ ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಇದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಆಗುತ್ತಿದ್ದು, ದಟ್ಟಣೆಗೆ ಪ್ರಮುಖ ಕಾರಣ’ ಎಂದರು.

ಶಾಸಕರ ಕಚೇರಿ ರಸ್ತೆಯಲ್ಲೇ ನೀರು: ಸಂಪಿಗೆ ರಸ್ತೆಗೆ ಹೊಂದಿಕೊಂಡಿರುವ ಅಡ್ಡರಸ್ತೆಯಲ್ಲಿ ಶಾಸಕರ ಭವನ ಹಾಗೂ ಅರಣ್ಯ ಭವನವಿದ್ದು, ಅದರ ಪಕ್ಕವೇ ರಾಜಕಾಲುವೆ ಹರಿಯುತ್ತಿದೆ. ಮಳೆ ಬಂದ ಸಂದರ್ಭದಲ್ಲಿ ಕಾಲುವೆಯ ತುಂಬಿ ರಸ್ತೆಯಲ್ಲಿ ಹರಿಯುತ್ತಿದ್ದು, ಇಡೀ ರಸ್ತೆ ಹೊಳೆಯಂತಾಗುತ್ತಿದೆ.

‘ಮಳೆ ಬಂದಾಗಲೆಲ್ಲ ಶಾಸಕರ ಕಚೇರಿ ರಸ್ತೆಯಿಂದ ಹರಿದು ಬರುವ ನೀರು, ಶಿರೂರ್ ಪಾರ್ಕ್ ಜಂಕ್ಷನ್‌ನಲ್ಲಿ ಅಡಿಯಷ್ಟು ನಿಲ್ಲುತ್ತಿದೆ. ಇಂಥ ನೀರಿನಲ್ಲೇ ಅನಿವಾರ್ಯವಾಗಿ ವಾಹನಗಳು ಸಂಚರಿಸುವ ಸ್ಥಿತಿ ಇದೆ. ಕೆಲ ವಾಹನಗಳು ಕೆಟ್ಟು ನಿಲ್ಲುತ್ತಿವೆ. ಶಾಸಕರ ಕಚೇರಿ ರಸ್ತೆಯಲ್ಲೇ ಸಮಸ್ಯೆಗಳು ಇದ್ದು, ಶಾಶ್ವತ ಪರಿಹಾರ ಸಿಗುತ್ತಿಲ್ಲ’ ಎಂದು ಸ್ಥಳೀಯರು ದೂರಿದರು.




ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಉಂಟಾದ ದಟ್ಟಣೆಯಿಂದಾಗಿ ವಾಹನಗಳು ಸಾಲುಗಟ್ಟಿ ನಿಂತಿರುವುದು (ಎಡಚಿತ್ರ) ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿರುವ ವ್ಯಾಪಾರಿಗಳು
– ಪ್ರಜಾವಾಣಿ ಚಿತ್ರಗಳು / ಎಂ.ಎಸ್. ಮಂಜುನಾಥ್

ಪ್ರಯಾಣ ಪ್ರಯಾಸ



ಸಂಪಿಗೆ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಜಾಗವಿಲ್ಲದ ಕಾರಣ ಜನರು ರಸ್ತೆಯಲ್ಲೇ ನಡೆದುಕೊಂಡು ಹೋದರು

‘ಬಿಜೆಪಿ ಕಚೇರಿಗೂ ದಾರಿ’

‘ಬಿಜೆಪಿ ಕಚೇರಿಯೂ ಸಂಪಿಗೆ ರಸ್ತೆಗೆ ಹೊಂದಿಕೊಂಡಿರುವ ಅಡ್ಡರಸ್ತೆಯಲ್ಲಿದೆ. ಮುಖ್ಯಮಂತ್ರಿ, ಸಚಿವರು ಹಾಗೂ ಮುಖಂಡರು ಸಾಕಷ್ಟು ಬಾರಿ ಇದೇ ರಸ್ತೆಯಲ್ಲೇ ಸುತ್ತಾಡುತ್ತಾರೆ. ಇಷ್ಟಾದರೂ ರಸ್ತೆ ಸುಧಾರಿಸಿಲ್ಲ’ ಎಂದು ಸ್ಥಳೀಯ ನಿವಾಸಿ ಮಹೇಶ್ ಹೇಳಿದರು.

‘ಪ್ರತಿ ಸಭೆಯಲ್ಲೂ ಪ್ರಸ್ತಾಪ’

‘ಬಿಬಿಎಂಪಿ ಅಧಿಕಾರಿಗಳ ಜೊತೆ ನಡೆಯುವ ಪ್ರತಿ ಸಭೆಯಲ್ಲೂ ಸಂಪಿಗೆ ರಸ್ತೆ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಸಮಸ್ಯೆಗಳ ಪಟ್ಟಿಯನ್ನೂ ಅಧಿಕಾರಿಗಳಿಗೆ ನೀಡುತ್ತಿದ್ದೇವೆ. ಶಾಶ್ವತ ಪರಿಹಾರಕ್ಕೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ತೀರಾ ಅಪಾಯಕಾರಿ ಗುಂಡಿಗಳನ್ನು ನಮ್ಮ ಸಿಬ್ಬಂದಿಯೇ ಸ್ವಯಂಪ್ರೇರಿತವಾಗಿ ಮುಚ್ಚುತ್ತಿದ್ದಾರೆ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕಾಚಮಾರನಹಳ್ಳಿ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಡಿ.4ರಿಂದ 6ರವರೆಗೆ ಬೆಳಿಗ್ಗೆ 8ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಬಳಗೆರೆ, ಗುಂಜೂರು ಪಾಳ್ಯ, ಪಣತ್ತೂರು ದಿಣ್ಣೆ, ಕಾಚಮಾರನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ



ನಗರದ ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ನಡೆದ ಸೆಮಿನಾರ್ ಅನ್ನು ಪ್ರಾಂಶುಪಾಲ ಡಾ.ಸಿ.ಪಿ.ಎಸ್. ಪ್ರಕಾಶ್ ಉದ್ಘಾಟಿಸಿದರು. ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಚ್.ಕೆ. ರಾಮರಾಜು ಇದ್ದರು.

ಬದಲಾವಣೆಗೆ ತಕ್ಕಂತೆ ಕೌಶಲ ಬೆಳೆಸಿಕೊಳ್ಳಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜಿನ (ಡಿಎಸ್‌ಸಿಇ) ಸಿವಿಲ್ ಎಂಜಿನಿಯರಿಂಗ್ ವಿಭಾಗದ ವತಿಯಿಂದ ಶುಕ್ರವಾರ ಒಂದು ದಿನದ ರಾಷ್ಟ್ರೀಯ ವಿಚಾರಸಂಕಿರಣ ಆಯೋಜಿಸಲಾಗಿತ್ತು.

‘ಹೈ ಪರ್ಫಾರ್ಮನ್ಸ್ ಇಂಡಸ್ಟ್ರೀಯಲ್ ಫ್ಲೋರಿಂಗ್’ ಕುರಿತು ನಡೆದ ಈ ಸೆಮಿನಾರ್ ಭಾರತೀಯ ಕಾಂಕ್ರೀಟ್ ಸಂಸ್ಥೆ (ಐಸಿಐ) ಸಹಯೋಗದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಾಂಶುಪಾಲ ಡಾ.ಸಿ.ಪಿ.ಎಸ್. ಪ್ರಕಾಶ್, ‘ಹೊಸ ಶಿಕ್ಷಣ ನೀತಿಯು ಕೌಶಲ ಅಭಿವೃದ್ಧಿಗೆ ಆದ್ಯತೆ ನೀಡುತ್ತದೆ. ವಿದ್ಯಾರ್ಥಿಗಳು ಮತ್ತು ಎಂಜಿನಿಯರ್‌ಗಳು ಉದ್ಯಮದ ಅಗತ್ಯಗಳಿಗೆ ಅನುಗುಣವಾಗಿ ಕೌಶಲಗಳನ್ನು ಬೆಳೆಸಿಕೊಳ್ಳುವುದು ಅಗತ್ಯವಿದೆ’ ಎಂದು ಸಲಹೆ ನೀಡಿದರು.

ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಚ್.ಕೆ. ರಾಮರಾಜು ಮಾತನಾಡಿ, ‘ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾಗುತ್ತಿವೆ. ಎಂಜಿನಿಯರ್‌ಗಳು ಬದಲಾಗುತ್ತಿರುವ ತಂತ್ರಜ್ಞಾನಗಳ ಬಗ್ಗೆಯೂ ಗಮನ ನೀಡಬೇಕು. ನಮ್ಮ ಪರಿಸರ ಮತ್ತು ಪರಂಪರೆಯನ್ನು ಸಂರಕ್ಷಿಸುವ ಇಂದಿನ ತುರ್ತು ಅಗತ್ಯವಾಗಿದೆ’ ಎಂದು ತಿಳಿಸಿದರು.

ಐಸಿಐ ಗೌರವ ಅಧ್ಯಕ್ಷ ಡಾ.ಎಲ್. ಆರ್. ಮಂಜುನಾಥ್, ಬೆಂಗಳೂರು ಕೇಂದ್ರದ ಐಸಿಐ ಗೌರವ ಕಾರ್ಯದರ್ಶಿ ಡಾ.ಆರ್.ಎಲ್. ರಮೇಶ್, ಡಿಎಸ್‌ಸಿಇ ಸಂಚಾಲಕರಾದ ಡಾ. ನೀತು ಅರಸ್ ಇದ್ದರು.

ಉದ್ಯಮಗಳ ಪ್ರತಿನಿಧಿಗಳು, ಸ್ನಾತಕೋತ್ತರ ವಿದ್ಯಾರ್ಥಿಗಳು, ಡಿಎಸ್‌ಸಿಇ ಅಧ್ಯಾಪಕರು ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ಸೆಮಿನಾರ್‌ನಲ್ಲಿ ಭೌತಿಕವಾಗಿ ಸುಮಾರು 100 ಮಂದಿ ಹಾಗೂ ವರ್ಚುವಲ್ ವ್ಯವಸ್ಥೆಯ ಮೂಲಕ 200 ಮಂದಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸೆಮಿನಾರ್‌ನಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗಾಗಿ ವಿಶೇಷ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ತುರ್ತು ಸಭೆಗೆ ಬಿಎಸ್‌ಪಿ ಆಗ್ರಹ

ಬೆಂಗಳೂರು: ‘ಎಸ್‌ಸಿಪಿ–ಟಿಎಸ್‌ಪಿ ಯೋಜನೆಯಡಿ ಆಯ್ಕೆಯಾದ ಪರಿಶಿಷ್ಟ ಸಮುದಾಯದ 1,110 ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡದಿರುವ ಸಂಬಂಧ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆಯಬೇಕಿದ್ದ ಸಭೆಯನ್ನು ಪದೇ ಪದೇ ಮುಂದೂಡಲಾಗುತ್ತಿದೆ’ ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ದೂರಿದ್ದಾರೆ.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ), ಪರಿಶಿಷ್ಟ ಪಂಗಡಗಳ ಉಪ ಯೋಜನೆಯಡಿ (ಟಿಎಸ್‌ಪಿ) ಬಿಬಿಎಂಪಿ ಈವರೆಗೆ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಿಲ್ಲ. ಬದಲಾಗಿ ಅವರಿಗೆ ಮಾರಕವಾಗುವಂತೆ ಯೋಜನೆಯನ್ನೇ ಬದಲಾಯಿಸಲು ಹೊರಟಿದ್ದಾರೆ. ಈ ಬಗ್ಗೆ ಚರ್ಚಿಸಲು ನಿಗದಿಯಾದ ಸಭೆಯನ್ನು ಎರಡು ಬಾರಿ ಮುಂದೂಡಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತುರ್ತಾಗಿ ಸಭೆ ಕರೆಯಲು’ ಆಗ್ರಹಿಸಿದ್ದಾರೆ.

12ಕ್ಕೆ ಉಚಿತ ನೇತ್ರ ತಪಾಸಣೆ ಶಿಬಿರ

ಬೆಂಗಳೂರು: ಸ್ನೇಹ ಸಮ್ಮಿಲನ ಫೌಂಡೇಷನ್ ಹಾಗೂ ಬೊಮ್ಮಸಂದ್ರದ ನಾರಾಯಣ ನೇತ್ರಾಲಯದ ಸಹಯೋಗದಲ್ಲಿ ಡಿ.12ರಂದು ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕ ವಿತರಣಾ ಶಿಬಿರವನ್ನು ಅತ್ತಿಬೆಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಸ್ಥಳ– ಕಲಾ ಸಂಗಮ, ಸೇಂಟ್ ಡಾಮಿನಿಕ್ಸ್ ಶಾಲೆ ಹತ್ತಿರ, ಅತ್ತಿಬೆಲೆ
ಸಂಪರ್ಕ: 7022997774

ಹೆಲ್ತ್ ಟಿಪ್ಸ್

ಕರ್ಜೂರವನ್ನು ಹಾಲಿನೊಂದಿಗೆ ಸೇವಿಸುವುದರಿಂದ ದೇಹದಲ್ಲಿ ಶಕ್ತಿ ಹೆಚ್ಚುತ್ತದೆ. ಮೂಳೆಗಳು ದೃಢಗೊಳ್ಳುತ್ತವೆ. ಅಲ್ಲದೆ, ಕಣ್ಣಿನ ದೃಷ್ಟಿಯೂ ಉತ್ತಮಗೊಳ್ಳುತ್ತದೆ



ಮುಗಿಯಿತು ‘ಮನೆವಾಸ’ ಮತ್ತದೇ ಧಾವಂತ...

ಸುಶೀಲಾ ಡೋಣೂರ

ಬದಲಾವಣೆಗಳು ಎಲ್ಲಿಂದಲೇ ಆರಂಭವಾಗಲಿ, ಅವು ಮೊಟ್ಟಮೊದಲು ನಮ್ಮದೇ ಬಾಗಿಲು ತಟ್ಟುತ್ತವೇನೊ. ಸಮಾಜ, ಕುಟುಂಬ, ವ್ಯವಸ್ಥೆ... ಎಲ್ಲಾ ಬದಲಾವಣೆಗೂ ಮೊದಲು ಹೈರಾಣಾಗುವುದು ನಾವೇ, ಹೆಣ್ಣುಮಕ್ಕಳು. ಕೋವಿಡ್ ತಂದಿಟ್ಟ ಅವಾಂತರಗಳಿಗೆ ಅತಿಹೆಚ್ಚು ಈಡಾಗಿದ್ದೂ ನಾವೇ. ಲಾಕ್‌ಡೌನ್, ವರ್ಕ್ ಫ್ರಮ್ ಹೋಮ್‌ನಂತಹ ಪರ್ವಕಾಲಕ್ಕೆ ಒಗ್ಗಿಕೊಳ್ಳುವುದು ಅಷ್ಟೇನೂ ಸುಲಭವಾಗಿರಲಿಲ್ಲ. ಹೇಗೊ ಆ ಜೀವನಕ್ರಮಕ್ಕೆ ಹೊಂದಿಕೊಂಡೆವು ಎನ್ನುವಾಗ ಇದೀಗ, ಮತ್ತದೇ ಧಾವಂತದ ಬದುಕಿಗೆ ಹೊರಳಬೇಕಿದೆ... ಈ ‘ನ್ಯೂ ನಾರ್ಮಲ್’ ಬದುಕಿನ ಮತ್ತೊಂದು ಮಜಲನ್ನು ಪರಿಚಯಿಸುತ್ತಿದೆ...

> ಒಂದೂವರೆ ವರ್ಷದ ಮನೆವಾಸ ಮುಗಿಸಿ ಮತ್ತದೇ ಧಾವಂತದ ಬದುಕಿಗೆ ಮರಳಿದ್ದಾರೆ ಮಹಿಳೆಯರು. ಅವವೇ ಸಮಸ್ಯೆಗಳು ಹೊಸ ಮುಖವಾಡ ಧರಿಸಿ ಎದುರು ನಿಂತಿವೆ. ಹಿಂದಿದ್ದಷ್ಟು ಆಯ್ಕೆ-ಅನುಕೂಲಗಳೂ ಈಗಿಲ್ಲ. ‘ವರ್ಕ್ ಫ್ರಮ್ ಹೋಮ್’ ನಂತರದ ಹೊಸ ಸವಾಲುಗಳನ್ನು ಎದುರುಗೊಳ್ಳುವ ಬಗೆ ಹೇಗೆ ಎನ್ನುವ ಕಳವಳ ಶುರುವಾಗಿದೆ...



ಎರಡು ನವಮಾಸಗಳನ್ನು (ಹದಿನೆಂಟು ತಿಂಗಳು) ಮನೆವಾಸದಲ್ಲಿ ಕಳೆದು, ಕಳೆದ ವಾರವಷ್ಟೇ ಮತ್ತೆ ಕಚೇರಿಗೆ ಹಿಂದಿರುಗಿದ ಬೆಂಗಳೂರಿನ ಪ್ರಜ್ಞಾ ಅವರ ದೂರು ದುಮ್ಮಾನಗಳಿವು.

ಮೊದಮೊದಲು ಕೆಲ ದಿನಗಳ ಲಾಕ್‌ಡೌನ್ ಎಂದಾಗ, ಕಚೇರಿ–ಮನೆಯ ನಡುವೆ ಅಡ್ಡಾಡಿ, ದುಡಿದು ಹೈರಾಣಾಗಿದ್ದ ಮನಕ್ಕೆ ಮನೆಯಲ್ಲಿಯೇ ಇರುವ ಸುಖ ಪುಳಕ ನೀಡಿತ್ತು. ಆದರೆ ವರ್ಷಗಳಾದರೂ ಈ ಮನೆವಾಸ ಮುಗಿಯದೇ ಹೋದಾಗ ದುಡಿಯುವ ಹೆಣ್ಣುಮಕ್ಕಳ ದಿನಗಳು ಭಾರವಾಗುತ್ತ ಹೋದವು. ತಮಗಿರುವ ಅದೇ ಇಪ್ಪತ್ತನಾಲ್ಕು ಗಂಟೆಗಳನ್ನು ಎರಡು ಭಾಗಗಳನ್ನಾಗಿ ಮಾಡಿಕೊಂಡು, ಅರ್ಧ ಭಾಗವನ್ನು ಕಚೇರಿಗೂ, ಇನ್ನರ್ಧ ಭಾಗವನ್ನು ಮನೆಗೂ ಹಂಚಿ, ಈ ಎರಡರ ನಡುವೆ ತಮಗಾಗಿ ಸಿಗುವ ಅಪರೂಪದ ಕ್ಷಣಗಳಿಗಾಗಿ ಹಲಬುತ್ತ ಹೇಗೊ ನಡೆಯುತ್ತಿದ್ದರು. ತಮ್ಮ ಕಚೇರಿ, ಗಂಡನ ನೌಕರಿ, ಮಕ್ಕಳ ಶಾಲೆ ಎಲ್ಲವೂ ಮನೆಗೇ ಬಂದು ಕೂತಾಗ, ಚಿತ್ರಾನ್ನದಲ್ಲಿ ಕೇಸರಿಬಾತು ಸೇರಿಕೊಂಡಂತೆ ಗಲಿಬಿಲಿಗೊಂಡವರೇ ಹೆಚ್ಚು. ಸಮಯ ಹೊಂದಿಸಲಾರದೇ ಹತಾಶೆಗೊಳಗಾದವರೇನೂ ಕಡಿಮೆ ಇಲ್ಲ.

ಶಾಲೆ, ಆಟೋಟಗಳಿಲ್ಲದ ಮಕ್ಕಳ ಹಟ–ರಗಳೆಗಳನ್ನು, ಸಾಮಾಜಿಕ ಬದುಕಿನಿಂದ ವಂಚಿತರಾದ ಗಂಡನ ದುಗುಡ–ದುಮ್ಮಾನಗಳನ್ನು, ಕಚೇರಿ ಕೆಲಸಗಳ ಒತ್ತಡಗಳನ್ನು ಏಕಕಾಲಕ್ಕೆ ಎದುರಿಸುತ್ತ; ತಾಸಿಗೊಮ್ಮೆ ಅಡುಗೆ ಮನೆಗೂ–ಕಂಪ್ಯೂಟರ್ ರೂಮಿಗೂ ಓಡಾಡುತ್ತ; ಅಲ್ಲಿ ಈರುಳ್ಳಿ ಹೆಚ್ಚಿಟ್ಟು ಬಂದು ಇಲ್ಲಿ ಕೀಬೋರ್ಡ್ ಕುಟ್ಟುವುದು, ಇಲ್ಲಿ ಫೈಲುಗಳ ಮೇಲೆ ಕಣ್ಣಾಡಿಸುತ್ತ, ಕುಕ್ಕರ್ ವಿಸಿಲ್‌ಗೆ ಕಿವಿಗೊಡುವುದು, ಕೆಲಸದ ವಾಟ್ಸ್‌ಆ್ಯಪ್ ಸಂದೇಶಗಳಿಗೆ ಉತ್ತರಿಸುತ್ತ ಬೆಳ್ಳುಳ್ಳಿ ಸುಲಿಯುವುದು, ಈಮೇಲ್‌ಗಳಿಗೆ ರಿಪ್ಲೈ ಮಾಡುತ್ತ ತರಕಾರಿ ಹೆಚ್ಚಿಕೊಳ್ಳುವುದು, ಮಕ್ಕಳನ್ನು ಕಣ್ಣಲ್ಲೇ ಗದರಿಸಿ ರೂಮಿನಿಂದ ಆಚೆಗಟ್ಟುತ್ತ ಝೂಮ್ ಮೀಟಿಂಗ್‌ನಲ್ಲಿ ಪಾಲ್ಗೊಳ್ಳುವುದು... ಇಂತೆಲ್ಲಾ ಬದುಕಿನ ಹೊಸ ಮುಖಗಳಿಗೆ ತಕ್ಕಮಟ್ಟಿಗೆ ಪರಿಚಿತರಾಗಿ ನಿಟ್ಟುಸಿರು ಬಿಡುವ ಹೊತ್ತು ಇದೀಗ ಮತ್ತೊಂದು ಮಹಾಪರ್ವಕ್ಕೆ ಅಣಿಯಾಗಬೇಕಿದೆ.

ಹಳೇ ಸಮಸ್ಯೆ, ಹೊಸ ಸವಾಲು

ಮತ್ತೆ ಅವೇ ಸವಾಲುಗಳು ಹೊಸ ಮುಖವಾಡ ಧರಿಸಿ ಎದುರು ಬರುತ್ತಿವೆ. ಸಮಸ್ಯೆ ಅವೇ ಆದರೂ ಬಗೆಹರಿಸಿಕೊಳ್ಳುವ ಮಾರ್ಗಗಳು ಇನ್ನಷ್ಟು ಜಟಿಲವಾಗಿವೆ. ಆಯ್ಕೆಗಳೂ ಹಿಂದೆಂದಿಗಿಂತ ಕಡಿಮೆ ಇವೆ. ಸಣ್ಣಮಕ್ಕಳನ್ನು ನೋಡಿಕೊಳ್ಳಲು ಮೊದಲಾದರೆ ಬೀದಿಗೊಂದರಂತೆ ಡೇಕೇರ್‌ಗಳಿದ್ದವು. ನಮ್ಮದೇ ಮನೆಯ ಅನುಕೂಲದಲ್ಲಿ ಮಕ್ಕಳನ್ನು, ಹಿರಿಯರನ್ನು ನೋಡಿಕೊಳ್ಳಲು ಆಯಾಗಳು ಸಿಗುತ್ತಿದ್ದರು. ಮನೆ ಸಹಾಯಕರ ತಾಪತ್ರಯವೂ ಅಷ್ಟಿರಲಿಲ್ಲ. ಆದರೆ, ಈಗ ತುಟ್ಟಿಯಾದ ಡೇಕೇರ್‌ಗಳು, ಸುರಕ್ಷತೆಯ ಭಯ, ಮನೆಗೆಲಸಕ್ಕೆ ಹೆಣ್ಣುಮಕ್ಕಳು ಸಿಗುತ್ತಿಲ್ಲ, ಆಯಾಗಳೂ ದುಬಾರಿಯಾಗಿದ್ದಾರೆ. ಇಂತೆಲ್ಲಾ ಹೆಚ್ಚಿದ ಖರ್ಚುಗಳ ನಡುವೆ ಸಂಬಳ ಕಡಿತದ ಬರೆ ಬೇರೆ.

“ಹೌದು, ದೀರ್ಘಾವಧಿಯ ವರ್ಕ್‌ಫ್ರಮ್ ಹೋಮ್, ಸಂಬಳ ಕಡಿತ, ಮಕ್ಕಳ ಆನ್‌ಲೈನ್ ತರಗತಿಗಳು, ಅನಾರೋಗ್ಯ ದುಡಿಯುವ ಮಹಿಳೆಯರ ಮಾನಸಿಕ ಆರೋಗ್ಯದ ಮೇಲೆ ಭಾರಿ ಪ್ರಭಾವ ಬೀರಿವೆ. ಅವರ ಜೀವನ, ಮನೆ, ಮನಸ್ಸು, ಆರೋಗ್ಯ, ದೇಹತೂಕ ಸುಸ್ಥಿತಿಗೆ ಬರಲು ಸಾಕಷ್ಟು ಸಮಯ ಬೇಕು” ಎನ್ನುತ್ತಾರೆ ಆಪ್ತಸಲಹೆಗಾರರಾದ ಡಾ. ಶಾಂತಾನಾಗರಾಜ್.

“ದುಡಿಯುವ ಮಹಿಳೆಯರ ದಿನಗಳು ಸುಲಲಿತವಾಗಲು ಜೀವನವಿಧಾನವನ್ನು ಸುಲಭಗೊಳಿಸಿಕೊಳ್ಳಬೇಕು” ಎನ್ನುವ ಅವರು ಅದಕ್ಕಾಗಿ ಕೆಲವು ಉಪಾಯಗಳನ್ನು ನೀಡುತ್ತಾರೆ–

ಜವಾಬ್ದಾರಿ ಹಂಚಿಕೊಳ್ಳಿ

ಎಲ್ಲವನ್ನೂ ಒಬ್ಬರೇ ನಿಭಾಯಿಸುತ್ತ ಸೂಪರ್ ವುಮನ್ ಆಗುವ ತರಾತುರಿ ಬೇಡ. ಮನೆಯ ಎಲ್ಲಾ ಸದಸ್ಯರಿಗೂ ಅವರವರ ಜವಾಬ್ದಾರಿಗಳ ಅರಿವು ಮಾಡಿಸಿ. ಮುಖ್ಯವಾಗಿ ಗಂಡನಿಗೆ ಅವರ ಹೊಣೆಗಾರಿಕೆಗಳ ಮನವರಿಕೆ ಮಾಡಿ. ಮಕ್ಕಳಿಗೂ ಕೆಲಸ ಕಲಿಸಿ.

ಅತೀಶಿಸ್ತು ಮುಖ್ಯವಲ್ಲ

ಮನೆ ಹೊಳೆಯುತಿರಬೇಕು ಎನ್ನುವ ಹಟ ಬೇಡ. ಮನೆಗಿಂತ ಮನಸು ಸ್ವಚ್ಛವಾಗಿರುವುದು, ಉಲ್ಲಾಸದಿಂದಿರುವುದು ಮುಖ್ಯ. ಮನೆಯನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಿದರೂ ಆಗುತ್ತದೆ.

ಅಡುಗೆ ಸರಳವಾಗಿರಲಿ

ಪ್ರತಿದಿನ ಇಂಥದ್ದೇ ಅಡುಗೆ ಇರಬೇಕು. ಗಂಡನಿಗೆ ಚಪಾತಿ ಇಷ್ಟ, ಮಕ್ಕಳಿಗೆ ದೋಸೆ ಎಂದು ಶ್ರಮಿಸಬೇಡಿ. ಸರಳ, ಸುಲಭವಾಗಿ ತಯಾರಾಗುವ ಆಹಾರಕ್ಕೆ ಆದ್ಯತೆ ನೀಡಿ. ಈಗಂತೂ ಮಾರುಕಟ್ಟೆಯಲ್ಲಿ ಸಾಕಷ್ಟು ‘ರೆಡಿ ಟು ಈಟ್’ ಪ್ಯಾಕೇಟುಗಳು ಸಿಗುತ್ತವೆ. ಅನಿವಾರ್ಯಕ್ಕೆ, ಅವಸರಕ್ಕೆ ಅವುಗಳ ಸಹಾಯ ಪಡೆಯಬಹುದು.

ಮನೆಯವರ ನೆರವು ಪಡೆಯಿರಿ

ಅತ್ತೆ-ಮಾವ, ಸೋದರತ್ತೆ, ಅಕ್ಕ, ದೊಡ್ಡಮ್ಮ, ಚಿಕ್ಕಮ್ಮ... ಯಾರೇ ಆಗಿರಲಿ ನಿಮ್ಮ ನೆರವಿಗೆ ಬರಬಲ್ಲವರಾದರೆ ಬಿಗುಮಾನ ಬದಿಗಿಟ್ಟು ಅವರ ಸಹಾಯಕ್ಕೆ ಕೈಚಾಚಿ. ಅದಕ್ಕೆ ಪ್ರತಿಯಾಗಿ ಅವರಿಗೆ ಸಣ್ಣಪುಟ್ಟ ಅನುಕೂಲಗಳನ್ನು ಒದಗಿಸಿಕೊಡಿ.

ಅಮ್ಮಂದಿರ ಸಮೂಹ ಕಟ್ಟಿ

ಒಂದೇ ಕಂಪನಿಯಲ್ಲಿ ದುಡಿಯುವ ಅಥವಾ ಒಂದೇ ಸಮುಚ್ಚಯದಲ್ಲಿ ವಾಸಿಸುವ ನಾಲ್ಕೈದು ಅಮ್ಮಂದಿರು ಸೇರಿ ಮಕ್ಕಳಿಗೆ ಒಂದೇ ಕಡೆ ಪಾಲನೆಯ ವ್ಯವಸ್ಥೆ ಮಾಡಬಹುದು. ಒಬ್ಬರು ಸಹಾಯಕರನ್ನು ನೇಮಿಸಿ, ಒಂದು ಮನೆಯಲ್ಲಿ ಅಥವಾ ಕಚೇರಿಯಲ್ಲಿ ಮಕ್ಕಳನ್ನು ಇರಿಸುವ ವ್ಯವಸ್ಥೆ ಮಾಡಿದರೆ ಖರ್ಚೂ ಕಡಿಮೆ, ಆತಂಕವೂ ಕಡಿಮೆ.

❖

ಮಕ್ಕಳ ಪೋಷಣೆ ಸವಾಲು

ಈ ಕೊರೊನಾ ಕಾಲದಲ್ಲಿ ಮಕ್ಕಳ ಪಾಲನೆಯೂ ಅಷ್ಟೇ ಕಷ್ಟಕರವಾಗಿದೆ. 18–20 ತಿಂಗಳ ಕಾಲ ಅಮ್ಮನ ಮಡಿಲಿಗಂಟಿಕೊಂಡೇ ಕಳೆದ ಮಕ್ಕಳು, ಈಗ ಅವಳನ್ನು ಕಚೇರಿಗೆ ಬಿಟ್ಟುಕೊಡಲು ಒಪ್ಪುತ್ತಿಲ್ಲ. ಅವಳಿಗೊ ಕೈಯಲ್ಲಿರುವ ಕೆಲಸವನ್ನು ಉಳಿಸಿಕೊಳ್ಳುವ ಜೊತೆಗೆ ಮಕ್ಕಳನ್ನು ನೋಡಿಕೊಳ್ಳುವುದು ಸವಾಲಾಗಿದೆ. ಆದರೆ, ಗಂಡ–ಹೆಂಡತಿ ಹಾಗೂ ಹಿರಿಯರು ಕೂಡಿ ಕಾರ್ಯತಂತ್ರ ರೂಪಿಸಿದರೆ ಇದೇನೂ ಗೆಲ್ಲಲಾರದ ಯುದ್ಧವಲ್ಲ. ಮನೆಯಲ್ಲಿ ಅಮ್ಮನಿಲ್ಲದ ವಾತಾವರಣಕ್ಕೆ ಮಕ್ಕಳನ್ನು ಮಾನಸಿಕವಾಗಿ ಸಿದ್ಧಗೊಳಿಸಿ. ನೀವು ಕೆಲಸಕ್ಕೆ ಹೋಗುವುದು ಎಷ್ಟು ಅನಿವಾರ್ಯ ಎನ್ನುವುದನ್ನು ಮಕ್ಕಳಿಗೆ ಪ್ರೀತಿಯಿಂದ ಮನದಟ್ಟು ಮಾಡಿ. ಅವಕಾಶವಿದ್ದರೆ ವಾರದಲ್ಲಿ ಒಂದೆರಡು ದಿನ ಮನೆಯಿಂದಲೇ ಕೆಲಸ ನಿರ್ವಹಿಸಿ. ರಜೆಗಳನ್ನು ಮಕ್ಕಳೊಂದಿಗೇ ಕಳೆಯಬೇಕು.

ಡಿ. ಯಶೋಧಾ, ಆಪ್ತಸಮಾಲೋಚಕಿ

ಹೆರಿಗೆ ಸಮಯದಲ್ಲಿ ಬಿಪಿ ಅಪಾಯವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನ್ನ ತಂಗಿ ಬಿಪಿ(ರಕ್ತದೊತ್ತಡ) ತೊಂದರೆಯಿಂದ ಬಳಲುತ್ತಿದ್ದಾಳೆ. ಬಿಪಿಯಿಂದಾಗಿ ಎರಡು ಮಕ್ಕಳನ್ನು ಕಳೆದುಕೊಂಡಿದ್ದಾಳೆ. ಹೆರಿಗೆಯ ಸಮಯದಲ್ಲಿ ಅವಳಿಗೆ ಬಿಪಿ ಬರುತ್ತದೆ. ದಯವಿಟ್ಟು ಪರಿಹಾರ ತಿಳಿಸಿ?**

– ಹೆಸರು, ಊರು ತಿಳಿಸಿಲ್ಲ

ಗರ್ಭಿಣಿಯರಲ್ಲಾಗುವ ಏರುರಕ್ತದೊತ್ತಡ, ಗರ್ಭಧಾರಣೆ ನಂತರ, ಐದು ತಿಂಗಳಿಂದ ಆರಂಭವಾಗಿ ಹೆರಿಗೆಯ ನಂತರ 12 ವಾರದೊಳಗೆ ಸಹಜ ಸ್ಥಿತಿಗೆ ಬರುತ್ತದೆ. ಈಗ ಹೆರಿಗೆಯಾಗಿ ಎಷ್ಟು ದಿನಗಳಾಗಿವೆ ಎಂಬುದು ನೀವು ತಿಳಿಸಿಲ್ಲ. ಹೆರಿಗೆಯಾಗಿ ಮೂರು ತಿಂಗಳಾಗಿದ್ದರೆ ನಿಮ್ಮ ತಂಗಿ ವೈದ್ಯರ ಹತ್ತಿರ ಬಿಪಿ ತಪಾಸಣೆಯನ್ನು ಮಾಡಿಸಿಕೊಳ್ಳಲಿ. ಈಗ ಬಿಪಿ ಹೆಚ್ಚಿಲ್ಲವೆಂದರೆ ಸಾಕಷ್ಟು ಮುಂಜಾಗ್ರತೆ ವಹಿಸಿ ಗರ್ಭಧಾರಣೆಗೆ 2 ತಿಂಗಳು ಮೊದಲು ದಿನವೂ ಫೋಲಿಕ್ ಆಸಿಡ್ 5ಎಂಜಿ ಮಾತ್ರೆಯನ್ನು ತೆಗೆದುಕೊಳ್ಳಲಿ. ವಿಟಮಿನ್ ‘ಸಿ’ಯುಕ್ತ ನಿಂಬೆ, ಕಿತ್ತಳೆ, ನೆಲ್ಲಿಕಾಯಿ ಮತ್ತು ಪೊಟ್ಯಾಸಿಯಂ ಅಂಶವುಳ್ಳ ಬಾಳೆಹಣ್ಣು, ನೈಟ್ರೇಟ್ ಅಂಶವುಳ್ಳ ಬೀಟ್‌ರೂಟ್ ಇವುಗಳೆಲ್ಲವೂ ಸ್ವಲ್ಪ ಮಟ್ಟಿಗೆ ಸಹಜವಾಗಿಯೇ ಬಿಪಿಯನ್ನು ನಿಯಂತ್ರಣದಲ್ಲಿಡುತ್ತವೆ. ಇವುಗಳನ್ನೆಲ್ಲ ದಿನವೂ ಬಳಸುತ್ತಾ ಜೊತೆಗೆ ತಜ್ಞ ವೈದ್ಯರ ನಿಯಮಿತ ತಪಾಸಣೆಯ ಮೇಲೆ ಇನ್ನೊಂದು ಮಗುವನ್ನು ಪಡೆಯಲು ಪ್ರಯತ್ನಿಸಲಿ.

- **ಗರ್ಭ ಧರಿಸಲು ಎಷ್ಟು ದಿನ ಸೇರಬೇಕು. ಯಾವ ಸಂದರ್ಭ ಸೂಕ್ತ?**

ಮೇಘನಾ, ಊರು ತಿಳಿಸಿಲ್ಲ.

ಋತುಫಲಪ್ರದದಿನಗಳಲ್ಲಿ (ತಿಂಗಳು ಸರಿಯಾಗಿ ಮುಟ್ಟಾಗುವವರಿಗೆ ಎಂಟರಿಂದ ಹದಿನೆಂಟು ದಿನಗಳ ಒಳಗೆ) ಲೈಂಗಿಕ ಸಂಪರ್ಕವಾದರೆ ಮಕ್ಕಳಾಗುವ ಸಂಭವ ಹೆಚ್ಚು. ಈ ಬಗ್ಗೆ ಮೇಲಿನ ಪ್ರಶ್ನೆ ಹಾಗೂ ಹಿಂದಿನ ಸಂಚಿಕೆಗಳಲ್ಲಿ ತಿಳಿಸಿರುತ್ತೇನೆ. ನಿಮಗೆ ತಿಂಗಳು ಸರಿಯಾಗಿ ಮುಟ್ಟಾಗುತ್ತಿದ್ದರೆ ಮುಟ್ಟಾದ ದಿನದಿಂದ 8ರಿಂದ 18ದಿನಗಳವರೆಗೆ ಅದರಲ್ಲೂ ಮುಖ್ಯವಾಗಿ 10ರಿಂದ14 ದಿನಗಳಲ್ಲಿ ಪತಿಯೊಡನೆ ದಿನಾಲೂ ಲೈಂಗಿಕ ಸಂಪರ್ಕವಾದರೆ ನಿಮ್ಮಿಬ್ಬರಲ್ಲಿ ಅಂದರೆ ಸತಿ-ಪತಿಯರಲ್ಲಿ ತೊಂದರೆಗಳಿಲ್ಲದಿದ್ದಲ್ಲಿ ಒಂದು ವರ್ಷದೊಳಗೆ ಖಂಡಿತವಾಗಿಯೂ ಗರ್ಭಧಾರಣೆಯಾಗಬೇಕು. ಆಗದೇ ಇದ್ದಲ್ಲಿ ತಜ್ಞವೈದ್ಯರಲ್ಲಿ ಸಲಹೆ ಪಡೆಯಿರಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಬಾಳೆಕಾಯಿ ರೋಸ್ಟ್ ಸಮೋಸ, ನಗ್ಗೆಟ್ಸ್



ನಗ್ಗೆಟ್ಸ್

ಬೇಕಾಗುವ ಸಾಮಗ್ರಿಗಳು: ಬಾಳೆಕಾಯಿ – ಎರಡು-ಮೂರು, ಚೀಸ್/ಪನ್ನೀರ್ – ಸ್ವಲ್ಪ, ಉಪ್ಪು, ಚಿಲ್ಲಿಫ್ಲೇಕ್ಸ್, ಟೊಮೆಟೊ ಸಾಸ್, ಚಿಲ್ಲಿ ಸಾಸ್, ರವೆ ಎರಡು ಚಮಚ, ಕಾರ್ನ್ ಫ್ಲೋರ್ – ಅರ್ಧ ಕಪ್, ಬ್ರೆಡ್ ಪುಡಿ – ಅರ್ಧ ಕಪ್, ಕರಿಯಲು ಎಣ್ಣೆ

ತಯಾರಿಸುವ ವಿಧಾನ: ಬಾಳೆಕಾಯಿಯನ್ನು ಒಂದು ಚಮಚ ಎಣ್ಣೆ ಮತ್ತು ಉಪ್ಪು ಹಾಕಿ ಬೇಯಿಸಿಕೊಳ್ಳಿ. ಸಿಪ್ಪೆ ತೆಗೆದು ಚೆನ್ನಾಗಿ ನುರಿಯಿರಿ. ಅದಕ್ಕೆ ತುರಿದ ಚೀಸ್/ಪನ್ನೀರ್ ಹಾಕಿ. ಸ್ವಲ್ಪವೇ ಉಪ್ಪು, ಚಿಲ್ಲಿಫ್ಲೇಕ್ಸ್, ಟೊಮೆಟೊ ಸಾಸ್, ಚಿಲ್ಲಿ ಸಾಸ್ ಹಾಕಿ ಕಲೆಸಿ. ಅಗತ್ಯವೆನಿಸಿದರೆ ಎರಡು ಚಮಚ ರವೆ ಸೇರಿಸಿ. ಚಿಕ್ಕ ಉಂಡೆ ಮಾಡಿ ಚಿತ್ರದಲ್ಲಿ ತೋರಿಸಿರುವ ಆಕಾರದಲ್ಲಿ ಮಾಡಿ ನೀರಿನಲ್ಲಿ ಕಲೆಸಿದ ಕಾರ್ನ್‌ಫ್ಲೋರ್‌ನಲ್ಲಿ ಅದ್ದಿ. ಆಮೇಲೆ ಬ್ರೆಡ್‌ಪುಡಿಯಲ್ಲಿ ಹೊರಳಿಸಿ ಚೆನ್ನಾಗಿ ಎರಡೂ ಕಡೆ ಅಂಟಿದ ನಂತರ ಮಧ್ಯಮ ಉರಿಯಲ್ಲಿ ಕರಿಯಿರಿ. ಇದು ತಿನ್ನಲು ಬೋಂಡಾಕ್ಕಿಂತ ಬೇರೆಯದೇ ರುಚಿ ಇರುತ್ತದೆ. ಮಕ್ಕಳಿಗೆ ಇಷ್ಟವಾಗುತ್ತದೆ. ಸಾಸ್ ಅಥವಾ ಹಸಿರು ಚಟ್ನಿಯೊಂದಿಗೆ ಸವಿಯಿರಿ.



ಸೌಖ್ಯ ಮೋಹನ್ ತಲಕಾಲುಕೊಪ್ಪ

ಬಾಳೆಕಾಯಿ ಚಾಟ್ ಮಸಾಲ

ಬೇಕಾಗುವ ಸಾಮಗ್ರಿಗಳು: ಬಾಳೆಕಾಯಿ ದೊಡ್ಡದು – 2, ಹಸಿರುಚಟ್ನಿ – ಅರ್ಧ ಕಪ್, ಕೆಂಪು ಚಟ್ನಿ, ಸಿಹಿ ಚಟ್ನಿ (ಕರ್ಜೂರ ಮತ್ತು ಹುಣಸೆಹಣ್ಣು ಸೇರಿಸಿದ್ದು), ಉಪ್ಪು, ಅರಿಸಿನಪುಡಿ, ಈರುಳ್ಳಿ ಒಂದು, ಟೊಮೆಟೊ ಒಂದು, ಕ್ಯಾರೆಟ್ ಒಂದು, ಕಾಯಿತುರಿ ಎರಡು ಚಮಚ, ಕೊತ್ತಂಬರಿ ಸೊಪ್ಪು, ನಿಂಬೆರಸ, ಸಣ್ಣ ಚೌಚೌ (ಖಾರಾಸೇವ್)

ತಯಾರಿಸುವ ವಿಧಾನ: ಮೊದಲು ಬಾಳೆಕಾಯಿ ಸಿಪ್ಪೆ ತೆಗೆದು ಉದ್ದವಾಗಿ ಸ್ಲೈಸ್ ಮಾಡಿಕೊಳ್ಳಿ (ಚಿಪ್ಸ್‌ಗಿಂತ ಸ್ವಲ್ಪ ದಪ್ಪ ಇರಬೇಕು). ಅದನ್ನು ಉಪ್ಪು ನೀರಿನಲ್ಲಿ ಅದ್ದಿಡಿ. ನಂತರ ಗರಿಗರಿಯಾಗಿ ಕರಿಯಿರಿ. ಹಸಿರು ಚಟ್ನಿ, ಕೆಂಪು ಚಟ್ನಿ, ಸಿಹಿಚಟ್ನಿಯನ್ನು ಮಿಶ್ರಣ ಮಾಡಿಕೊಳ್ಳಿ. ಅದರಲ್ಲಿ ಬಾಳೆಕಾಯಿ ಚಿಪ್ಸ್ ಅನ್ನು ಅದ್ದಿ. ಅದಕ್ಕೆ ಚೆನ್ನಾಗಿ ಮಸಾಲೆ ಹಿಡಿದುಕೊಳ್ಳಬೇಕು. ನಂತರ ಅದನ್ನು ದೊಡ್ಡ ತಟ್ಟೆಯಲ್ಲಿಟ್ಟು ಅದರ ಮೇಲೆ ಸಣ್ಣಗೆ ಕತ್ತರಿಸಿದ ಈರುಳ್ಳಿ, ಟೊಮೆಟೊ ಹಾಕಿ ತುರಿದ ಕ್ಯಾರೆಟ್ ಹಾಕಿ. ಕೊತ್ತಂಬರಿ ಸೊಪ್ಪು, ಕಾಯಿತುರಿ ಉದುರಿಸಿ. ಮೇಲಿನಿಂದ ಸಣ್ಣ ಚೌ ಚೌ (ಖಾರಾಸೇವ್) ಹಾಕಿ. ಎರಡು ಚಮಚ ಕಾಯಿತುರಿಯನ್ನು ಉದುರಿಸಿ. ಕೊನೆಯಲ್ಲಿ ಟೊಮಟೊ ಸಾಸ್ ಹಾಕಿ ತಕ್ಷಣವೇ ತಿನ್ನಲು ಕೊಡಿ. ಮಕ್ಕಳು ಇದನ್ನು ಇಷ್ಟಪಟ್ಟು ತಿನ್ನುತ್ತಾರೆ.

ನಳಪಾಕ

ರೋಸ್ಟ್



ಬೇಕಾಗುವ ಸಾಮಗ್ರಿಗಳು: ಬಾಳೆಕಾಯಿ 2-3, ಅಕ್ಕಿಹಿಟ್ಟು 3-4 ಚಮಚ, ಖಾರದಪುಡಿ – ಎರಡು ಚಮಚ, ಕಾರ್ನ್‌ಫ್ಲೋರ್ - 3 ರಿಂದ 4 ಚಮಚ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಕರಿಯಲು ಎಣ್ಣೆ, ಹಸಿಮೆಣಸು 4ರಿಂದ 5, ಬೆಳ್ಳುಳ್ಳಿ 5ರಿಂದ 6, ಈರುಳ್ಳಿ – ಅರ್ಧ, ಟೊಮೆಟೊ ಸಾಸ್ ಮತ್ತು ಸೋಯಾ ಸಾಸ್ ಸ್ವಲ್ಪ.

ತಯಾರಿಸುವ ವಿಧಾನ: ಬಾಳೆಕಾಯಿ ಬೇಯಿಸಿ ಮೇಲಿನ ಸಿಪ್ಪೆ ತೆಗೆದುಕೊಂಡು ಮಧ್ಯಕ್ಕೆ ಉದ್ದವಾಗಿ ಕತ್ತರಿಸಿ. ಅಕ್ಕಿಹಿಟ್ಟು, ಉಪ್ಪು, ಮೆಣಸಿನಪುಡಿ, ಶುಂಠಿ ಮತ್ತು ಬೆಳ್ಳುಳ್ಳಿ ಪೇಸ್ಟ್, ಕಾರ್ನ್‌ಫ್ಲೋರ್‌ಗೆ ನೀರು ಹಾಕಿ ಗಂಟಿಲ್ಲದಂತೆ ಕಲೆಸಿ. ಅದರಲ್ಲಿ ಕತ್ತರಿಸಿದ ಬಾಳೆಕಾಯಿ ಹಾಕಿ. ಎಣ್ಣೆಯಲ್ಲಿ ಕರಿಯಿರಿ. ಇನ್ನೊಂದು ಬಾಣಲೆಯಲ್ಲಿ ಸ್ವಲ್ಪ ಎಣ್ಣೆ ಹಾಕಿ ಉದ್ದುದ್ದಕ್ಕೆ ಕತ್ತರಿಸಿದ ಹಸಿಮೆಣಸು, ಬೆಳ್ಳುಳ್ಳಿ ಹಾಕಿ ಹುರಿಯಿರಿ. ಟೊಮೆಟೊ ಸಾಸ್ ಮತ್ತು ಚಿಟಿಕೆ ಉಪ್ಪು ಸೇರಿಸಿ ಹುರಿಯಿರಿ (ಸೋಯಾ ಸಾಸ್ ಕೂಡಾ ಜೊತೆಗೆ ಸೇರಿಸಬಹುದು). ನಂತರ ಕರಿದ ಬಾಳೆಕಾಯಿ ಸೇರಿಸಿ. ರೋಸ್ಟ್ ಆಗುವವರೆಗೆ ಹುರಿಯಿರಿ.

ಸಮೋಸ



ಬೇಕಾಗುವ ಸಾಮಗ್ರಿಗಳು: ಗೋಧಿಹಿಟ್ಟು – 2 ಕಪ್, ಓಂ ಕಾಳು – ಕಾಲು ಚಮಚ, ಉಪ್ಪು – ರುಚಿಗೆ, ತುಪ್ಪ – 4 ಚಮಚ

ಹೂರಣಕ್ಕೆ: ಬಾಳೆಕಾಯಿ ನಾಲ್ಕೈದು, ಹಸಿರು ಬಟಾಣಿ ಅರ್ಧ ಕಪ್, ಉಪ್ಪು, ಎಣ್ಣೆ ನಾಲ್ಕು ಚಮಚ, ಜೀರಿಗೆ, ಜೀರಿಗೆ ಪುಡಿ, ಅರಿಸಿನ ಪುಡಿ, ಕೊತ್ತಂಬರಿ ಪುಡಿ, ಗರಂಮಸಾಲ, ಖಾರದಪುಡಿ ಎಲ್ಲವೂ ಸ್ವಲ್ಪ, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಮೊದಲು ಹಸಿರು ಬಟಾಣಿಯನ್ನು ನೆನೆಸಿಡಿ. ಬಾಳೆಕಾಯಿ ಹಾಗೂ ಹಸಿರು ಬಟಾಣಿಯನ್ನು ಕುಕ್ಕರಿನಲ್ಲಿ ಮೆತ್ತಗೆ ಬೇಯಿಸಿ. ಗೋಧಿಹಿಟ್ಟಿಗೆ ಓಂಕಾಳು, ಉಪ್ಪು, ಮೂರು ಚಮಚ ತುಪ್ಪ ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಆಮೇಲೆ ಅಗತ್ಯವಿದ್ದಷ್ಟು ನೀರನ್ನು ಹಾಕಿ ಚಪಾತಿ ಹಿಟ್ಟಿಗಿಂತಲೂ ಗಟ್ಟಿಯಾಗಿ ಚೆನ್ನಾಗಿ ಕಲೆಸಿಡಿ. ಮೇಲಿನಿಂದ ಒಂದು ಚಮಚ ತುಪ್ಪ ಹಾಕಿ ಚೆನ್ನಾಗಿ ನಾದಿ ಮುಚ್ಚಿಡಿ. ಇನ್ನೊಂದು ಬಾಣಲೆಯಲ್ಲಿ ಒಗ್ಗರಣೆಗೆ ಇಟ್ಟು ಬೇಯಿಸಿ, ಜಜ್ಜಿದ ಬಾಳೆಕಾಯಿ, ಬೇಯಿಸಿದ ಬಟಾಣಿ ಸೇರಿಸಿ. ಆಮೇಲೆ ಮೇಲೆ ಹೇಳಿದ ಎಲ್ಲಾ ಸಾಮಗ್ರಿಗಳನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ ಹೂರಣ ತಯಾರಿಸಿಟ್ಟುಕೊಳ್ಳಿ. ಚೆನ್ನಾಗಿ ನಾದಿದ ಹಿಟ್ಟನ್ನು ಲಟ್ಟಿಸಿ ತ್ರಿಕೋನಾಕಾರ ಬರುವಂತೆ ಮಡಿಸಿ. ಅದರೊಳಗೆ ಹೂರಣ ತುಂಬಿಸಿ ಎಲ್ಲಾ ಕಡೆಯಿಂದಲೂ ಬಂದ್ ಮಾಡಿ. ಮಧ್ಯಮ ಉರಿಯಲ್ಲಿ ಕರಿಯಿರಿ. ಮೈದಾ ಬದಲು ಗೋಧಿಹಿಟ್ಟು ಬಳಸಿದರೆ ಉತ್ತಮ. ಆರೋಗ್ಯಕ್ಕೂ ಒಳ್ಳೆಯದು.

ರಾಷ್ಟ್ರೀಯ ನಾಟ್ಯೋತ್ಸವ ಇಂದಿನಿಂದ

ಕಾರವಾರ: ಹೊನ್ನಾವರ ತಾಲ್ಲೂಕಿನ ಗುಣವಂತೆ ಯಕ್ಷಾಂಗಣದಲ್ಲಿ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ ಡಿ.4 ಮತ್ತು 5 ರಂದು ನಡೆಯಲಿದೆ.

ಸಾಗರದ ಕಣ್ಣೇಶ್ವರ ಜಾನಪದ ಕಲಾ ಸಂಘದಿಂದ ಡೊಳ್ಳು ಕುಣಿತ, ಬೆಂಗಳೂರಿನ ನಾಟ್ಯ ನಿನಾದ ಅಕಾಡೆಮಿಯ ಧರಣಿ ಕಶ್ಯಪ ತಂಡದಿಂದ ಕೂಚಿಪುಡಿ ನೃತ್ಯ ನಾಟಕ 'ಮಂಡೋದರಿ ಕಲ್ಯಾಣ', ಬೆಂಗಳೂರಿನ ಸ್ಪಂದನ ತಂಡದಿಂದ 'ಲಕ್ಷಾಪತಿ ರಾಜನ ಕಥೆ' ನಾಟಕ ಪ್ರದರ್ಶನ ನಡೆಯಲಿದೆ.


5ರಂದು ಬೆಳಿಗ್ಗೆ 10.30ಕ್ಕೆ ಪ್ರೊ. ಎಂ.ಎ.ಹೆಗಡೆ ಅವರ ಸಂಸ್ಮರಣ ಗೋಷ್ಠಿ, ಸಂಜೆ 6ಕ್ಕೆ ಸಮಾರೋಪ ನಡೆಯಲಿದೆ. ಕೇರಳದ ಫೋಕ್ ಲ್ಯಾಂಡ್‌ನ ಕರಿವೆಲ್ಲೂರ್ ರತ್ನಕುಮಾರ ತಂಡದಿಂದ ನೃತ್ಯ, ಜ್ಯೋತಿ ಹೆಗಡೆ ಶಿರಸಿ ಅವರಿಂದ ರುದ್ರವೀಣಾ ವಾದನ, ಉಡುಪಿಯ ಕೊಡವೂರು ನೃತ್ಯನಿಕೇತನ ಕಲಾವಿದರಿಂದ ನೃತ್ಯ ರೂಪಕ ನಡೆಯಲಿದೆ.

ಮಕ್ಕಳ ಆಹಾರ ಆಯ್ಕೆಗೆ ಒತ್ತು ಸಿಗಲಿ

ಹುಬ್ಬಳ್ಳಿ: 'ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆ ಹಾಗೂ ಅವರ ಆರೋಗ್ಯ ಸುಧಾರಣೆಗೆ ಒತ್ತು ನೀಡಬೇಕು. ಮೊಟ್ಟೆ ಸೇವನೆಯನ್ನು ಮಕ್ಕಳ ಆಯ್ಕೆಗೆ ಬಿಡಬೇಕು...'

ಬಿಸಿಯೂಟದ ಯೋಜನೆಯಲ್ಲಿ ಶಾಲಾ ಮಕ್ಕಳಿಗೆ ರಾಜ್ಯ ಸರ್ಕಾರ ಡಿ. 1ರಿಂದ ಮೊಟ್ಟೆ ವಿತರಿಸುತ್ತಿರುವುದಕ್ಕೆ ಸಂಬಂಧಿಸಿದಂತೆ, 'ಶಾಲಾ ಮಕ್ಕಳಿಗೆ ಮೊಟ್ಟೆ: ಅಡ್ಡಿ-ಆತಂಕ ಸರಿಯೇ' ಕುರಿತು 'ಪ್ರಜಾವಾಣಿ' ಶುಕ್ರವಾರ ಆಯೋಜಿಸಿದ್ದ ಬಹುಮಾಧ್ಯಮ ಸಂವಾದದಲ್ಲಿ ಈ ಅಭಿಪ್ರಾಯ ಕೇಳಿಬಂತು.

'ಮೊಟ್ಟೆಗೆ ವಿರೋಧವಿಲ್ಲ; ಶಾಲೆಯಲ್ಲಿ ಕೊಡಬೇಡಿ'



ಮೊಟ್ಟೆ ಕೊಡುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಶಾಲೆಯಲ್ಲಿ ಕೊಡುವುದಕ್ಕೆ ವಿರೋಧವಿದೆ. ಸರ್ಕಾರಿ ಅಥವಾ ಅನುದಾನಿತ ಶಾಲೆಗಳು ಸಾರ್ವಜನಿಕ ಸಂಸ್ಥೆಗಳು. ಇಲ್ಲಿ ಮಾಂಸಾಹಾರದಷ್ಟೇ ಸಸ್ಯಾಹಾರ ಪದ್ಧತಿ ಹೊಂದಿರುವವರು ಇದ್ದಾರೆ. ಕಲ್ಯಾಣ ಕರ್ನಾಟಕದಲ್ಲಿ ಸಸ್ಯಾಹಾರ ಪದ್ಧತಿ ಹೆಚ್ಚು. ಲಿಂಗಾಯತ, ಬ್ರಾಹ್ಮಣ, ಜೈನ ಸೇರಿದಂತೆ ವಿವಿಧ ಧಾರ್ಮಿಕ ಹಿನ್ನೆಲೆ ವಿದ್ಯಾರ್ಥಿಗಳು ಶಾಲೆಗಳಲ್ಲಿ ಇದ್ದಾರೆ. ಮನೆಯಲ್ಲಿ ಯಾವುದೇ ಆಹಾರ ಸೇವಿಸಿದರೂ ಅದಕ್ಕೆ ಯಾರೂ ಅಭ್ಯಂತರ ಮಾಡುವುದಿಲ್ಲ. ಅದು ಅವರ ವೈಯಕ್ತಿಕ ವಿಷಯ. ಆದರೆ, ಶಾಲೆಗಳಲ್ಲಿ ಮೊಟ್ಟೆ ಕೊಡುವುದರಿಂದ, ಮಕ್ಕಳಲ್ಲಿ ಒಂದು ರೀತಿಯ ಪಂಕ್ತಿಭೇದ ಶುರುವಾಗುತ್ತದೆ. ಸಸ್ಯಾಹಾರಿ ಮಕ್ಕಳೂ ಮೊಟ್ಟೆ ಸೇವಿಸಿದರೆ, ಅವರ ಕುಟುಂಬದ ಧಾರ್ಮಿಕ ಆಚರಣೆಗೆ ಧಕ್ಕೆಯಾಗುತ್ತದೆ.

ಬಸವರಾಜ ಧನ್ನೂರ, ರಾಷ್ಟ್ರೀಯ ಅಧ್ಯಕ್ಷ, ರಾಷ್ಟ್ರೀಯ ಬಸವ ದಳ

'ಪ್ರತಿಷ್ಠೆಗಾಗಿ ವಿರೋಧ ಸಲ್ಲ'



ಮೊಟ್ಟೆ ಮಾಂಸಾಹಾರ ಎಂದು ಪರಿಗಣಿಸುವಾಗಲೇ, ಅದು ಪೌಷ್ಟಿಕಾಂಶ-ಯುಕ್ತ ಆಹಾರವಾಗಿದ್ದು, ಎಲ್ಲರೂ ಇಷ್ಟಪಡುತ್ತಿದ್ದಾರೆ. ಶಾಲೆಗಳಲ್ಲಿ ಮೊಟ್ಟೆ ವಿತರಣೆಗೆ ಯಾವುದೇ ವಿರೋಧ ಇಲ್ಲ. ಮಾಂಸಾಹಾರ ಸೇವಿಸುವವರನ್ನು ಕೀಳಾಗಿ, ಸಸ್ಯಾಹಾರಿಗಳನ್ನು ಮೇಲಾಗಿ ನೋಡುವ ಪರಿಪಾಠವಿದೆ. ಆದರೆ, ಮೊಟ್ಟೆ ತಿನ್ನುವವರು ಹಾಗೂ ತಿನ್ನದಿರುವವರು ಸಮಾನವೇ. ಜೊತೆ ಕುಳಿತ ಮಾತ್ರಕ್ಕೂ ಏನೂ ಆಗುವುದಿಲ್ಲ ಎಂಬ ಸಮಾನತೆಯನ್ನು ತರುವ ಕೆಲಸ ಈ ಮೂಲಕ ಶಾಲಾ ಹಂತದಿಂದಲೇ ಜಾರಿಗೆ ತರಬೇಕು. ಯಾವುದೇ ಸಂಘ-ಸಂಸ್ಥೆಗಳು ಪ್ರತಿಷ್ಠೆಗಾಗಿ ಮೊಟ್ಟೆ ವಿತರಣೆಯನ್ನು ವಿರೋಧಿಸುವುದು ಬೇಡ.

ಈ. ಬಸವರಾಜು, ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಪರಿಷತ್ತು


'ಪ್ರಜಾಸತ್ತೆಗೆ ಬೆಲೆ ಎಲ್ಲಿ?'



ಸಸ್ಯಾಹಾರಿಗಳಲ್ಲಿ ಒಂದು ವರ್ಗ ಬೆಳ್ಳುಳ್ಳಿ ತಿನ್ನುವುದು ಅಧಮ ಎಂದು ಭಾವಿಸುತ್ತದೆ. 'ಇಸ್ಕಾನ್' ಬಿಸಿಯೂಟದಲ್ಲಿ ಬೆಳ್ಳುಳ್ಳಿ ಬಳಸುವುದಿಲ್ಲ. ನಾಳೆ ಬೆಳ್ಳುಳ್ಳಿ ಹಾಕದ ಅಡುಗೆ ತಿನ್ನುವುದು ಅಸಮಾನತೆ. ಅದನ್ನು ಬಲವಂತವಾಗಿ ತಿನ್ನಲು ಒತ್ತಾಯಿಸುತ್ತಾರೆ ಎಂದು ಯಾರಾದರೂ ಹೇಳಿದರೆ? ಮನೆಯ ಖಾಸಗಿ ನಂಬಿಕೆಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಒಂದು ವರ್ಗ ಹೇರುವುದು ಸರಿಯಲ್ಲ. ರಾಜ್ಯದಲ್ಲಿ ಶೇ 30ರಷ್ಟು ಸಸ್ಯಾಹಾರಿಗಳಿಲ್ಲ. ಇವರ ಆಹಾರ ಶತಮಾನದ ಆಹಾರ ಪದ್ಧತಿ ಎಂದು ಹೇಳುತ್ತೇವೆಯೆ? ವೈಯಕ್ತಿಕವಾದ ಧಾರ್ಮಿಕ ನಂಬಿಕೆಗಳು, ಭಾವನೆಗಳು ಅವೈಜ್ಞಾನಿಕವಾಗಿದ್ದರೆ ಅದನ್ನು ಹೋಗಲಾಡಿಸುವುದು ಶಿಕ್ಷಣದ ಮಹತ್ವದ ಉದ್ದೇಶ. ಅಲ್ಪಸಂಖ್ಯಾತ ಶೇ 25ರಷ್ಟು ಮಂದಿ ಊಟ ಮಾಡುವ ಪದ್ಧತಿ ತೊಂದರೆಯಾಗುತ್ತದೆ ಎಂದರೆ, ಶೇ 75ರಷ್ಟು ಮಂದಿಯ ಪ್ರಜಾಸತ್ತೆಗೆ ಬೆಲೆ ಎಲ್ಲಿ?

ಕೆ.ಪಿ. ಸುರೇಶ, ಲೇಖಕರು

'ಆಹಾರದ ಲಾಭವೇ ಮುಖ್ಯ'



ಮೊಟ್ಟೆ ತಿನ್ನುವ ವಿಷಯ ಸಾರ್ವಜನಿಕ ಚರ್ಚೆಗೆ ಗ್ರಾಸವಾಗಿದ್ದು ಬೇಸರದ ಸಂಗತಿ. ಸರ್ಕಾರ ಈ ಬಗ್ಗೆ ತಜ್ಞರ ಅಭಿಪ್ರಾಯ ಸಂಗ್ರಹಿಸಿದೆಯೋ ಇಲ್ಲವೋ ಗೊತ್ತಿಲ್ಲ. ಮೊಟ್ಟೆ ಸಸ್ಯಾಹಾರ, ಮಾಂಸಾಹಾರ ಏನೇ ಆಗಿರಲಿ. ಅದನ್ನು ತಿಂದಾಗ ಏನು ಲಾಭ ಇದೆ ಎನ್ನುವುದು ಪ್ರಮುಖವಾಗಿದೆ. ಎಲ್ಲದರಲ್ಲೂ ನಾವು ಸಮಾನತೆ ನೋಡುತ್ತೇವೆ. ಶಾಲೆಯಲ್ಲಿ ಮಗು ಧರಿಸುವ ಬಟ್ಟೆ, ಬ್ಯಾಗ್ ಎಲ್ಲದರಲ್ಲೂ ಸಮಾನತೆ ನೋಡುತ್ತೇವೆ. ಮೊಟ್ಟೆಗೆ ಯಾಕೆ ನಾವು ಒಂದು ಸ್ಥಾನ ನೀಡುತ್ತೇವೆ? ಯಾರೂ ಸಹ ಬಲವಂತವಾಗಿ ಸಸ್ಯಾಹಾರಿಯಾಗಿ ಎಂದು ಹೇಳಿಲ್ಲ. ಮೊಟ್ಟೆಯಿಂದ ಪ್ರೊಟೀನ್ ಮಾತ್ರ ಸಿಗುತ್ತದೆ. ಆದರೆ, ಸದ್ದಲಿ ಎಲ್ಲವೂ ಸಿಗುತ್ತದೆ.

ಡಾ. ಎಚ್.ಎಸ್. ಪ್ರೇಮಾ, ಪೌಷ್ಟಿಕಾಂಶ ತಜ್ಞೆ

ಪ್ರಜಾವಾಣಿ ಸಂವಾದ

ಸಂವಾದದ ವಿಡಿಯೊ ನೋಡಲು https://bit.ly/3omLLba

ಸುದ್ದಿ 2 ನಿಮಿಷ

ಮಕ್ಕಳಿಗೆ ಮೊಟ್ಟೆ: ಭಾಲ್ಕಿ ಶ್ರೀ ವಿರೋಧ

ಭಾಲ್ಕಿ (ಬೀದರ್ ಜಿಲ್ಲೆ): 'ಕಲ್ಯಾಣ ಕರ್ನಾಟಕ ಭಾಗದ ಮಕ್ಕಳಲ್ಲಿನ ಅಪೌಷ್ಟಿಕತೆ ನೀಗಿಸಲು ರಾಜ್ಯ ಸರ್ಕಾರ 1ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಿಸುತ್ತಿರುವುದು ಅಸಮಂಜಸ' ಎಂದು ಇಲ್ಲಿನ ಹಿರೇಮಠದ ಹಿರಿಯ ಸ್ವಾಮೀಜಿ ಡಾ.ಬಸವಲಿಂಗ ಪಟ್ಟದ್ದೇವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಆಹಾರದಲ್ಲಿ ಭೇದ-ಭಾವ ಉಂಟು ಮಾಡುವುದು ಸರಿಯಲ್ಲ. ಹಣ್ಣು, ಮೊಳಕೆಕಾಳು, ಬೇಳೆಕಾಳು ಸೇರಿ ಅನೇಕ ಧಾನ್ಯಗಳಲ್ಲಿ ಹೇರಳ ಪೌಷ್ಟಿಕಾಂಶ ಇದೆ. ಇಂಥ ಆಹಾರವನ್ನು ಎಲ್ಲ ಮಕ್ಕಳಿಗೂ ವಿತರಿಸಿದರೆ ಅವರು ಶಾರೀರಿಕ, ಬೌದ್ಧಿಕ ಹಾಗೂ ಮಾನಸಿಕವಾಗಿ ಸದೃಢರಾಗುತ್ತಾರೆ' ಎಂದಿದ್ದಾರೆ.

'ಹಿಂದೆಯೂ ಮೊಟ್ಟೆ ವಿತರಣೆ ನಿರ್ಧಾರ ಕೈಗೊಂಡಾಗ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಬಳಿಕ ನಿರ್ಧಾರ ಹಿಂಪಡೆಯಲಾಗಿತ್ತು. ಈಗಲೂ ನಿರ್ಧಾರವನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.



ಮೊಟ್ಟೆ ಕೊಡುವ ನಿರ್ಧಾರ ವಾಪಸ್‌ಗೆ ಆಗ್ರಹ

ಮಂಗಳೂರು: ಶಾಲೆಗಳಲ್ಲಿ ಬಿಸಿಯೂಟದ ಜತೆಗೆ ಮಕ್ಕಳಿಗೆ ಮೊಟ್ಟೆ ಕೊಡುವ ನಿರ್ಣಯವನ್ನು ಹಿಂಪಡೆಯಬೇಕು ಎಂದು ಮೂಡುಬಿದಿರೆ ದಿಗಂಬರ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಅವರು, 'ಬಿಸಿಯೂಟದಲ್ಲಿ ಮೊಟ್ಟೆ ಕೊಡುವ ನಿರ್ಧಾರದಿಂದ ಅಲ್ಪಸಂಖ್ಯಾತ ಜೈನ ಸಮುದಾಯದವರು, ಸಸ್ಯಾಹಾರಿಗಳಿಗೆ ಬೇಸರ ಮತ್ತು ಆತಂಕ ಉಂಟಾಗಿದೆ' ಎಂದಿದ್ದಾರೆ.

'ಸಸ್ಯಾಹಾರಕ್ಕೆ ಒಗ್ಗಿಕೊಂಡಿರುವ ಮಕ್ಕಳು, ಅಹಿಂಸಾ ಧರ್ಮದಲ್ಲಿ ನಡೆದು ಮೊಟ್ಟೆ, ಕಂದ ಮೂಲ ತ್ಯಾಗ ಮಾಡಿರುತ್ತಾರೆ. ಮೊಟ್ಟೆ ನೀಡುವುದರಿಂದ ಧರ್ಮಗಳ ನಡುವೆ ಸಾಮರಸ್ಯ ಕೆಡಿಸಿದಂತಾಗಲಿದೆ. ಮೊಟ್ಟೆ ನೀಡುವ ನಿರ್ಣಯ ಹಿಂಪಡೆದು ಪೌಷ್ಟಿಕಾಂಶವುಳ್ಳ ದ್ವಿದಳ ಧಾನ್ಯ, ಹಾಲು, ಬಾದಾಮಿ ಹಾಲು, ತಾಜಾ ಹಣ್ಣು ಕೊಡಬಹುದು' ಎಂದು ಸಲಹೆ ಮಾಡಿದ್ದಾರೆ.

ವಿವಿಧೆಡೆ ಧಾರಾಕಾರ ಮಳೆ, ಬೆಳೆ ಹಾನಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಬಯಲುಸೀಮೆ ಭಾಗದಲ್ಲಿ ಶುಕ್ರವಾರ ನಸುಕಿನಲ್ಲಿ ಧಾರಾಕಾರ ಮಳೆಯಾಗಿದೆ. ಶಿವನಿ, ದಂದೂರು, ಕಡೂರು, ಬೀರೂರು ಭಾಗದಲ್ಲಿ ಬೆಳೆ ಹಾನಿಯಾಗಿವೆ.

ಶಿವನಿ, ದಂದೂರು ಭಾಗದಲ್ಲಿ ಮೆಕ್ಕೆಜೋಳ, ರಾಗಿ ಬೆಳೆ ನೆಲಕಚ್ಚಿದೆ. ಅಡಿಕೆ, ತೆಂಗಿನ ತೋಟಗಳಲ್ಲಿ ನೀರು ನಿಂತಿದೆ. ಶಿವನಿ ಕೆರೆ ಬಳಿ ಸೇತುವೆ ಮೇಲೆ ನೀರು ಹರಿಯುತ್ತಿದೆ. ವಾಹನಗಳ ಸಂಚಾರಕ್ಕೆ ಅಡಚಣೆಯಾಗಿದೆ.

ಕಡೂರು ಭಾಗದಲ್ಲಿ ಆವತಿ ನದಿ ಮೈದುಂಬಿಕೊಂಡು ಹರಿಯುತ್ತಿದೆ. ಚೌಳಹಿರಿಯೂರಿನಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಬೀರೂರು ಪಟ್ಟಣದ ಅಜ್ಜಂಪುರ ರಸ್ತೆಯ ಕರ್ಲಹಳ್ಳ ಸೇತುವೆ ಮೇಲೆ ನೀರು ಹರಿಯುತ್ತಿದೆ. ರಹೀಮ್ ಸಾಬ್ ಬಡಾವಣೆಗೆ ನೀರು ನುಗ್ಗಿದೆ.

ಚೌಡ್ಲಾಪುರ ಕೆರೆ ಕೋಡಿ ಬಿದ್ದಿದೆ. ಕಡೂರು– ತುರುನಹಳ್ಳಿ ರಸ್ತೆಯಲ್ಲಿ ಸೇತುವೆ ಮೇಲೆ ನೀರು ಹರಿಯುತ್ತಿದೆ

ಹಳ್ಳದಲ್ಲಿ ಕೊಚ್ಚಿ ಹೋದ ರಾಗಿ ಬೆಳೆ (ಹೊಳಲ್ಕೆರೆ ವರದಿ): ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿ ಗಂಗಸಮುದ್ರ, ಕಣಿವೆಹಳ್ಳಿ, ಸಿಂಗೇನಹಳ್ಳಿ ಸುತ್ತಮುತ್ತ ಗುರುವಾರ ತಡರಾತ್ರಿ ಭಾರಿ ಮಳೆ ಸುರಿದಿದ್ದು, ಕೆರೆಗಳು ಕೋಡಿ ಬಿದ್ದು ಅಪಾರ ಪ್ರಮಾಣದ ನೀರು ಹರಿಯುತ್ತಿದೆ.

ಗುರುವಾರ ಮಧ್ಯರಾತ್ರಿಯಿಂದ ಶುಕ್ರವಾರ ಬೆಳಿಗ್ಗೆವರೆಗೂ ಸತತವಾಗಿ ಬಿರುಸಿನ ಮಳೆ ಸುರಿದಿದೆ. ಗಂಗಸಮುದ್ರದ ಕೆರೆ ತುಂಬಿ ನದಿಯಂತೆ ಹರಿಯುತ್ತಿದೆ. ಅಡಿಕೆ ಸಸಿಗಳು ನೀರಿನಲ್ಲಿ ಮುಳುಗಿವೆ.

ಸಿಂಗೇನಹಳ್ಳಿ ಗುಡ್ಡ ಪ್ರದೇಶದಲ್ಲಿ ಧಾರಾಕಾರ ಮಳೆಯಾಗಿದ್ದು, ಕಣಿವೆಹಳ್ಳಿ ಕೆರೆ ತುಂಬಿದ್ದು, ಹಿರೇಹಳ್ಳಕ್ಕೆ ನೀರು ಹರಿಯುತ್ತಿದೆ. ಕಟಾವು ಮಾಡಿದ್ದ ರಾಗಿ ಬೆಳೆ ನೀರುಪಾಲಾಗಿದೆ. ಮೆಕ್ಕೆಜೋಳವೂ ತೆನೆಯಲ್ಲೇ ಮೊಳಕೆಯೊಡೆದಿದ್ದು, ನಷ್ಟ ಸಂಭವಿಸಿದೆ.

ದಾವಣಗೆರೆ ನಗರವೂ ಸೇರಿ ಜಿಲ್ಲೆಯ ಕೆಲವೆಡೆ ಶುಕ್ರವಾರ ರಾತ್ರಿ ಕೆಲ ಕಾಲ ಉತ್ತಮವಾಗಿ ಮಳೆ ಸುರಿಯಿತು.



ಶಿವನಿ ಕೆರೆ ಬಳಿಯ ಸೇತುವೆ ಮೇಲೆ ನೀರು ಹರಿದಿದ್ದು, ಚಿತ್ರದುರ್ಗ ಮತ್ತು ಹೊಳಲ್ಕೆರೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಚಡಣೆಯಾಗಿತ್ತು – ಪ್ರಜಾವಾಣಿ ಚಿತ್ರ

ಧಾರಾಕಾರ ಮಳೆ: ಮೈಸೂರು ಭಾಗದ ನಾಲ್ಕು ಜಿಲ್ಲೆಗಳಲ್ಲಿ ಶುಕ್ರವಾರ ಧಾರಾಕಾರ ಮಳೆ ಸುರಿಯಿತು.

ಕೊಡಗು ಜಿಲ್ಲೆಯ ಮೂರ್ನಾಡಿನಲ್ಲಿ ಕೊಯ್ಲು ಮಾಡಿದ್ದ ಭತ್ತ ತೋಯ್ದು ಹೋಗಿದೆ. ಬಿಸಿಲು ಕಾಣಿಸಿಕೊಂಡಿದ್ದರಿಂದ ರೈತರು ಭತ್ತದ ಕೊಯ್ಲು ಮಾಡಿದ್ದರು.

ಮಂಡ್ಯ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಮೈಸೂರು ನಗರ, ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರು, ಹುಲ್ಲಹಳ್ಳಿ, ಚಿಕ್ಕಯ್ಯನ ಛತ್ರ ಹೋಬಳಿ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಯಿತು.

ಹಾಸನ ಜಿಲ್ಲೆಯಲ್ಲಿ ಕೊಣನೂರು, ಶ್ರವಣಬೆಳಗೊಳ, ಹಳೇಬೀಡು ಕಡೆ ಗುಡುಗು, ಸಿಡಿಲಿನ ಆರ್ಭಟದೊಂದಿಗೆ ಮಳೆ ಸುರಿಯಿತು. ಬೇಲೂರಿನಲ್ಲಿ ಎರಡು ತಾಸು, ಹಿರೀಸಾವೆಯಲ್ಲಿ ಅರ್ಧ ತಾಸು ಹದವಾದ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.70	6,936	5,435
ಹಾರಂಗಿ	2,859	2,856.64	191	1,066
ಕಬಿನಿ	2,284	2,283.68	1,750	700
ಹೇಮಾವತಿ	2,922	2,913.93	2,484	2,060
ಲಿಂಗನಮಕ್ಕಿ	1,819	1,812.30	2,117	00
ಸೂಪಾ (ಮೀ)	564	554.75	1,360	4,374
ಮಾಣಿ	594.36	586.42	779	00
ತುಂಗಭದ್ರಾ	1,633	1,633	8,675	8,226
ಮಲಪ್ರಭಾ	2079.5	2,077.20	1,356	569
ಘಟಪ್ರಭಾ	2,175	2,166	1,045	172
ಭದ್ರಾ	186	185.11	1,507	1,207
ಆಲಮಟ್ಟಿ (ಮೀ)	519.60	518.64	11,332	580
ನಾರಾಯಣಪುರ (ಮೀ)	492.25	492.16	855	167

* ನೆಲಮಟ್ಟದಿಂದ

ಮನೆ ಕುಸಿತ: ದಂಪತಿ ಸಾವು

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ಕೆ. ಮಲ್ಲಂಡಹಳ್ಳಿಯಲ್ಲಿ ಶುಕ್ರವಾರ ರಾತ್ರಿ ಹಳೆಯ ಮನೆ ಕುಸಿದು ವಯೋವೃದ್ಧ ದಂಪತಿ ಮೃತಪಟ್ಟಿದ್ದು, ಒಬ್ಬರು ಗಾಯಗೊಂಡಿದ್ದಾರೆ.

ಗ್ರಾಮದ ನಾಗರಾಜಪ್ಪ (65) ಮತ್ತು ಅವರ ಪತ್ನಿ ಲಕ್ಷ್ಮಮ್ಮ (60) ಮೃತಪಟ್ಟವರು. ಅವರ ಸಂಬಂಧಿ ಸೀನಪ್ಪ ಅವರನ್ನು ಪೊಲೀಸರು ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಕೂಲಿ ಕಾರ್ಮಿಕರಾದ ನಾಗರಾಜಪ್ಪ ದಂಪತಿ ವಾಸವಿದ್ದ ಹಳೆಯ ಮನೆ ಇತ್ತೀಚೆಗೆ ಸುರಿದ ಮಳೆಯಿಂದ ಶಿಥಿಲಗೊಂಡಿತ್ತು. ವೇಮಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮತ ಬೆಲೆ ₹ 50 ಸಾವಿರದಿಂದ ₹ 1 ಲಕ್ಷದವರೆಗೆ'

ಮೈಸೂರು: 'ವಿಧಾನ ಪರಿಷತ್ ಚುನಾವಣೆಯಲ್ಲಿ ಪ್ರತಿ ಮತಕ್ಕೆ ಹಾಸನ, ಕೊಡಗಿನಲ್ಲಿ ₹ 50 ಸಾವಿರದಿಂದ ₹ 1 ಲಕ್ಷದವರೆಗೆ ದರ ನಿಗದಿ ಮಾಡಲಾಗಿದೆ ಎಂದು ಗ್ರಾಮ ಪಂಚಾಯಿತಿ ಸದಸ್ಯರು ತಿಳಿಸಿದ್ದಾರೆ. ಚುನಾವಣೆಯನ್ನು ಯಾವ ಸ್ಥಿತಿಗೆ ತಂದು ನಿಲ್ಲಿಸಿದ್ದೇವೆ ಎಂಬುದನ್ನು ರಾಜಕೀಯ ನಾಯಕರು ಆತ್ಮಾಲೋಕನ ಮಾಡಿಕೊಳ್ಳಬೇಕು' ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್ ವಿಶ್ವನಾಥ್ ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಕನಿಷ್ಠ ₹ 40 ಕೋಟಿಯಿಂದ ₹ 1,700 ಕೋಟಿಯವರೆಗೆ ಆಸ್ತಿ ಘೋಷಿಸಿಕೊಂಡವರಿಗೆ ಟಿಕೆಟ್ ನೀಡಿರುವ ಮುಖಂಡರಿಗೆ ಚುನಾವಣೆ ದಿಕ್ಕೆಡಿಸುತ್ತಿದ್ದೇವೆ ಎಂದು ಅನ್ನಿಸುವುದಿಲ್ಲವೆ? ಸಿದ್ದರಾಮಯ್ಯ, ಬಿ.ಎಸ್.ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ ಜನರಿಗೆ ನೀಡುತ್ತಿರುವ ಸಂದೇಶವಾದರೂ ಏನು' ಎಂದು ಪ್ರಶ್ನಿಸಿದರು.

'ಒಟ್ಟಾಗಿ ಕೆಲಸ ಮಾಡಿ ಗೆಲ್ಲಿಸಿ'

ಕಲಬುರಗಿ: 'ಕಾಂಗ್ರೆಸ್ ಹಣವಂತರಿಗೆ ಮಣೆ ಹಾಕದೆ ಸಾಮಾನ್ಯ ಕಾರ್ಯಕರ್ತನನ್ನು ಚುನಾವಣೆಗೆ ನಿಲ್ಲಿಸಿದೆ. ನೀವೆಲ್ಲ ಒಗ್ಗಟ್ಟಾಗಿ ಕೆಲಸ ಮಾಡಬೇಕು. ನನ್ನನ್ನಂತೂ ಸೋಲಿಸಿದ್ದೀರಿ, ಕಾಂಗ್ರೆಸ್ ಅಭ್ಯರ್ಥಿ ಶಿವಾನಂದ ಪಾಟೀಲರನ್ನಾದರೂ ಗೆಲ್ಲಿಸಿ' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕಲಬುರಗಿ– ಯಾದಗಿರಿ ವಿಧಾನ ಪರಿಷತ್ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಪರ ಶುಕ್ರವಾರ ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಅಭಿವೃದ್ಧಿ ಹಾಗೂ ತತ್ವದ ಮೇಲೆ ಕಾಂಗ್ರೆಸ್ ರಾಜಕೀಯ ಮಾಡುತ್ತ ಬಂದಿದೆ. ಆದರೆ, ಬಿಜೆಪಿಯ ತತ್ವ ಸಿದ್ಧಾಂತ ಹೇಗಿವೆ ಎನ್ನುವುದನ್ನು ನೀವು ಮನಗಾಣಬೇಕು' ಎಂದರು.

ಸಿದ್ದರಾಮಯ್ಯ ಬೆಂಗಾವಲು ವಾಹನ ಅಪಘಾತ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಚಿಕ್ಕಮಗಳೂರು ಸಮೀಪದ ಮಲ್ಲೇನಹಳ್ಳಿ ಕ್ರಾಸ್‌ನಲ್ಲಿ ಸಿದ್ದರಾಮಯ್ಯ ಅವರ ಬೆಂಗಾವಲು ವಾಹನ ಅಪಘಾತಕ್ಕೀಡಾಗಿದೆ.

ಈ ಅಪಘಾತದಲ್ಲಿ ಸಿಬ್ಬಂದಿಯೊಬ್ಬರಿಗೆ ತೀವ್ರ ಗಾಯವಾಗಿದ್ದು, ಗಾಯಾಳುವನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಗೊಂಡ ಸಿಬ್ಬಂದಿ ರಂಗನಾಥ್ ಎಂದು ಗುರುತಿಸಲಾಗಿದೆ. ಇವರನ್ನು ಆಸ್ಪತ್ರೆಗೆ ಸೇರಿಸಲು ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೆರವಾದರು. ಚಿಕ್ಕಮಗಳೂರಿನಿಂದ ಶಿವಮೊಗ್ಗಕ್ಕೆ ಬರುವಾಗ ವಾಹನದ ಚಕ್ರ ಜ್ಯಾಮ್ ಆದ ಪರಿಣಾಮ ಈ ಅವಘಡ ಸಂಭವಿಸಿದೆ ಎನ್ನಲಾಗಿದೆ.

ನಾಯಕನಿಗಷ್ಟೇ ಬಾಡೂಟ, ಮಿಕ್ಕವರಿಗೆ ಸೊಪ್ಪು

● ವಿಶಾಖ ಎನ್.


ನಾವು ನೋಡಿದ ಸಿನಿಮಾ

ಮದಗಜ (ಕನ್ನಡ)

- ನಿರ್ಮಾಣ: ಉಮಾಪತಿ ಶ್ರೀನಿವಾಸ ಗೌಡ
- ನಿರ್ದೇಶನ: ಎಸ್. ಮಹೇಶ್ ಕುಮಾರ್
- ತಾರಾಗಣ: ಶ್ರೀಮುರಳಿ, ದೇವಯಾನಿ, ಆಶಿಕಾ ರಂಗನಾಥ್, ಜಗಪತಿ ಬಾಬು, ಗರುಡಾ ರಾಮ್, ರಂಗಾಯಣ ರಘು, ಚಿಕ್ಕಣ್ಣ

'ಸಾವೇ ಎದುರಾದರೂ ಸರಿ, ಇದು ಇರುವವರೆಗೂ ಯಾರ ಮೇಲೂ ಕೈಮಾಡಕೂಡದು' ತಾಯಿ ಕಂಕಣ ಕಟ್ಟುತ್ತ ಆಜ್ಞೆ ಹೊರಡಿಸಿದಾಗಲೇ, ನಮಗೆ ಆ ಕಂಕಣ ಕಳಚಿ ನಾಯಕ ಹೊಡೆಯುವುದೇ ಗ್ಯಾರಂಟಿ ಅಂತ ಖಾತರಿಯಾಗುತ್ತದೆ. ಕಂಕಣ ಎರಡು ಸಲ ಕಳಚುತ್ತದೆ. ಒಮ್ಮೆ, ಹೊಡೆಯಬಂದವನ ಕತ್ತಿಯಂಚಿಗೆ ಸಿಲುಕಿ. ಮತ್ತೊಮ್ಮೆ, ತಾಯಿಯೇ ಅದನ್ನು ಬಿಚ್ಚುವುದರಿಂದ. ಕಂಕಣ ಕಟ್ಟುವ ಮೊದಲು ನಾಯಕ ಚಚ್ಚಪ್ಪನಾಗಿಯೇ ಫೇಮಸ್. ಕಟ್ಟಿದ ಮೇಲೆ ಆಜ್ಞೆಗೆ ಕಟ್ಟಪ್ಪನಾಗುವುದು ಕೆಲವು ನಿಮಿಷಗಳಷ್ಟೆ.

ತೆಲುಗಿನಲ್ಲಿ ಈ ಭಾವದ ಚಿತ್ರಗಳದ್ದೊಂದು ಸಿದ್ಧಭಿತ್ತಿ ಇದೆ. ಕುಟುಂಬದ ನಂಟು, ಅದರಿಂದ ದೂರಾಗಲು ಕಾರಣ ಉಂಟು, ಉದ್ದಕ್ಕೂ ಅಮ್ಮನ ಸೆಂಟಿಮೆಂಟು, ಆಗೀಗ ನಾಯಕಿಯೆಂಬ ಪೆಪ್ಪರಮಿಂಟು, ಕಾಮಿಡಿಯ ಅಂಟು, ಖಳರ ಜಿಗುಟು... ಹೀಗೆ. ಈ ಚಿತ್ರಕ್ಕೂ ನಿರ್ದೇಶಕರು ಅವೆಲ್ಲವನ್ನೂ ಎತ್ತಿಕೊಂಡಿದ್ದಾರೆ. ಚಿಕ್ಕಣ್ಣ, ಶಿವರಾಜ್ ಕೆ.ಆರ್. ಪೇಟೆ ಇದ್ದರೂ ಅವರು ಯಾವಾಗ ಕಚಗುಳಿ ಇಡುವರೋ ಎಂದು ಕಾದಿದ್ದೇ ಬಂತು. ಖಳರಲ್ಲಿ ಪೊಗದಸ್ತಾದ ಗಡ್ಡ, ಮೀಸೆ ಇದೆಯಷ್ಟೆ. ಕನಿಷ್ಠ ರಾಚುವಂತೆ ಹೊಡೆಯಲು ಅವರಿಗೆ ಒಂದು ಗಟ್ಟಿ ಡೈಲಾಗೂ ಇಲ್ಲ. ಹಳ್ಳಿಯ ರೈತಾಪಿ ವರ್ಗದ ಭೂಮಿಪುತ್ರರ ದಂಡೇ ಇದ್ದರೂ ಅವರೆಲ್ಲರೂ ಕೈಲಿ ಮಚ್ಚು-ಕುಡ್ಲು (ದೇಸಿ ಭಾಷೆ) ಹಿಡಿದು ಊರು ಸುತ್ತುವರು. ಕೆಲವರು ಓಪನ್ ಜೀಪ್‌ನಲ್ಲಿ ಮೆರವಣಿಗೆ ಹೊರಡುವುದೂ ಇದೆ. ಅವರೆಲ್ಲ ಭೂಮಿ ಹಕ್ಕಿಗೆ ಹೋರಾಡುತ್ತಿರುವ ರಾಜಾಮೀಸೆಯ ಜಗಪತಿ ಬಾಬುಗೆ ಉಘೇ ಉಘೇ ಅನ್ನಬೇಕು. ಒಳ್ಳೊಳ್ಳೆಯ ಹಾಫ್ ಕುರ್ತಾ ಹಾಕಿ ಸ್ಲೋಮೋಷನ್‌ನಲ್ಲೇ ಹೆಚ್ಚಾಗಿ ಕದಲುವ, ಟ್ರಿಮ್ ಮಾಡಿದ ಗಡ್ಡ-ಮೀಸೆಯ ಜಗಪತಿ ಬಾಬು ಕಣ್ಣಲ್ಲಿ ನಿಗಿನಿಗಿ ಕೆಂಡ. ಅವರ ಡೈಲಾಗಿಗಿಂತ ಹಿನ್ನೆಲೆ ವಾದ್ಯದ ಸಂಗೀತವನ್ನೇ ಹೆಚ್ಚು ಮೊಳಗಿಸಿ ರವಿ ಬಸ್ರೂರು ತೂಗಿಸಿಕೊಂಡು ಹೋಗಿರುವುದೂ ಸಿನಿಮೀಯ ಜಾಣ್ಮೆ.



'ಮದಗಜ' ಚಿತ್ರದಲ್ಲಿ ಶ್ರೀಮುರಳಿ

ಶ್ರೀಮುರಳಿ ಇಡೀ ಚಿತ್ರದಲ್ಲಿ ಎದ್ದುಕಾಣಬೇಕು ಅಂತಹ ಬರವಣಿಗೆ ಇದೆ. ಅವರ ಆಂಗಿಕ ಅಭಿನಯ ಕೂಡ 'ಮಾಸ್' ಚಿತ್ರಕ್ಕೆ ತಕ್ಕಂತೆ ಇದೆ. ಸಂಭಾಷಣೆಯಲ್ಲಿ ಪಂಚುಗಳೂ ಅವರಿಗಷ್ಟೆ ಮೀಸಲು. ತಾಯಿಯಾಗಿ ದೇವಯಾನಿ ತುಂಬಾ ಸೊರಗಿದಂತೆ ಕಾಣುತ್ತಾರೆ. ಅವರ ನಗು ಹಾಗೂ ಅಳುವಿನ ನಡುವಿನ ವ್ಯತ್ಯಾಸ ಗೊತ್ತೇ ಆಗುವುದಿಲ್ಲ. ನವೀನ್‌ಕುಮಾರ್ ಅವರ ಸಿನಿಮಾಟೊಗ್ರಫಿ ಇಂತಹ ಲೋಪಗಳನ್ನೆಲ್ಲ ತುಂಬಾ ಚೆನ್ನಾಗಿ ಕಾಣಿಸಿದೆ. ಇಡೀ ಚಿತ್ರದ ರಿಲೀಫ್ ನಾಯಕಿ ಆಶಿಕಾ ರಂಗನಾಥ್. ಅವರ ಸುಂದರ ವದನ, ಅಭಿನಯ ನಿಯಂತ್ರಣ ಎರಡೂ ನೆನಪಿನಲ್ಲಿ ಉಳಿಯುತ್ತದೆ. ಅವರ ಪಾತ್ರಪೋಷಣೆಯನ್ನೂ ನಿರ್ದೇಶಕರು ಸರಿಯಾಗಿ ಮಾಡಿಲ್ಲ. ಗರುಡಾ ರಾಮ್ ಅವರ ಗೋಲಿಯಂತಹ ಒಂದು ಕಣ್ಣನ್ನು ನೋಡನೋಡುತ್ತಾ ನಮ್ಮ ಕಣ್ಣೂ ಹೋಗುತ್ತದೆ. ರಂಗಾಯಣ ರಘು ಒಂಥರಾ ಸೂತ್ರಧಾರ.

ರವಿ ಬಸ್ರೂರು ಅವರ ಹಿನ್ನೆಲೆ ಸಂಗೀತದ ವಾದ್ಯಗಳದ್ದೇ ಚಿತ್ರದಲ್ಲಿ ಸಿಂಹಪಾಲು. ಮೌನವನ್ನು ಸಂಪೂರ್ಣ ಅಳಿಸಿ, ಸದ್ದು–ಗುದ್ದಿಗೆ ಜೈ ಎನ್ನದೆ ಅವರಿಗೆ ವಿಧಿಯಿಲ್ಲ. ಸಣ್ಣಪುಟ್ಟ ರೋಮಾಂಚನಗಳು ಇದ್ದೂ ಕಮರ್ಷಿಯಲ್ ಕಾಡಿನಲ್ಲಿ 'ಮದಗಜ' ವಿಪರೀತ ಒಂಟಿ ಎನಿಸುತ್ತದೆ. ಉಳಿದ ಪ್ರಾಣಿಗಳಿಗೆ ಸೊಪ್ಪು ತಿನ್ನಿಸಿ, ಅವರಿಗಷ್ಟೇ ಬಾಡೂಟ ಇಟ್ಟರೆ ಹೀಗೆಯೇ ಆಗುವುದು.

ಓಮೈಕ್ರಾನ್ ಸೋಂಕಿತರ ಜೊತೆ ಸಂಪರ್ಕ ● ಒಂದು ಮನೆ ಸೀಲ್‌ಡೌನ್

ಮತ್ತೆ ಇಬ್ಬರಿಗೆ ಕೋವಿಡ್ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಸೋಂಕಿತ ವ್ಯಕ್ತಿಯ ನೇರ ಸಂಪರ್ಕಕ್ಕೆ ಬಂದ ಮತ್ತಿಬ್ಬರು ಕೋವಿಡ್ ಹೊಂದಿರುವುದು ಶುಕ್ರವಾರ ದೃಢಪಟ್ಟಿದೆ. ಇದರೊಂದಿಗೆ ಓಮೈಕ್ರಾನ್ ಸೋಂಕಿತರ ನೇರ ಸಂಪರ್ಕದಿಂದ ಕೋವಿಡ್‌ಗೆ ಒಳಗಾದವರ ಸಂಖ್ಯೆ ಏಳಕ್ಕೆ ಹೆಚ್ಚಿದೆ.

ಈ ಏಳೂ ಮಂದಿಯ ಮಾದರಿಯನ್ನು ಬಿಬಿಎಂಪಿಯು ಕೋವಿಡ್ ಪರೀಕ್ಷಾ ಮಾದರಿಗಳನ್ನು ವೈರಾಣು ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಕಳುಹಿಸಿ ಕೊಟ್ಟಿದೆ.

‘ಇವರಲ್ಲಿ ಎಷ್ಟು ಮಂದಿಯಲ್ಲಿ ಓಮೈಕ್ರಾನ್ ಸೋಂಕು ಹೊಂದಿದ್ದಾರೆ ಎಂಬುದು ಜಿನೋಮ್ ಸೀಕ್ವೆನ್ಸಿಂಗ್ ಫಲಿತಾಂಶ ಕೈಸೇರಿದ ಬಳಿಕವೇ ತಿಳಿಯಲಿದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ಓಮೈಕ್ರಾನ್ ಸೋಂಕಿತರಿಬ್ಬರ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದ 482 ಮಂದಿಯನ್ನು ಬಿಬಿಎಂಪಿ ಗುರುತಿಸಿತ್ತು.



ಜೆ.ಪಿ.ನಗರದಲ್ಲಿ ಮೈಕ್ರೊಕಂಟೈನ್‌ಮೆಂಟ್ ಪ್ರದೇಶಕ್ಕೆ ಜನರ ಪ್ರವೇಶ ನಿರ್ಬಂಧಿಸಲು ಬಿಬಿಎಂಪಿ ಬ್ಯಾರಿಕೇಡ್ ಅಳವಡಿಸಿರುವುದು – ಪ್ರಜಾವಾಣಿ ಚಿತ್ರ

‘ಸಂಪರ್ಕಕ್ಕೆ ಸಿಗದಿದ್ದವರಲ್ಲಿ ಆರು ಮಂದಿ ಪತ್ತೆ’

ದಕ್ಷಿಣ ಆಫ್ರಿಕಾವೂ ಸೇರಿದಂತೆ ವಿದೇಶಗಳಿಂದ ಬಂದು ಕ್ವಾರಂಟೈನ್‌ಗೆ ಒಳಗಾಗಿದ್ದ 57 ಮಂದಿಯಲ್ಲಿ 10 ಮಂದಿ ಸಂಪರ್ಕಕ್ಕೆ ಸಿಕ್ಕಿಲ್ಲದೇ ಇದ್ದುದು ಬಿಬಿಎಂಪಿ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿತ್ತು.

‘ದೂರವಾಣಿ ಸಂಪರ್ಕಕ್ಕೆ ಸಿಗದ 10 ಮಂದಿಯಲ್ಲಿ 6 ಮಂದಿಯನ್ನೂ ಈಗಾಗಲೇ ಪತ್ತೆ ಹಚ್ಚಿದ್ದೇವೆ. ಇನ್ನು ನಾಲ್ಕು ಮಂದಿಯ ಸುಳಿವು ಸಿಕ್ಕಿದೆ. ಶನಿವಾರ ಬೆಳಿಗ್ಗೆ ಒಳಗೆ ಅವರೆಲ್ಲರನ್ನೂ ಪತ್ತೆ ಹಚ್ಚಿ ಕೋವಿಡ್ ಪರೀಕ್ಷೆಗೆ ಒಳಪಡಿಸುತ್ತೇವೆ. ಅವರು ಹೊರಗೆ ಅಡ್ಡಾಡದಂತೆ ಕ್ರಮ ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಸೋಂಕಿತರ ಸಂಪರ್ಕಕ್ಕೆ ಬಂದ ಎಲ್ಲರನ್ನೂ ಪ್ರತ್ಯೇಕ ವಾಸಕ್ಕೆ ಒಳಪಡಿಸಿದ್ದೇವೆ. ಒಂದು ಮನೆಯನ್ನು ಕ್ಲಸ್ಟರ್ ಎಂದು ಗುರುತಿಸಿ ಸೀಲ್‌ಡೌನ್ ಮಾಡಿದ್ದೇವೆ’ ಎಂದು ತ್ರಿಲೋಕಚಂದ್ರ ತಿಳಿಸಿದರು.

‘ಜಿನೋಮ್ ಸೀಕ್ವೆನ್ಸಿಂಗ್: ಫಲಿತಾಂಶಕ್ಕೆ 2 ವಾರ ಕಾಯಬೇಕು’

ಕೋವಿಡ್ ದೃಢಪಟ್ಟವರ ಮಾದರಿಯ ಜಿನೋಮ್ ಸೀಕ್ವೆನ್ಸಿಂಗ್‌ನ ಫಲಿತಾಂಶವನ್ನು ಒಂದೆರಡು ದಿನಗಳಲ್ಲೇ ಪಡೆಯುವ ವ್ಯವಸ್ಥೆ ಇಲ್ಲದಿರುವುದು ಕೂಡಾ ಓಮೈಕ್ರಾನ್ ಹರಡುವುದನ್ನು ನಿಯಂತ್ರಿಸಲು ಸಮಸ್ಯೆಯಾಗಿ ಪರಿಣಮಿಸಿದೆ.

ಓಮೈಕ್ರಾನ್ ಸೊಂಕಿತರ ಸಂಪರ್ಕಕ್ಕೆ ಬಂದವರಲ್ಲಿ ಕೋವಿಡ್ ದೃಢಪಟ್ಟರೆ ರೋಗ ಲಕ್ಷಣ ಇಲ್ಲದಿದ್ದರೂ ಜಿನೋಮ್ ಸೀಕ್ವೆನ್ಸಿಂಗ್ ಫಲಿತಾಂಶ ಬರುವವರೆಗೂ ಅವರನ್ನು ಕ್ವಾರಂಟೈನ್‌ಗೆ ಒಳಪಡಿಸಬೇಕು. ಫಲಿತಾಂಶ ಬರುವುದರೊಳಗೆ ಅವರು ಕೋವಿಡ್‌ನಿಂದ ಗುಣಮುಖರಾದರೂ ಬಿಟ್ಟು ಕಳುಹಿಸುವಂತಿಲ್ಲ.

‘ಕೋವಿಡ್ ಪರೀಕ್ಷಾ ಮಾದರಿಗಳನ್ನು ವೈರಾಣು ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಒಳಪಡಿಸುವ ಪದ್ಧತಿಯನ್ನು ಹಿಂದಿನಿಂದಲೂ ಅನುಸರಿಸುತ್ತಿದ್ದೆವು. ಈ ಹಿಂದೆ ಅದರ ಫಲಿತಾಂಶ ಬರುವುದಕ್ಕೆ ಎರಡು ತಿಂಗಳು ಸಮಯ ತಗುಲುತ್ತಿತ್ತು. ಏಪ್ರಿಲ್‌ನಲ್ಲಿ ಕಳುಹಿಸಿದ ಮಾದರಿಗಳ ಫಲಿತಾಂಶ ಜೂನ್‌ನಲ್ಲಿ ಬರುತ್ತಿತ್ತು. ಈಗ ಅಂತಹ ಪರಿಸ್ಥಿತಿ ಇಲ್ಲ. ಆದಷ್ಟು ಬೇಗ ಫಲಿತಾಂಶ ಪಡೆಯಲು ಕ್ರಮ ಕೈಗೊಂಡಿದ್ದೇವೆ. ಎರಡು ವಾರದೊಳಗೆ ಫಲಿತಾಂಶ ಬರುತ್ತಿದೆ. ವೈರಾಣು ಪ್ರಮಾಣ ಹೆಚ್ಚು ಇರುವ 10–15 ಮಾದರಿಗಳನ್ನು ಸೀಕ್ವೆನ್ಸಿಂಗ್‌ಗೆ ಕಳುಹಿಸುತ್ತಿದ್ದೇವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ನಗರದಲ್ಲಿ ಕೋವಿಡ್ ಪತ್ತೆ ಪ್ರಮಾಣದಲ್ಲಿ ಹೆಚ್ಚೇನೂ ಏರಿಕೆ ಆಗಿಲ್ಲ. ಈಗಲೂ ಪರೀಕ್ಷೆಗೊಳಗಾದವರಲ್ಲಿ ಕೋವಿಡ್ ಪತ್ತೆ ದರವು ಶೇ 0.45ರಷ್ಟು ಮಾತ್ರ ಇದೆ. 154 ವಾರ್ಡ್‌ಗಳಲ್ಲಿ 10ಕ್ಕೂ ಅಧಿಕ ಕೋವಿಡ್ ಪ್ರಕರಣಗಳಿವೆ. 57 ಕಡೆ ಕಂಟೈನ್‌ಮೆಂಟ್ ಪ್ರದೇಶಗಳು ಸಕ್ರಿಯವಾಗಿವೆ. ಬೊಮ್ಮನಹಳ್ಳಿ (22) ಹಾಗೂ ಪೂರ್ವ (12) ವಲಯಗಳಲ್ಲಿ ಹೆಚ್ಚು ಪ್ರಕರಣಗಳಿವೆ.

‘ಚಿಕಿತ್ಸೆಗೆ ವಿಶೇಷ ಐಸಿಯು’

ವೈದ್ಯಕೀಯ ಕಾಲೇಜುಗಳ ನಿರ್ದೇಶಕರೊಂದಿಗೆ ಸಚಿವರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸಿನ ಅನುಸಾರ ಓಮೈಕ್ರಾನ್ ಸೋಂಕಿತರಿಗೆ ವಿಶೇಷ ತೀವ್ರ ನಿಗಾ ಘಟಕ (ಐಸಿಯು) ಹಾಗೂ ವಾರ್ಡ್ ಕಲ್ಪಿಸಲಾಗುವುದು’ ಎಂದು ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.



ಡಾ.ಕೆ. ಸುಧಾಕರ್

ನಗರದಲ್ಲಿ ಕೊರೊನಾ ವೈರಾಣುವಿನ ಓಮೈಕ್ರಾನ್ ತಳಿ ಪ್ರಕರಣಗಳು ಪತ್ತೆಯಾಗಿರುವುದರಿಂದ ವೈದ್ಯಕೀಯ ಕಾಲೇಜುಗಳ ನಿರ್ದೇಶಕರ ಜೊತೆಗೆ ಶುಕ್ರವಾರ ಸಭೆ ನಡೆಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ‘ಡೆಲ್ಟಾ ತಳಿಯ ಸೋಂಕಿತರನ್ನು ಪ್ರತ್ಯೇಕ ವಾರ್ಡ್‌ನಲ್ಲಿ ಇರಿಸಿ, ಚಿಕಿತ್ಸೆ ನೀಡಲಾಗುತ್ತದೆ. ಓಮೈಕ್ರಾನ್ ತಳಿಯ ಸೋಂಕಿತರ ಚಿಕಿತ್ಸೆಗೆ ಮೀಸಲಿಡಬೇಕಾದ ವಿವಿಧ ಮಾದರಿಯ ಹಾಸಿಗೆಗಳ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುವುದು’ ಎಂದು ಹೇಳಿದರು.

‘ಸಚಿವ ಸಂಪುಟದ ನಿರ್ಧಾರದಂತೆ ಮಕ್ಕಳ ಐಸಿಯುಗಳ ಸಿದ್ಧತೆಗೆ ಸೂಚಿಸಲಾಗಿದೆ. ಗೃಹ ವೈದ್ಯರ ಕೋವಿಡ್ ಅಪಾಯ ಭತ್ಯೆ ಬಾಕಿ ಇದ್ದು, ಹಣಕಾಸು ಇಲಾಖೆಯಿಂದ ₹ 55 ಕೋಟಿ ಬಿಡುಗಡೆ ಮಾಡಿಸಲಾಗಿದೆ. ತಾಂತ್ರಿಕ ಸಮಸ್ಯೆಯಿಂದ ಬ್ಯಾಂಕ್ ಖಾತೆಗಳಿಗೆ ವೇತನ ಜಮಾ ಆಗಿರಲಿಲ್ಲ. ಈ ತಿಂಗಳಿನಿಂದ ಸಮಸ್ಯೆ ಆಗುವುದಿಲ್ಲ’ ಎಂದು ಭರವಸೆ ನೀಡಿದರು.

ಇನ್ನಷ್ಟು ಬಿಗಿಕ್ರಮ ಅಗತ್ಯ: ಗೌರವ್ ಗುಪ್ತ

ಬೆಂಗಳೂರು: ನಗರದಲ್ಲಿ ಓಮೈಕ್ರಾನ್ ವೈರಾಣುವಿನಿಂದ ಕೋವಿಡ್ ಹರಡಿದ ಪ್ರಕರಣ ಪತ್ತೆಯಾಗಿರುವುದರಿಂದ ಸೋಂಕು ಹರಡುವಿಕೆ ತಡೆಯಲು ಇನ್ನಷ್ಟು ಬಿಗಿ ಕ್ರಮ ಕೈಗೊಳ್ಳಲು ಬಿಬಿಎಂಪಿ ಚಿಂತನೆ ನಡೆಸಿದೆ.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ಬರುವ ದಿನಗಳಲ್ಲಿ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳುವ ಅಗತ್ಯ ಇದೆ. ಇತ್ತೀಚೆಗೆ ಸಡಿಲಗೊಳಿಸಿದ ಕೋವಿಡ್ ನಿಯಂತ್ರಣ ನಿಯಮಗಳನ್ನು ಮತ್ತೆ ಜಾರಿಗೊಳಿಸಬಹುದು. ಸಮಸ್ಯೆಯ ತೀವ್ರತೆ ನೋಡಿಕೊಂಡು, ತಜ್ಞರ ಅಭಿಪ್ರಾಯ ಪಡೆದು ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ’ ಎಂದರು.

‘ಇಂತಹ ಸಂದರ್ಭ ಎದುರಾಗಬಹುದು ಎಂದು ಮುಂದಾಲೋಚನೆ ಹೊಂದಿದ್ದೆವು. ಇದಕ್ಕೆ ಪೂರ್ವ ಸಿದ್ಧತೆಯನ್ನೂ ಮಾಡಿಕೊಂಡಿದ್ದೇವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಂಕು ಹರಡುವಿಕೆ ತಡೆಯಲು ನಿರಂತರ ಪ್ರಯತ್ನ ಮಾಡುತ್ತಿದ್ದೇವೆ. ಅಂತರರಾಷ್ಟ್ರೀಯ ಪ್ರಯಾಣಿಕರ ಬಗ್ಗೆ ನಿಗಾ ಇಟ್ಟಿದ್ದೇವೆ. ಕೋವಿಡ್ ಪರೀಕ್ಷೆಯ ಸಂಖ್ಯೆ ಹೆಚ್ಚಳ ಮಾಡಲಾಗಿದೆ. ಸೋಂಕಿತರ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚಿ, ಅವರ ಪ್ರತ್ಯೇಕವಾಸಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಅಗತ್ಯ ಇರುವ ಕಡೆ ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸುತ್ತಿದ್ದೇವೆ’ ಎಂದರು.

‘ಓಮೈಕ್ರಾನ್ ಕೊರೊನಾ ವೈರಸ್‌ನ ರೂಪಾಂತರಗೊಂಡ ತಳಿ. ಇದರ ನಿಯಂತ್ರಣಕ್ಕೆ ಮಾಸ್ಕ್ ಧರಿಸುವುದು ಕಡ್ಡಾಯ. ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವುದರ ಬಗ್ಗೆಯೂ ಬಗ್ಗೆ ಹೆಚ್ಚಿನ ಒತ್ತು ನೀಡಬೇಕಿದೆ. ಇದಕ್ಕಾಗಿ 54 ತಂಡಗಳನ್ನು ನಿಯೋಜಿಸಿದ್ದೇವೆ’ ಎಂದು ತಿಳಿಸಿದರು.

‘ರೂಪಾಂತರಗೊಂಡ ತಳಿಯ ನಿಯಂತ್ರಣಕ್ಕೆ ಇನ್ನಷ್ಟು ಮುಜಾಗ್ರತಾ ಕ್ರಮ ಅನುಸರಿಸಬೇಕು. ಲಸಿಕೆ ಹಾಕಿದರೆ ಹೆಚ್ಚಿನ ಪರಿಣಾಮ ಇರಲ್ಲ. ಲಸಿಕೆ ಹಾಕಿಸಿಕೊಂಡವರು ಆಸ್ಪತ್ರೆಗೆ ದಾಖಲಾಗುವ ಪ್ರಮೇಯ ಕಡಿಮೆ. ಲಸಿಕೆಯನ್ನು ಉಚಿತವಾಗಿ ನೀಡುವುದಕ್ಕೂ ಎಲ್ಲ ಕಡೆ ವ್ಯವಸ್ಥೆ ಮಾಡಿದ್ದೇವೆ. ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಲಸಿಕೆ ಲಭ್ಯವಿದೆ’ ಎಂದರು.

ವಾರಾಂತ್ಯದ ಕರ್ಫ್ಯೂ ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ಓಮೈಕ್ರಾನ್ ತಳಿಯ ಸೋಂಕಿನ ಪ್ರಕರಣಗಳು ದೃಢಪಟ್ಟಿರುವುದು ಮತ್ತು ಕೆಲವೆಡೆ ‘ಕ್ಲಸ್ಟರ್’ ಮಾದರಿಯಲ್ಲಿ ಸೋಂಕು ವ್ಯಾಪಿಸುತ್ತಿರುವ ಕಾರಣದಿಂದ ರಾಜ್ಯದಲ್ಲಿ ತಕ್ಷಣವೇ ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಬೇಕು ಎಂದು ಕಾಂಗ್ರೆಸ್ ಶಾಸಕ ಎಚ್‌.ಕೆ. ಪಾಟೀಲ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿಯವರಿಗೆ ಶುಕ್ರವಾರ ಪತ್ರ ಬರೆದಿರುವ ಅವರು, ‘ಓಮೈಕ್ರಾನ್ ವೈರಾಣು ಎಷ್ಟು ಅಪಾಯಕಾರಿ ಎಂಬುದರ ಕುರಿತು ಇನ್ನೂ ಸ್ಪಷ್ಟ ವರದಿ ಲಭಿಸಿಲ್ಲ. ಇಂತಹ ಸನ್ನಿವೇಶದಲ್ಲಿ ಜನರ ಪ್ರಾಣ ರಕ್ಷಣೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಬೇಕು. ವಾರಾಂತ್ಯದ ಕರ್ಫ್ಯೂ, ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡುವುದನ್ನು ಕಡ್ಡಾಯಗೊಳಿಸುವುದನ್ನು (ವರ್ಕ್ ಫ್ರಂ ಹೋಮ್) ಜಾರಿಗೆ ತರಬೇಕು’ ಎಂದು ಒತ್ತಾಯಿಸಿದ್ದಾರೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿ ತನ್ನ 136ನೇ ಸಭೆಯಲ್ಲಿ ತಜ್ಞರು ನೀಡಿರುವ ಸಲಹೆ ಮತ್ತು ಶಿಫಾರಸುಗಳನ್ನು ಬಹಿರಂಗಪಡಿಸಬೇಕು. ಸಭೆಯ ನಡಾವಳಿಗಳನ್ನೂ ತಿಳಿಸಬೇಕು. ವಿದೇಶಗಳಿಂದ ಬರುವ ಎಲ್ಲ ಪ್ರಯಾಣಿಕರನ್ನು ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ ಇರಿಸಬೇಕು. ಕಡ್ಡಾಯ ಪರೀಕ್ಷೆಯ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಓಮೈಕ್ರಾನ್: 320 ಹಾಸಿಗೆ ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ನೂತನ ತಳಿ ಓಮೈಕ್ರಾನ್ ನಗರದಲ್ಲಿ ಕಾಣಿಸಿಕೊಂಡಿರುವುದರಿಂದ ಸೋಂಕಿತರ ಚಿಕಿತ್ಸೆಗೆ ರಾಜಧಾನಿಯಲ್ಲಿ ಮೀಸಲು ಹಾಸಿಗೆಗಳ ಸಂಖ್ಯೆಯನ್ನು 320ಕ್ಕೆ ಏರಿಕೆ ಮಾಡಲಾಗುತ್ತಿದೆ.

ಈಗಾಗಲೇ ಬೌರಿಂಗ್ ಆಸ್ಪತ್ರೆಯಲ್ಲಿ 120 ಹಾಸಿಗೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಇವುಗಳಲ್ಲಿ 60 ಹಾಸಿಗೆಗಳನ್ನು ಓಮೈಕ್ರಾನ್ ದೃಢಪಟ್ಟವರಿಗೆ, ಇನ್ನುಳಿದ 60 ಹಾಸಿಗೆಗಳು ಶಂಕಿತರಿಗೆ ಮೀಸಲಿಡಲಾಗಿದೆ. ನೂತನ ತಳಿಯ ವೈರಾಣು ಸೋಂಕು ವೇಗವಾಗಿ ಹರಡುವ ಬಗ್ಗೆ ವೈದ್ಯಕೀಯ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಇದೇ 10ರೊಳಗೆ ನೂತನ ತಳಿಯ ವೈರಾಣುವಿನ ಚಿಕಿತ್ಸೆಗೆ ಸಂಬಂಧಿಸಿದಂತೆ 200 ಹಾಸಿಗೆಗಳನ್ನು ಸಜ್ಜುಗೊಳಿಸುವಂತೆ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಗೆ ಸರ್ಕಾರ ಸೂಚಿಸಿದೆ.

‘ವಿಮಾನ ನಿಲ್ದಾಣಗಳಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಸೋಂಕು ದೃಢಪಟ್ಟಲ್ಲಿ ವ್ಯಕ್ತಿಯನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಒದಗಿಸಲಾಗುತ್ತದೆ. ಅವರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗುತ್ತದೆ. ಮುನ್ನೆಚ್ಚರಿಕೆ ಕ್ರಮವಾಗಿ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿಯೂ ಹಾಸಿಗೆಗೆ ವ್ಯವಸ್ಥೆ ಮಾಡಲಾಗುತ್ತಿದೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಇತ್ತೀಚೆಗೆ ಉದ್ಘಾಟನೆಗೊಂಡಿರುವ ಕೋವಿಡ್ ಫೀಲ್ಡ್ ಆಸ್ಪತ್ರೆಯಲ್ಲಿ 200 ಹಾಸಿಗೆಗಳು ಲಭ್ಯವಿದ್ದು, ಅಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು. ಎಲ್ಲ ರೀತಿಯ ಸಿದ್ಧತೆಯನ್ನೂ ಮಾಡಿಕೊಂಡಿದ್ದೇವೆ’ ಎಂದು ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

ಕ್ವಾರಂಟೈನ್‌ನಲ್ಲಿದ್ದ ವ್ಯಕ್ತಿ ವಿದೇಶಕ್ಕೆ: ಹೋಟೆಲ್‌ಗೆ ನೋಟಿಸ್

ಬೆಂಗಳೂರು: ಕೋವಿಡ್ ದೃಢಪಟ್ಟು ಹೋಟೆಲ್‌ನಲ್ಲಿ ಕ್ವಾರಂಟೈನ್‌ನಲ್ಲಿದ್ದ ದಕ್ಷಿಣ ಆಫ್ರಿಕಾ ಪ್ರವಾಸಿಗನಿಗೆ (66 ವರ್ಷ) ದುಬೈಗೆ ತೆರಳಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ವಸಂತನಗರದ ತಾರಾ ಹೋಟೆಲ್‌ಗೆ ಬಿಬಿಎಂಪಿಯು ಕಾರಣ ಕೇಳಿ ನೋಟಿಸ್ ನೀಡಿದೆ.

ದಕ್ಷಿಣ ಆಫ್ರಿಕಾ ಪ್ರಜೆಯು ನ.20ರಂದು ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದರು. ಅವರು ಕೋವಿಡ್ ಹೊಂದಿರುವುದು ದೃಢಪಟ್ಟಿತ್ತು. ಅವರು ಅಂದಿನಿಂದಲೇ ಹೋಟೆಲ್‌ನಲ್ಲಿ ಪ್ರತ್ಯೇಕವಾಸಕ್ಕೆ ಒಳಗಾಗಿದ್ದರು. ಅವರ ವಂಶವಾಹಿ ಸಂರಚನೆ ವಿಶ್ಲೇಷಣೆಯ (ಜಿನೋಮ್ ಸೀಕ್ವೆನ್ಸಿಂಗ್) ಫಲಿತಾಂಶ ಬರುವ ಮುನ್ನವೇ ನ.27ರಂದು ಮಧ್ಯರಾತ್ರಿ ದುಬೈಗೆ ತೆರಳಿದ್ದರು. ಅವರು ಓಮೈಕ್ರಾನ್ ಸೋಂಕು ಹೊಂದಿದ್ದುದು ಗುರುವಾರ (ಡಿ. 2) ದೃಢಪಟ್ಟಿತ್ತು.

‘ಕೋವಿಡ್ ದೃಢಪಟ್ಟ ದಕ್ಷಿಣ ಆಫ್ರಿಕಾದ ಪ್ರವಾಸಿಗನನ್ನು 14 ದಿನಗಳ ಕಾಲ ಕ್ವಾರಂಟೈನ್‌ನಲ್ಲಿ ಇಟ್ಟುಕೊಳ್ಳುವಂತೆ ಬಿಬಿಎಂಪಿ ಸೂಚನೆ ನೀಡಿತ್ತು. ಆದರೂ ಆ ವ್ಯಕ್ತಿ ಸಭೆಯೊಂದರಲ್ಲಿ ಭಾಗವಹಿಸಲು ನ.25ರಂದು ಹೋಟೆಲ್‌ನಿಂದ ಹೊರಗೆ ಹೋಗಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ, ನ.27ರಂದು ಆ ವ್ಯಕ್ತಿಯು ಹೋಟೆಲ್‌ನಿಂದ ನಿರ್ಗಮಿಸಲು ಅನುವು ಮಾಡಿಕೊಟ್ಟಿದ್ದೀರಿ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಮಾಹಿತಿಯನ್ನೂ ನೀಡಿಲ್ಲ. ಇದು ಕೋವಿಡ್ ಶಿಷ್ಟಾಚಾರದ ಉಲ್ಲಂಘನೆ. ಕರ್ನಾಟಕ ಸಾಂಕ್ರಾಮಿಕ ಕಾಯಿಲೆಗಳ ಸುಗ್ರೀವಾಜ್ಞೆ 2020ರ ಹಾಗೂ 2005ರ ವಿಕೋಪ ನಿಯಂತ್ರಣ ಕಾಯ್ದೆಯ ಉಲ್ಲಂಘನೆಯೂ ಹೌದು. ಈ ಬಗ್ಗೆ ನೋಟಿಸ್ ಜಾರಿಯಾದ 24 ಗಂಟೆಗಳ ಒಳಗೆ ವಿವರಣೆ ನೀಡಬೇಕು. ಇಲ್ಲದಿದ್ದರೆ ಈ ಕಾಯ್ದೆಗಳಡಿ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಸೂಚಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಎಸ್.ಎ.ಬಾಲಸುಂದರ್, ‘ಕ್ವಾರಂಟೈನ್ ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಬಿಬಿಎಂಪಿಯ ಹೊಣೆ. ಆದರೆ, ಪ್ರವಾಸಿಗ ಕೋವಿಡ್ ಹೊಂದಿರುವ ಮಾಹಿತಿಯನ್ನು ಹೋಟೆಲ್‌ನವರಿಗೆ ತಿಳಿಸಿದ್ದೆವು. ಕನಿಷ್ಠಪಕ್ಷ ಆ ವ್ಯಕ್ತಿಯು ಸಭೆಯಲ್ಲಿ ಭಾಗವಹಿಸಲು ಹೋಟೆಲ್‌ನಿಂದ ನಿರ್ಗಮಿಸಿದ ಕುರಿತು ಹಾಗೂ ಹೋಟೆಲ್ ಬಿಟ್ಟು ವಿಮಾನನಿಲ್ದಾಣಕ್ಕೆ ತೆರಳಿದ ಬಗ್ಗೆ ಬಿಬಿಎಂಪಿಗೆ ಮಾಹಿತಿ ನೀಡಬೇಕಿತ್ತು’ ಎಂದರು.

ಬಿಬಿಎಂಪಿಯ ನೋಡೆಲ್ ಅಧಿಕಾರಿ, ‘ದಕ್ಷಿಣ ಆಫ್ರಿಕಾದ ಪ್ರವಾಸಿಗ ದೇಶವನ್ನು ತೊರೆದಾಗಿದೆ. ಆದರೆ, ಆತನ ನೇರ ಸಂಪರ್ಕಕ್ಕೆ ಬಂದ 24 ಮಂದಿಯದೇ ನಮಗೆ ತಲೆನೋವು. ಅವರಲ್ಲಿ ರೋಗಲಕ್ಷಣಗಳಿಲ್ಲ. ಆದರೂ ಅವರು ಸೋಂಕು ಹರಡಲು ಕಾರಣರಾಗಬಹುದು. ಆ ವ್ಯಕ್ತಿಯು ಬೊಮ್ಮಸಂದ್ರದಲ್ಲಿ ನ.25ರಂದು ನಡೆದ ಸಭೆಯಲ್ಲಿ ಭಾಗವಹಿಸಿದ್ದು, ಆರು ಮಂದಿ ಆತನ ನೇರ ಸಂಪರ್ಕಕ್ಕೆ ಬಂದಿದ್ದಾರೆ. ಅವರು ಯಾರೂ ಕೋವಿಡ್ ಹೊಂದಿಲ್ಲ ಎಂಬುದು ದೃಢಪಟ್ಟಿದೆ. ನ.27ರಂದು ಮಧ್ಯರಾತ್ರಿ ಆತ ವಿಮಾನನಿಲ್ದಾಣಕ್ಕೆ ಪ್ರಯಾಣ ಬೆಳೆಸಿದ ಕ್ಯಾಬ್ ಪತ್ತೆ ಹಚ್ಚುವಲ್ಲಿಯೂ ನಾವು ಸಫಲರಾಗಿದ್ದೇವೆ’ ಎಂದರು.

ಪೊಲೀಸ್ ಠಾಣೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಗೋವಿಂದರಾಜನಗರ ಕ್ಷೇತ್ರದಲ್ಲಿ ಸರಸ್ವತಿನಗರ ಪೊಲೀಸ್ ಠಾಣೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಉದ್ಘಾಟಿಸಿದರು. ವಿಶೇಷ ಪೂಜೆಯನ್ನೂ ನೆರವೇರಿಸಿದರು.

ನಗರದ 111ನೇ ಕಾನೂನು ಸುವ್ಯವಸ್ಥೆ ಪೊಲೀಸ್ ಠಾಣೆ ಇದಾಗಿದ್ದು, ಪಶ್ಚಿಮ ವಿಭಾಗ ವ್ಯಾಪ್ತಿಯಲ್ಲಿದೆ. ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ಪಿಎಸ್‌ಐಗಳು ಹಾಗೂ ಸಿಬ್ಬಂದಿ ಕೆಲಸ ಆರಂಭಿಸಿದ್ದಾರೆ.

ಬಸವರಾಜ ಬೊಮ್ಮಾಯಿ, ‘ಸರಸ್ವತಿನಗರ ಠಾಣೆ ಆರಂಭಕ್ಕೆ ಗೃಹ ಸಚಿವನಾಗಿದ್ದಾಗ ಅನುಮತಿ ನೀಡಿದ್ದೆ. ಇದೀಗ ಅದೇ ಠಾಣೆಯನ್ನು ನಾನು ಉದ್ಘಾಟಿಸುತ್ತಿದ್ದೇನೆ’ ಎಂದರು.

ಗೃಹ ಸಚಿವ ಆರಗ ಜ್ಞಾನೇಂದ್ರ, 'ಸರಸ್ವತಿನಗರ ಠಾಣೆಯಲ್ಲಿ ಎಲ್ಲ ಸೌಲಭ್ಯ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ₹ 200 ಕೋಟಿ ವೆಚ್ಚದಲ್ಲಿ 100 ಪೊಲೀಸ್ ಠಾಣೆ ಕಟ್ಟಡಗಳನ್ನು ನಿರ್ಮಿಸುವ ಗುರಿ ಇದೆ’ ಎಂದರು.

ಸಚಿವ ಆರ್. ಅಶೋಕ, ಸಂಸದ ತೇಜಸ್ವಿ ಸೂರ್ಯ, ಶಾಸಕ ವಿ. ಸೋಮಣ್ಣ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಕಮಿಷನರ್ ಕಮಲ್ ಪಂತ್ ಹಾಗೂ ಇತರರು ಇದ್ದರು.



ಹೊಸದಾಗಿ ಆರಂಭವಾದ ‘ಸರಸ್ವತಿನಗರ ಪೊಲೀಸ್ ಠಾಣೆ’ ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಶೇಷ ಪೂಜೆ ಸಲ್ಲಿಸಿ ನಮಿಸಿದರು – ಪ್ರಜಾವಾಣಿ ಚಿತ್ರ

‘ರಾತ್ರೋರಾತ್ರಿ ಡಾಂಬರೀಕರಣ’

‘ಸರಸ್ವತಿನಗರ ಠಾಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ಹಾಳಾಗಿ, ಗುಂಡಿಗಳು ಬಿದ್ದಿದ್ದವು. ವಾಹನ ಸವಾರರು ನಿತ್ಯವೂ ಭಯದಲ್ಲಿ ಸಂಚರಿಸುತ್ತಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬರುವ ಸೂಚನೆ ಸಿಗುತ್ತಿದ್ದಂತೆ ಗುರುವಾರ ರಾತ್ರಿಯೇ ರಸ್ತೆಯನ್ನು ಸಂಪೂರ್ಣ ಡಾಂಬರೀಕರಣ ಮಾಡಲಾಗಿದೆ’ ಎಂದು ಸ್ಥಳೀಯ ನಿವಾಸಿಗಳು ಹೇಳಿದರು.

‘ರಸ್ತೆ ದುರಸ್ತಿ ಮಾಡುವಂತೆ ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು. ಮುಖ್ಯಮಂತ್ರಿ ಬಂದಿದ್ದರಿಂದ ಸುಸಜ್ಜಿತ ರಸ್ತೆ ಆಗಿದೆ. ಇದು ಮುಖ್ಯಮಂತ್ರಿಯವರನ್ನೇ ದಿಕ್ಕು ತಪ್ಪಿಸುವ ಯತ್ನ’ ಎಂದೂ ತಿಳಿಸಿದರು.

ಇಂದು ಲಸಿಕೆ ಶಿಬಿರ

ಬೆಂಗಳೂರು: ಕಲಾಸಿಪಾಳ್ಯದ ತರಕಾರಿ ಮತ್ತು ಹಣ್ಣು ಸಗಟು ವರ್ತಕರ ಸಂಘವು ಮಂಡಿ ಮಾಲೀಕರು, ಕೂಲಿ ಕಾರ್ಮಿಕರು, ರೈತರು ಹಾಗೂ ಸಾರ್ವಜನಿಕರಿಗೆ ಕೋವಿಡ್ ಲಸಿಕೆ ಉಚಿತ ಶಿಬಿರವನ್ನು ಡಿ.4ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಹಮ್ಮಿಕೊಂಡಿದೆ.

ಸ್ಥಳ: ಆರ್‌ಎಂಸಿ ಕಚೇರಿ, ಕಲಾಸಿಪಾಳ್ಯ ತರಕಾರಿ ಮಾರುಕಟ್ಟೆ

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,57,035 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,049 ▲	12,35,643 ▲	16,342 ▲

ದಿನದ ಏರಿಕೆ

ಹೊಸ ಪ್ರಕರಣ	212 ▲
ಗುಣಮುಖ	185 ▲
ಸಾವು	2

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್


ಕೋವಿಡ್ ಅಂಕಿ–ಅಂಶ


ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	26.48 ಕೋಟಿ ▲	3.46 ಕೋಟಿ
ಸಕ್ರಿಯ ಪ್ರಕರಣ	2.08 ಕೋಟಿ ▲	99,976 ▲
ಗುಣಮುಖ	23.87 ಕೋಟಿ ▲	3.40 ಕೋಟಿ
ಸಾವು	52.54 ಲಕ್ಷ ▲	4.70 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	7.00 ಲಕ್ಷ ▲	9,216 ▼
ಗುಣಮುಖ	4.43 ಲಕ್ಷ ▼	8,612 ▲
ಸಾವು	7,652 ▼	391 ▼





ಎಲ್ಲಿ ಹೆಚ್ಚು ಸಾವು (ಒಟ್ಟು)

1.41 ಲಕ್ಷ	ಮಹಾರಾಷ್ಟ್ರ
40,855 ▲	ಕೇರಳ
36,504 ▲	ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

66.37	ಮಹಾರಾಷ್ಟ್ರ ▲
51.51	ಕೇರಳ ▲
27.28	ತಮಿಳುನಾಡು ▲

‘ವಾಹನದ ಮೇಲೆ ರಾಜಕೀಯ ಪಕ್ಷದ ಧ್ವಜ ಅಪರಾಧವಲ್ಲ’

ಒಂದನೇ ಪುಟದಿಂದ

2018ರ ವಿಧಾನಸಭಾ ಚುನಾವಣೆ ವೇಳೆ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾದ ಹನುಮಗೌಡ ಸೇರಿದಂತೆ ಮೂವರ ವಿರುದ್ಧ ದಾಖಲಿಸಲಾಗಿದ್ದ ಪ್ರಕರಣವನ್ನು ನ್ಯಾಯಪೀಠ ರದ್ದುಗೊಳಿಸಿದೆ.

‘ಒಂದು ವೇಳೆ ಕರ್ನಾಟಕ ಮುಕ್ತ ಜಾಗಗಳ ವಿರೂಪಗೊಳಿಸುವ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಬೇಕಾದರೆ ನಿಯಮದ ಪ್ರಕಾರ ಸರ್ಕಾರ ಅಧಿಸೂಚನೆ ಹೊರಡಿಸಿರಬೇಕು. ಆದರೆ ಈ ಪ್ರಕರಣದಲ್ಲಿ ಸರ್ಕಾರ ಬೆಳಗಾವಿ, ಮಂಗಳೂರು, ಬೆಂಗಳೂರು, ಹುಬ್ಬಳ್ಳಿ-ಧಾರವಾಡ ಸೇರಿದಂತೆ ಮಹಾನಗರ ಪಾಲಿಕೆ ಇರುವೆಡೆ ಮಾತ್ರ ಅಧಿಸೂಚನೆ ಹೊರಡಿಸಿದೆ. ಹಾಗಾಗಿ ಇದೇ ಕಾಯ್ದೆಯನ್ನು ಮುದ್ದೇಬಿಹಾಳಕ್ಕೂ ಅನ್ವಯಿಸಲಾಗದು’ ಎಂದು ನ್ಯಾಯಪೀಠ ಹೇಳಿದೆ.



‘ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ’ (ಎಫ್‌ಐಸಿಸಿಐ) ಅಡಿ ಕಾರ್ಯನಿರ್ವಹಿಸುತ್ತಿರುವ ಎಫ್‌ಎಲ್‌ಒ ಮಹಿಳಾ ಸಂಸ್ಥೆಯ 10ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ‘ವಸ್ತ್ರಂ’ ಜವಳಿ ಹಾಗೂ ಕರಕುಶಲ ಪ್ರದರ್ಶನಕ್ಕೆ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷೆ ಉಜ್ವಲಾ ಸಿಂಘಾನಿಯ ಚಾಲನೆ ನೀಡಿದರು. ಸಂಸ್ಥೆಯ ಶುಭಾ ಕುಲಕರ್ಣಿ, ನಮ್ರತಾ ಭಟ್ಟಿಯಾ, ರೇವತಿ ರಾಜು, ಜಯಶ್ರೀ ಮೆನನ್, ರತಿ ಇದ್ದರು –ಪ್ರಜಾವಾಣಿ ಚಿತ್ರ

ಬಿಸಿಐ ಚುನಾವಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಕೀಲರ ಪರಿಷತ್‌ನ (ಬಿಸಿಐ) ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಕ್ಕೆ ಡಿಸೆಂಬರ್ 4ರಂದು (ಶುಕ್ರವಾರ) ನಡೆಯಬೇಕಿದ್ದ ಚುನಾವಣೆಗೆ ಹೈಕೋರ್ಟ್ ತಡೆ ನೀಡಿದೆ.

ತಡೆ ಕೋರಿ ಬಿಸಿಐ ಸದಸ್ಯರೂ ಆದ ಹೈಕೋರ್ಟ್‌ನ ಹಿರಿಯ ವಕೀಲ ವೈ.ಆರ್.ಸದಾಶಿವ ರೆಡ್ಡಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಮಧ್ಯಂತರ ಆದೇಶ ನೀಡಿದೆ.

‘ನ್ಯಾಯಮೂರ್ತಿ ಪದ ಪ್ರಾಮಾಣಿಕತೆಯ ಪ್ರತಿರೂಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ನ್ಯಾಯಮೂರ್ತಿ ಪ್ರಾಮಾಣಿಕವಾಗಿ ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಹೇಳುವ ಅಗತ್ಯವಿಲ್ಲ. ಯಾಕೆಂದರೆ, ನ್ಯಾಯಮೂರ್ತಿ ಎಂಬ ಪದವೇ ಪ್ರಾಮಾಣಿಕತೆಯ ಮತ್ತೊಂದು ಜೀವಂತ ರೂಪ ಎಂದು’ ಹೈಕೋರ್ಟ್ ನ್ಯಾಯಮೂರ್ತಿ ಎನ್.ಕೆ.ಸುಧೀಂದ್ರರಾವ್ ಬಣ್ಣಿಸಿದರು.

ತಮ್ಮ ನಿವೃತ್ತಿ ದಿನವಾದ ಶುಕ್ರವಾರ ಬೆಂಗಳೂರು ವಕೀಲರ ಸಂಘದ ವತಿಯಿಂದ ನೀಡಲಾದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಅವರು, ‘ನ್ಯಾಯಮೂರ್ತಿಗಳ ಪ್ರಾಮಾಣಿಕತೆ ಎಂಬುದು ಗಣಿತದ ಲೆಕ್ಕಾಚಾರದಂತೆ ಇರಬೇಕು. ಅವರು ಶೇಕಡ 99ರಷ್ಟು ಪ್ರಾಮಾಣಿಕರಾಗಿದ್ದರು ಎಂದು ಹೇಳುವ ಬದಲಿಗೆ ಶೇ100ರಷ್ಟು ಪ್ರಾಮಾಣಿಕವಾಗಿ ಇರುವುದೇ ನಿಜವಾದ ನ್ಯಾಯಮೂರ್ತಿಯ ಲಕ್ಷಣ’ ಎಂದರು.

ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಮಾತನಾಡಿ, ‘ಸುಧೀಂದ್ರ ರಾವ್ ಅವರು ಬೆಂಗಳೂರು ಲೋಕಾಯುಕ್ತ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಅವಧಿಯಲ್ಲಿ ರಾಜಕಾರಣಿಗಳು ಅಧಿಕಾರಿಗಳ ಪಾಲಿಗೆ ಸಿಂಹಸ್ವಪ್ನವಾಗಿದ್ದರು. ಅವರು ನ್ಯಾಯಾಧೀಶರಾಗಿ ಜಾತೀಯತೆ ಮತ್ತು ಭ್ರಷ್ಟಾಚಾರದ ಕಡು ವಿರೋಧಿಯಾಗಿದ್ದರು. ಯಾರಿಗೂ ಜಾತಿ, ಮತಗಳ ಆಧಾರದಲ್ಲಿ ಮಣೆ ಹಾಕದೆ ಕಠಿಣವಾದ ತೀರ್ಪುಗಳನ್ನು ನೀಡಿದ್ದಾರೆ’ ಎಂದು ಶ್ಲಾಘಿಸಿದರು.

ಮುಖ್ಯ ನ್ಯಾಯಮೂರ್ತಿ ಋತುರಾಜ ಅವಸ್ಥಿ ಮಾತನಾಡಿ, ‘ಸುಧೀಂದ್ರರಾವ್ ನ್ಯಾಯಾಂಗದ ಪ್ರಾಮಾಣಿಕತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿದ ನ್ಯಾಯಮೂರ್ತಿ’ ಎಂದರು.

ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಮಾತನಾಡಿದರು. ಖಜಾಂಚಿ ಶಿವಮೂರ್ತಿ, ಹೆಚ್ಚುವರಿ ಸಾಲಿಸಿಟರ್ ಜನರಲ್ ಎಂ.ಬಿ. ನರಗುಂದ, ಸಹಾಯಕ ಸಾಲಿಸಿಟರ್ ಜನರಲ್ ಶಾಂತಿಭೂಷಣ್, ಹೆಚ್ಚುವರಿ ಅಡ್ವೊಕೇಟ್ ಜನರಲ್ ಅರುಣ್ ಶ್ಯಾಮ್ ಹಾಗೂ ಹಿರಿಯ–ಕಿರಿಯ ವಕೀಲರು ಹಾಜರಿದ್ದರು.

ನಗರದಲ್ಲಿ ಇಂದು

ಕಾರ್ತಿಕ ಮಾಸದ ದೀಪೋತ್ಸವ: ಬೆಳಿಗ್ಗೆ 8ಕ್ಕೆ ಮಹಾಗಣಪತಿ ಹೋಮ, ಮಧ್ಯಾಹ್ನ 3ಕ್ಕೆ ರಂಗೋಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ–ಮಾಲತಿ ಸೋಮಶೇಖರ್, ಸಂಜೆ 6ಕ್ಕೆ ದೀಪೋತ್ಸವ, ಸಂಜೆ 6.30ಕ್ಕೆ ಉದ್ಘಾಟನೆ ಮತ್ತು ಕ್ಯಾಲೆಂಡರ್ ಬಿಡುಗಡೆ–ನಟಿ ಅಪರ್ಣಾ ವಸ್ತಾರೆ, ಮಹೇಂದ್ರ ಮಣೋತ್, ಅತಿಥಿಗಳು–ಶಾಸಕಿ ಸೌಮ್ಯಾರೆಡ್ಡಿ, ಬಿ.ಸೋಮಶೇಖರ್, ಆರ್. ಎಸ್.ಸ್ವಾಮಿ, ಶ್ರೀವತ್ಸ, ಆಯೋಜನೆ–ವಿನಾಯಕ ಮಿತ್ರ ಮಂಡಳಿ, ಸ್ಥಳ–ಜಯರಾಮ ಸೇವಾ ಮಂಡಳಿ, ಜಯನಗರ



ಅಪರ್ಣಾ ವಸ್ತಾರೆ

ಪತ್ರಕರ್ತೆ ಗೌರಿ ಲಂಕೇಶ್ ಹೆಸರಿನಲ್ಲಿ ವಲಸೆ ಕಾರ್ಮಿಕರಿಗೆ ಉಚಿತ ಆಂಬುಲೆನ್ಸ್ ಸೇವೆಗೆ ಚಾಲನೆ–ಕವಿತಾ ಲಂಕೇಶ್, ಸ್ಥಳ–ಪ್ರೆಸ್‌ಕ್ಲಬ್, ಬೆಳಿಗ್ಗೆ 11



ಕವಿತಾ ಲಂಕೇಶ್

‘ಲಾಕ್‌ಡೌನ್’ ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ–ಅಭಿಷೇಕ್ ಅಯ್ಯಂಗಾರ್, ಆಯೋಜನೆ–ವಿಮೂವ್ ಥಿಯೇಟರ್, ಸ್ಥಳ–ರಂಗಶಂಕರ, ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ



‘ಲಾಕ್‌ಡೌನ್’ ನಾಟಕದ ದೃಶ್ಯ

‘ದಿ ಎಂಡ್’ ಕಲೆ-ವಿನ್ಯಾಸ ಪ್ರದರ್ಶನ: ಸ್ಥಳ–ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಆ್ಯಂಡ್ ಟೆಕ್ನಾಲಜಿ, ಬೆಳಿಗ್ಗೆ 11ರಿಂದ ಮಧ್ಯಾಹ್ನ 3


ಸಿರಿಕಲಾ ಕನ್ನಡ ಸಂಸ್ಕೃತಿ ಯಕ್ಷೋತ್ಸವದ ಉದ್ಘಾಟನೆ (ಸಂಜೆ 5.30ಕ್ಕೆ): ಅತಿಥಿಗಳು–ಸಂತೋಷ ಹಾನಗಲ್, ಸಿ.ಎ.ಕಿಶೋರ್, ನಾಗರಾಜ ಐತಾಳ್, ಪಿ.ಸಿ.ರಾವ್, ಮಂಜುನಾಥ್ ಹತ್ವಾರ್, ಎಂ.ಆರ್.ಭಟ್, ಕೆ.ಮೋಹನ್ ಹೊಳ್ಳ, ರಾಘವೇಂದ್ರ ಹತ್ವಾರ್, ಗಣೇಶ್ ರಾವ್, ಮಧ್ಯಾಹ್ನ 3.30ಕ್ಕೆ ‘ದ್ರೌಪದಿ ಪ್ರತಾಪ’ ಹಾಗೂ ಸಂಜೆ 6.30ಕ್ಕೆ ‘ಅಭಿಮನ್ಯು ಕಾಳಗ’ ಯಕ್ಷಗಾನ ಪ್ರದರ್ಶನ, ಆಯೋಜನೆ–ಸಿರಿಕಲಾಮೇಳ, ಸ್ಥಳ–ಉದಯಭಾನು ಕಲಾ ಸಂಘ, ಗವಿಪುರ

ಕಾ.ವೆಂ.ಶ್ರೀನಿವಾಸ ಮೂರ್ತಿ ಅವರ ಸಮಗ್ರ ಸಾಹಿತ್ಯ ಸಂಪುಟಗಳ ಬಿಡುಗಡೆ: ಮಧ್ಯಾಹ್ನ 3ಕ್ಕೆ ಸಮೂಹ ಗಾಯನ ಮತ್ತು ಗೀತ ನೃತ್ಯ, ಸಂಜೆ 5 ಗಂಟೆಗೆ ಸಂಪುಟಗಳ ಬಿಡುಗಡೆ–ಪಿ.ವಿ.ನಾರಾಯಣ, ಬೈರಮಂಗಲ ರಾಮೇಗೌಡ, ಮೀರಾಸಾಬಿಹಳ್ಳಿ ಶಿವಣ್ಣ, ವಿಜಯಾ ಸುಬ್ಬರಾಜ್, ಅಧ್ಯಕ್ಷತೆ–ಸಿ.ವೀರಣ್ಣ, ಅತಿಥಿಗಳು–ವಿ.ಮಹೇಶ್, ಎಂ.ಪ್ರಕಾಶ್ ಮೂರ್ತಿ, ಆಯೋಜನೆ–ಸಂಭ್ರಮ, ಗಾಯನ ಗಂಗಾ ಟ್ರಸ್ಟ್, ಶಿರೂರು ಸಾಂಸ್ಕೃತಿಕ ಪ್ರತಿಷ್ಠಾನ, ಸದ್ಭಾವನಾ ಪ್ರತಿಷ್ಠಾನ, ರಂಗ ವಿಜಯಾ, ಪ್ರಿಯದರ್ಶಿನಿ ಪ್ರಕಾಶನ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ

ನಿಧನ ವಾರ್ತೆ

ಆರ್.ಆರ್. ಶಿವಾನಂದ

ಶಿವಮೊಗ್ಗ: ನಟ, ದಿವಂಗತ ರಾಜ್‌ಕುಮಾರ್ ಅವರ ಷಡ್ಡಕ ಆರ್.ಆರ್. ಶಿವಾನಂದ (70) ಹೃದಯಾಘಾತದಿಂದ ಶುಕ್ರವಾರ ನಗರದ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಕರ್ನಾಟಕ ರಾಜ್ಯ ಈಡಿಗ ಸಂಘದ ಮಾಜಿ ಸದಸ್ಯರಾಗಿದ್ದರು ಹಾಗೂ ತೀರ್ಥಹಳ್ಳಿ ಈಡಿಗ ಸಂಘದ ಮಾಜಿ ಅಧ್ಯಕ್ಷರು. ಮೃತರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರಿದ್ದಾರೆ. ತೀರ್ಥಹಳ್ಳಿ ತಾಲ್ಲೂಕಿನ ಸ್ವಗ್ರಾಮ ರುದ್ರಾಕ್ಷಿ ಕೊಪ್ಪದಲ್ಲಿ ಶನಿವಾರ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.



ಮಲ್ಲೇಶ್ವರ ಬಾಲಕಿಯರ ಕಾಲೇಜು: ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

‘ವಿದೇಶಿ ಭಾಷೆ ಕಲಿಕಾ ಕೇಂದ್ರ ಶೀಘ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಲ್ಲೇಶ್ವರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಕ್ಯಾಂಪಸ್ ಅನ್ನು ಶೀಘ್ರ ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಮೇಲ್ದರ್ಜೆಗೇರಿಸಿ, ವಿದೇಶಿ ಭಾಷೆಗಳನ್ನು ಕಲಿಯುವ ಕೇಂದ್ರ ಆರಂಭಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಕಾಲೇಜಿನಲ್ಲಿ ಶುಕ್ರವಾರ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ‘ವಿದ್ಯಾರ್ಥಿನಿಯರ ಭವಿಷ್ಯ ಪರಿಗಣಿಸಿ ಬೆಂಗಳೂರು ವಿಶ್ವವಿದ್ಯಾಲಯದ ಜತೆ ಒಪ್ಪಂದ ಮಾಡಿಕೊಂಡು ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲಾಗಿದೆ’ ಎಂದರು.

‘ರಾಜ್ಯದಲ್ಲಿರುವ 430 ಸರ್ಕಾರಿ ಪದವಿ ಕಾಲೇಜುಗಳನ್ನು ಸಮಗ್ರವಾಗಿ ಸುಧಾರಿಸಲು ಸರ್ಕಾರ ಪಣ ತೊಟ್ಟಿದೆ. ಈ ನಿಟ್ಟಿನಲ್ಲಿ ಈಗಾಗಲೇ ಈ ಶಿಕ್ಷಣ ಸಂಸ್ಥೆಗಳಲ್ಲಿ ನೂರಕ್ಕೆ ನೂರರಷ್ಟು ಡಿಜಿಟಲ್ ಕಲಿಕೆ ಮತ್ತು ಸ್ಮಾರ್ಟ್ ತರಗತಿಗಳನ್ನು ಆರಂಭಿಸಲಾಗಿದೆ’ ಎಂದು ತಿಳಿಸಿದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಶ್ರೀರಾಮ್, ಪ್ರಾಂಶುಪಾಲ ರವಿ, ಉಪಪ್ರಾಂಶುಪಾಲ ರವಿಶಂಕರ್, ವೀರಣ್ಣಗೌಡ, ತಂತ್ರಜ್ಞಾನ ಪರಿಣತ ರಾಮಸ್ವಾಮಿ ಇದ್ದರು. ಕಳೆದ ವರ್ಷದ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು.



ನಗರದ ಮಲ್ಲೇಶ್ವರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ವಿದ್ಯಾರ್ಥಿನಿಯರಿಗೆ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿದರು

ವಿದ್ಯಾರ್ಥಿ ವೇತನಕ್ಕೆ ₹10 ಲಕ್ಷ ದಾನ

ಸಮಾರಂಭದಲ್ಲಿ ಎಚ್‌.ವಿ. ನಂಜುಂಡಯ್ಯ ಅವರ ಮೊಮ್ಮಗ ಮತ್ತು ತಂತ್ರಜ್ಞಾನ ಪರಿಣತ ರಾಮಸ್ವಾಮಿ ಅವರು, ವಿದ್ಯಾರ್ಥಿನಿಯರ ವಿದ್ಯಾರ್ಥಿ ವೇತನಕ್ಕೆಂದು ಕಾಲೇಜಿಗೆ ₹10 ಲಕ್ಷವನ್ನು ದಾನವಾಗಿ ನೀಡಿದರು.

ವಿವಿಧ ಕಾರಣಗಳನ್ನು ಮುಂದೊಡ್ಡಿ ವಿಡಂಬನಾ ಕಾರ್ಯಕ್ರಮಗಳನ್ನು ರದ್ದು ಮಾಡುವುದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಅಲ್ಲವೇ?

ಕಾರ್ಯಕ್ರಮಕ್ಕೂ ಪ್ರತಿಭಟನೆಗೂ ಅವಕಾಶ ಮುಕ್ತ ಇರಲಿ



ಕಾರ್ಯಕ್ರಮ ಮಾಡಲು ಅವಕಾಶ ಕಲ್ಪಿಸಿಕೊಡುವುದು ಅಧಿಕಾರ ವ್ಯವಸ್ಥೆಯ ಆದ್ಯ ಕರ್ತವ್ಯ. ಆದರೆ, ಅದೇ ನಿಷ್ಠೆಯಿಂದ ಶಾಂತಿಯುತ ಪ್ರತಿಭಟನೆಗೂ ಅವಕಾಶ ಕಲ್ಪಿಸಿಕೊಡಬೇಕು. ಕಲಾವಿದರು – ಅವರ ರಾಜಕೀಯ ಒಲವು ಏನೇ ಇರಲಿ – ಅಭಿಮಾನಿಗಳ 'ಪ್ರೀತಿ'ಯನ್ನು ಸ್ವಾಗತ ಮಾಡುವಂತೆ, ಪ್ರೀತಿಸದವರ 'ದ್ವೇಷ'ವನ್ನೂ ಸಹಿಸಿಕೊಳ್ಳಬೇಕಾಗುತ್ತದೆ

ಪ್ರಜಾವಾಣಿ ಚರ್ಚೆ

• ಪ್ರಕಾಶ್ ಬೆಳವಾಡಿ

ಇದು ಹಲವು ಸಲ ಓದಿರುವ ಹೇಳಿ ಕೇಳಿರುವ ವಿಷಯ. ಈಗ ಮತ್ತೆ ನೆನಪು ಮಾಡಿಕೊಳ್ಳೋಣ. ಅಂದು ಭಾನುವಾರ, 2014ರ ಮೇ 11ರಂದು ಬೆಳಿಗ್ಗೆ ನಡೆದ ಕಾರ್ಯಕ್ರಮ. ಲಭ್ಯವಿರುವ ವರದಿಗಳ ಪ್ರಕಾರ, ಕನ್ನಡ ರಂಗಭೂಮಿಯ ವಿಶಿಷ್ಟ ಶೈಲಿಯ 'ಸ್ಟ್ಯಾಂಡ್ ಅಪ್ ಕಾಮಿಡಿಯನ್' ಆಗಿದ್ದ ಮಾಸ್ಟರ್ ಹಿರಣ್ಣಯ್ಯನವರ ಕಲಾ ಸೇವೆಯನ್ನು ಗುರುತಿಸಿ ಮೈಸೂರಿನ ಸಂಸ್ಥೆಯೊಂದು ಮೈಸೂರಿನಲ್ಲಿ ನಡೆದ ಸಂಗೀತ ಸಭಾ ಕಾರ್ಯಕ್ರಮದಲ್ಲಿ ಅವರಿಗೆ ಪ್ರಶಸ್ತಿಯೊಂದನ್ನು ನೀಡಿತ್ತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹಿರಣ್ಣಯ್ಯನವರು, ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಕುರಿತು ಅವಹೇಳನಕಾರಿ ಎನ್ನಿಸಬಹುದಾದ ಮಾತುಗಳನ್ನು ತಮ್ಮ ಎಂದಿನ ಧಾಟಿಯಲ್ಲಿ ಆಡಿದ್ದರು.

ಅರಿವಿಗೆ ಬರದೆಯೇ ಅವರು ಆಡಿದ ಮಾತುಗಳ ಸುದ್ದಿ ಎಲ್ಲಾ ಮಾಧ್ಯಮಗಳಲ್ಲಿ ಹರಡಿ ಕೆಲವು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಭಾ ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳಕ್ಕೆ ಬಂದು ಹಿರಣ್ಣಯ್ಯನವರ ವಿರುದ್ದ ಪ್ರತಿಭಟಿಸಿದ್ದರು. ಮಾಸ್ಟರ್ ಹಿರಣ್ಣಯ್ಯನವರು ಕಾರ್ಯಕ್ರಮ ಮುಗಿಸಿ ಅಲ್ಲಿಂದ ತೆರಳಿದ್ದರು, ರೊಚ್ಚಿಗೆದ್ದ ಕಾರ್ಯಕರ್ತರು ಕುರ್ಚಿಗಳನ್ನು ಎಸೆದು ರಂಪ ಮಾಡುತ್ತ ಹಿರಣ್ಣಯ್ಯನವರ ವಿರುದ್ಧ ಕೂಗಾಡಿ ಅವರು ಕ್ಷಮೆ ಯಾಚಿಸಬೇಕೆಂದು ಒತ್ತಾಯಿಸಿದ್ದರು.

ಈ ಸುದ್ದಿಯು ಹಿರಣ್ಣಯ್ಯನವರಿಗೆ ಮುಟ್ಟಿದ ಕೂಡಲೇ ಅವರು ಮೈಸೂರಿನಲ್ಲೇ ಇದ್ದ ಸಿದ್ದರಾಮಯ್ಯನವರ ನಿವಾಸಕ್ಕೆ ತಲುಪಿ ಅವರನ್ನು ಭೇಟಿಯಾಗಿ, ಕ್ಷಮೆ ಯಾಚಿಸಿ ಅವರಿಂದಲೇ ರಕ್ಷಣೆಯ ವ್ಯವಸ್ಥೆ ಕೋರಿದ್ದರಂತೆ. ಸಿದ್ದರಾಮಯ್ಯನವರು ಅವರ ಜೊತೆ ಮಾತು ಮುಗಿಸಿ ಅಲ್ಲಿಯೂ ಸೇರಿದ್ದ ಕಾರ್ಯಕರ್ತರನ್ನು ಸಮಾಧಾನ ಪಡಿಸಿ ಹಿರಣ್ಣಯ್ಯನವರಿಗೆ ಬೆಂಗಾವಲು ಒದಗಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಆದೇಶ ಕೊಟ್ಟು ಅವರನ್ನು ಸುರಕ್ಷಿತವಾಗಿ ಕಳಿಸಿಕೊಟ್ಟಿದ್ದರಂತೆ.

ಐದು ವರ್ಷಗಳ ನಂತರ, 2019ರ ಮೇ 2ರಂದು ಮಾಸ್ಟರ್ ಹಿರಣ್ಣಯ್ಯ ತೀರಿಕೊಂಡರು. ಸಿದ್ದರಾಮಯ್ಯನವರು ತಮ್ಮ ಸಂತಾಪವನ್ನು ಸೂಚಿಸುತ್ತ, 'ಹಿರಿಯ ರಂಗಕರ್ಮಿ ಮಾಸ್ಟರ್ ಹಿರಣ್ಣಯ್ಯ ಅವರ ಅಗಲಿಕೆಯ ಸುದ್ದಿ ನೋವುಂಟು ಮಾಡಿದೆ. ಹಾಸ್ಯ, ಅಭಿನಯ, ಹರಿತ ಸಂಭಾಷಣೆ ಅವರ ವೈಶಿಷ್ಟ್ಯ. ಅವರ ಕುಟುಂಬ ಮತ್ತು ಅಭಿಮಾನಿಗಳ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ. ಹಿರಿಯ ರಂಗಕರ್ಮಿ ಮಾಸ್ಟರ್ ಹಿರಣ್ಣಯ್ಯ ಅವರ ನಿವಾಸಕ್ಕೆ ಭೇಟಿ ನೀಡಿ ಅಂತಿಮ ನಮನ ಸಲ್ಲಿಸಿದೆ' ಎಂದು ಸಿದ್ದರಾಮಯ್ಯನವರು ಟ್ವೀಟ್ ಮಾಡಿದ್ದರು.

ಇಲ್ಲಿ ಪ್ರಸ್ತುತ ಏನೆಂದರೆ, ಅಂದು ಅವರು ತೀರ್ಮಾನಿಸಿದಂತೆ ಮತ್ತೆ ಎಂದೂ ಹಿರಣ್ಣಯ್ಯನವರು ರಂಗದ ಮೆಟ್ಟಿಲುಗಳನ್ನು ಏರಲಿಲ್ಲ. ಇದರಿಂದ ಕೆಲವರಿಗೆ ಖುಷಿಯೂ ಆಗಿದ್ದಿರಬಹುದು ಮತ್ತು ಸಂಕಟ ಪಟ್ಟ ಹಿರಣ್ಣಯ್ಯನವರ ಅಭಿಮಾನಿಗಳೂ ಇದ್ದಾರೆ.



ಅವರೇ ಬಾಯಿ ಮುಚ್ಚಿದ್ದೋ ಅಥವಾ ಅದನ್ನು ಮುಚ್ಚಿಸಿದ್ದೊ, ಅಂತೂ ಹಿರಣ್ಣಯ್ಯನವರ ಕಲೆಯನ್ನು ಅವರ ಅಭಿಮಾನಿಗಳು ಕಳೆದುಕೊಂಡದ್ದನ್ನು ಒಂದು ಸಮಾಜ ಒಪ್ಪಬೇಕೆ? ಅಥವಾ ಅವರಿಗೆ ಹಲವು ದಶಕಗಳು ಆ ಧಾಟಿಯಲ್ಲಿ ರಂಗದ ಮೇಲೆ ಮಾತನಾಡಲು ಬಿಟ್ಟಿದ್ದೇ ತಪ್ಪು ಎಂದು ತೀರ್ಮಾನಿಸಬೇಕೆ? ಹಾಗೆ ತೀರ್ಮಾನಿಸುವವರು ಯಾರು – ಪ್ರತಿಭಟನೆ ಮಾಡುವವರೊ? ಅಧಿಕಾರದಲ್ಲಿರುವವರೊ? ಅಥವ ಕಾನೂನು ಎತ್ತಿಹಿಡಿಯುವ ನ್ಯಾಯಾಂಗ ವ್ಯವಸ್ಥೆಯೊ?

ಈ ಪ್ರಶ್ನೆಯನ್ನು ಕಾಮಿಡಿಯನ್ ಮುನವ್ವರ್ ಫಾರೂಕಿಯವರ ವಿಚಾರದಲ್ಲೂ ಕೇಳಬಹುದು. ಆತನನ್ನು ನಾನು ನೋಡಿಲ್ಲ, ಮಾತೂ ಕೇಳಿಲ್ಲ, ಕೇಳುವುದೂ ಇಲ್ಲ. ಅದು ಸಹೃದಯನ ಆಯ್ಕೆ. ಆದರೆ ಈ ಕಾಮಿಡಿಯನ್ ಸುದ್ದಿಯಲ್ಲಿರುವುದು ಗೊತ್ತು. ಮೊನ್ನೆ ಬೆಂಗಳೂರಿನಲ್ಲಿ ಆಯೋಜನೆಗೊಂಡಿದ್ದ ಅವರ ಸ್ಟ್ಯಾಂಡ್ ಅಪ್ ಕಾಮಿಡಿ ಕಾರ್ಯಕ್ರಮ ರದ್ದುಗೊಳಿಸಿದ್ದಕ್ಕೆ ವಿಚಿತ್ರವಾದ ಕಾರಣ ನೀಡಿದ್ದಾರೆ ನಮ್ಮ ಪೊಲೀಸರು. 'ಕಾರ್ಯಕ್ರಮದಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗುತ್ತದೆ, ಕಾರ್ಯಕ್ರಮ ನಡೆದರೆ ಗದ್ದಲವಾಗಬಹುದು, ಆದ್ದರಿಂದ ಕಾರ್ಯಕ್ರಮ ರದ್ದುಗೊಳಿಸುವುದು ಉತ್ತಮ' ಎಂದು ಹೇಳಿ ಪೊಲೀಸರು ಆಯೋಜಕರಿಗೆ ಪತ್ರ ಬರೆದಿದ್ದರಂತೆ.

ಅಂದರೆ, ಕಾರ್ಯಕ್ರಮಕ್ಕೆ ರಕ್ಷಣೆ ನೀಡುವುದಕ್ಕಿಂತ ಮುಖ್ಯವಾದುದು ಗದ್ದಲ ಮಾಡಲು ಸಿದ್ಧವಿರುವವರಿಗೆ ಸ್ಪಂದಿಸುವುದೇ? ಪೊಲೀಸರ ಈ ಕ್ರಮದಿಂದ ಅವರ ಬೆದರಿಕೆಗೆ ಮನ್ನಣೆ ಸಿಕ್ಕಂತೆ ಆಗುವುದಿಲ್ಲವೇ? ಅವರ ಕಾಮಿಡಿ ಶೋ ಕಾನೂನಿಗೆ ವಿರುದ್ಧವಾಗಿದೆ ಎನ್ನುವುದಾದಲ್ಲಿ ಅದು ಹೇಗೆ, ಯಾವ ಕಾನೂನಿನ ಅಡಿಯಲ್ಲಿ ಅರೋಪವನ್ನು ಮಾಡಿ ಸಮರ್ಥಿಸಿಕೊಳ್ಳಲಾಗಿದೆ ಎಂದು ಪೋಲಿಸರು ವಿವರಿಸಬೇಕಲ್ಲವೇ?

ಸುಮಾರು ಎರಡು ವರ್ಷಗಳ ಹಿಂದೆ ಹೊಸ ವರ್ಷದ ಒಂದು ಮೋಜಿನ ಕೂಟದಲ್ಲಿ ನಟಿ ಸನ್ನಿ ಲಿಯಾನ್ ಬಂದು ಮನರಂಜನೆಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ ಎಂಬ ಸುದ್ದಿ ಬಂದ ಕೂಡಲೇ ಇಲ್ಲಿನ ಕೆಲವು ಕನ್ನಡ ಕಾಪಾಡುವ ಕಾರ್ಯಕರ್ತರು ಪ್ರತಿಭಟಿಸುವ ಬೆದರಿಕೆ ಹಾಕಿದ್ದರು. ಹಾಗಾಗಿ, ಆಕೆ 'ನಾನು ಬರುವುದಿಲ್ಲ, ನನ್ನಿಂದ ಯಾರಿಗೂ ತೊಂದರೆಯಾಗುವುದು ಬೇಡ' ಎಂದು ಹಿಂದೆ ಸರಿದಿದ್ದರು. ಮರ್ಯಾದೆಗೆ ಒಪ್ಪುವಂತೆ ಅಕೆ ಧರಿಸಬಹುದಾದ ಉಡುಪು ಹೇಗಿರಬೇಕು ಎಂದು ಸಚಿವರೊಬ್ಬರು ಸೂಚನೆ ಸಹ ನೀಡಿದ್ದರು.

ಈಗ ಫಾರೂಕಿಯವರೂ ಈ ಕಾಮಿಡಿ ವೃತ್ತಿಯೇ ಬೇಡ ಎಂದಿದ್ದಾರಂತೆ. ಇದಕ್ಕೆ ಹಿಂದೆಯೂ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವು ಉಂಟು ಮಾಡಿದ ಆರೋಪ ಎದುರಿಸಿ ಮಧ್ಯಪ್ರದೇಶದ ಇಂದೋರ್‌ನಲ್ಲಿ ಬಂಧನದಲ್ಲಿದ್ದ ಫಾರೂಕಿ, ಈಗ 'ಹೇಟ್ ವನ್, ಆರ್ಟಿಸ್ಟ್ ಲಾಸ್ಟ್' (ದ್ವೇಷ ಗೆದ್ದಿತು, ಕಲಾವಿದ ಸೋತ) ಎಂದು ಟ್ವೀಟ್ ಮಾಡಿದ್ದಾರೆ. ಇದಕ್ಕೆ ಕೊನೆಯೆಲ್ಲಿ? ಮಾತೆತ್ತಿದರೆ ಪ್ರತಿಭಟಿಸುವ ಈ 'ಔಟ್ರೇಜಿಂಗ್' ಯುಗದಲ್ಲಿ, ಈ ಪ್ರಶ್ನೆ ಎದುರಾದಾಗ ನಮ್ಮ ನಮ್ಮ ರಾಜಕೀಯ ನಿಯತ್ತು, ಧಾರ್ಮಿಕ ಶ್ರದ್ಧೆ ಅಥವಾ ಇನ್ನಾವುದೋ ತಿಕ್ಕಲುತನಕ್ಕೆ ಅನುಗುಣವಾಗಿ ಒಮ್ಮೆ ಇತ್ತ ಒಮ್ಮೆ ಅತ್ತ ವಾಲುವುದು ಮೂರ್ಖತನವಲ್ಲವೇ?

'ಗಿವಿಂಗ್ ಒಫೆನ್ಸ್' (Giving offence) ಸ್ಟ್ಯಾಂಡ್ ಅಪ್ ಕಾಮಿಡಿಯ ಒಂದು ಆಯಾಮ. ಅದನ್ನು ಗುಂಪುಗಾರಿಕೆಯಿಂದಾಗಲೀ ಪಕ್ಷ ರಾಜಕೀಯದಿಂದಾಗಲೀ ಶಿಸ್ತಿಲ್ಲದ ಅಧಿಕಾರದ ಬಳಕೆಯಿಂದಾಗಲೀ ಯಾವುದೇ ರೀತಿಯ ಬೆದರಿಕೆಯಿಂದಾಲಿ ತಡೆಯುವುದು ಅನಧಿಕೃತ ಸೆನ್ಸಾರ್ ಶಿಪ್ ಎಂದು ಪರಿಗಣಿಸಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಕಾರ್ಯಕ್ರಮ ಮಾಡಲು ಅವಕಾಶ ಕಲ್ಪಿಸಿಕೊಡುವುದು ಅಧಿಕಾರ ವ್ಯವಸ್ಥೆಯ ಆದ್ಯ ಕರ್ತವ್ಯ. ಆದರೆ, ಅದೇ ನಿಷ್ಠೆಯಿಂದ ಶಾಂತಿಯುತ ಪ್ರತಿಭಟನೆಗೂ ಅವಕಾಶ ಕಲ್ಪಿಸಿಕೊಡಬೇಕು. ಕಲಾವಿದರು – ಅವರ ರಾಜಕೀಯ ಒಲವು ಏನೇ ಇರಲಿ – ಅಭಿಮಾನಿಗಳ 'ಪ್ರೀತಿ'ಯನ್ನು ಸ್ವಾಗತ ಮಾಡುವಂತೆ, ಪ್ರೀತಿಸದವರ 'ದ್ವೇಷ'ವನ್ನೂ ಸಹಿಸಿಕೊಳ್ಳಬೇಕಾಗುತ್ತದೆ. ಹಿಂದೂ ದೇವತೆಗಳ ಬೆತ್ತಲೆ 'ಆರ್ಟ್' ಪ್ರದರ್ಶನ ಮಾಡಲು ಸ್ವರ್ಗೀಯ ಹುಸೇನ್ ಸಾಹೇಬರಿಗೆ ಅವಕಾಶ ಮಾಡಿಕೊಟ್ಟರೆ, ಅದರಿಂದಾಗಿ ನೊಂದವರ ಪ್ರತಿಭಟನೆಗೂ ಅವಕಾಶ ನೀಡಬೇಕು. ಇಲ್ಲದಿದ್ದರೆ ಅವರ ಅವರ ಮೂಗಿನ ನೇರಕ್ಕೆ 'ಲಿಬರಲ್' ಎಂದು ಅವರವರೇ ವ್ಯಾಖ್ಯಾನಿಸಿಕೊಳ್ಳಬೇಕು ಅಷ್ಟೆ.

ಕಡೆಯ ಮಾತು: 1992ರಲ್ಲಿ ಬಾಬರಿ ಮಸೀದಿಯನ್ನು ಕರಸೇವಕರು ಮುತ್ತಿಗೆ ಹಾಕಿದಾಗ ಬೆಳಿಗ್ಗೆ 11ರ ಸುಮಾರಿಗೆ ದೇಶದ ಜನ ಮನೆಯಲ್ಲಿಯೇ ಭಜಿಸಬೇಕು ಎಂದು ಎಲ್.ಕೆ. ಅಡ್ವಾಣಿಯವರು ಕರೆಕೊಟ್ಟಿದ್ದರು. ಆ ದಿನ ರವೀಂದ್ರ ಕಲಾಕ್ಷೇತ್ರಕ್ಕೆ ನಾನು ಪತ್ರಕರ್ತನಾಗಿ ಹೋಗಿದ್ದೆ. ಕಲಾಕ್ಷೇತ್ರದ ಮೆಟ್ಟಿಲುಗಳ ಮೇಲೆ ನಮ್ಮ ತಂದೆ ಮೇಕಪ್ ನಾಣಿಯವರೂ ಸೇರಿದಂತೆ ಸಾಹಿತಿಗಳು, ಕಲಾವಿದರು ಪ್ರತಿಭಟನೆಗೆ ಕುಳಿತಿದ್ದರು. ಕಲಾಕ್ಷೇತ್ರದ ಮುಂದಿನ ಬೀದಿಯಲ್ಲಿ ಗಾಯಕ ಸಿ. ಅಶ್ವತ್ಥ ನೇತೃತ್ವದಲ್ಲಿ ಜನರ ತಂಡ ಕರಸೇವಕರ ಪರ ಘೋಷಣೆ ಕೂಗುತ್ತಾ ಸೇರಿದ್ದರು. ಆಗ, ಎರಡೂ ಕಡೆಯವರು ತಮ್ಮ ಭಾವನೆ ವ್ಯಕ್ತಪಡಿಸಲು ಅಂದಿನ ಆಡಳಿತ ವ್ಯವಸ್ಥೆ ಮಾಡಿಕೊಟ್ಟಿತ್ತು.

ಈಗಿನಂತೆ ಆಗ ಸೋಶಿಯಲ್ ಮೀಡಿಯಾ ಯುಗವಾಗಿರಲಿಲ್ಲ. ಸುದ್ದಿವಾಹಿನಿಗಳ ಅಬ್ಬರವೂ ಇರಲಿಲ್ಲ. ಲಂಕೇಶ್ ಪತ್ರಿಕೆ ಕಚೇರಿಯಲ್ಲಿ ಕಾರ್ಡ್ ಆಟ ಮುಗಿಸಿ, ಕೆಲವು ಲೇಖಕರು ಮೇಷ್ಟ್ರ (ಲಂಕೇಶ್) ಸುತ್ತ ಕುಳಿತಿರಬೇಕಾದರೆ ಬಾಬರಿ ಮಸೀದಿ ಕೆಡವಿದ ಸುದ್ದಿ ಬಂತು. ರಾಮಚಂದ್ರ ಶರ್ಮರ ಕಣ್ಣಲ್ಲಿ ನೀರು ಬಂತು. ಅವರಂಥವರೆಲ್ಲ ಕಣ್ಣೀರು ಹಾಕಿದ್ದರ ಹೊಣೆಯನ್ನು ಅಂದಿನ ಪ್ರಧಾನಿಯವರೋ ಅಥವಾ ಉತ್ತರ ಪ್ರದೇಶದ ಅಂದಿನ ಮುಖ್ಯಮಂತ್ರಿಯವರೋ, ಅಡ್ವಾಣಿಯವರೋ, ಕರಸೇವಕರೋ ಇಲ್ಲವೆ ಇಂದಿನ ನ್ಯಾಯಾಂಗ ವ್ಯವಸ್ಥೆಯೋ ಯಾರು ಹೊರುವರು ಎನ್ನುವ ಪ್ರಶ್ನೆ ಮುಂದಿದೆ. ಅದಕ್ಕೆ ಉತ್ತರ ಹುಡುಕುವ ಮನಸ್ಸು, ವ್ಯವಧಾನವನ್ನು ನಾವು ಹೊಂದುವುದು ಇಂದಿನ ಅಗತ್ಯ.

ಲೇಖಕ: ರಂಗಕರ್ಮಿ, ಸಿನಿಮಾ ನಿರ್ದೇಶಕ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ನೆಮ್ಮದಿ ಹಣದಿಂದ ಸಿಗಲ್ಲ

ಹಣ ಒಂದಿದ್ದರೆ ಎಲ್ಲವೂ ಸಿಗುತ್ತೆ ಅನ್ನೋ ಭ್ರಮೆಯಲ್ಲಿ ಮನುಷ್ಯ ನಿತ್ಯ ಹಣದ ಬೆಂಬತ್ತುತ್ತಿರುತ್ತಾನೆ. ಹಣಕ್ಕಾಗಿ ಎಂಥ ನೀಚಕೆಲಸ ಮಾಡಲೂ ಹಿಂಜರಿಯದ ಜನ ಬಹಳಷ್ಟಿದ್ದಾರೆ. ಹಣಕ್ಕಾಗಿ ಮೋಸ-ವಂಚನೆ ಮಾಡುತ್ತಾ ಬದುಕುವವರು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದ್ದಾರೆ. ಹಣ ಗಳಿಸಿದವರಾರೂ ಸಾಕಿಷ್ಟು ಅಂತ ತೃಪ್ತಿ ಪಟ್ಟಿಲ್ಲ. ಹಣ ಗಳಿಸಲಾಗದವರು ಸಾಕಿನ್ನು ಅಂತ ಪ್ರಯತ್ನ ಬಿಟ್ಟಿಲ್ಲ. ಇಬ್ಬರೂ ಹತಾಶೆಯ ನಿಟ್ಟುಸಿರಲ್ಲೇ ಜೀವ ಬಿಟ್ಟಿದ್ದಾರೆ ಹೊರತು, ನೆಮ್ಮದಿಯಾಗಿ ಜೀವ ಕಳೆದಿಲ್ಲ. ಹಣ ಸಂಪಾದಿಸಿದವನಿಗೆ ಗಳಿಸಿದ್ದು ಸಾಕಾಗಲಿಲ್ಲ ಎಂಬ ಚಿಂತೆ, ಹಣ ಸಂಪಾದಿಸಲಾಗವನಿಗೆ ಜೀವನದಲ್ಲಿ ಸೋತೆನೆಂಬ ಜುಗುಪ್ಸೆ. ಒಟ್ಟಾರೆ ಹಣದ ಮುಂದೆ ಸೋತ ಮತ್ತು ಗೆದ್ದ ಇಬ್ಬರದು ಒಂದೇ ವರಾತ, ಅದು ಅತೃಪ್ತತೆಯ ಚಡಪಡಿಕೆ. ಇವರೆಲ್ಲಾ ಸುಂದರವಾದ ಜೀವನವನ್ನು ನೆಮ್ಮದಿಯಾಗಿ ಸವಿಯದೆ, ಹಣ ಗಳಿಸುವ ಒದ್ದಾಟದಲ್ಲೇ ಜೀವ ಕೊನೆಗೊಳಿಸಿಕೊಳ್ಳುತ್ತಾರೆ.

ಮನುಷ್ಯ ಎಂಥ ಅತೃಪ್ತ ಜೀವಿ ಎಂದರೆ, ಬದುಕಿನಲ್ಲಿ ಬೇಕೆನಿಸಿದ್ದು ಸಿಕ್ಕಾಗಲು ಅದನ್ನು ನೆಮ್ಮದಿಯಾಗಿರುವುದಿಲ್ಲ. ಮತ್ತೇ ಇನ್ನೇನೋ ಬೇಕೆಂದು ಹಪಹಪಿಸುತ್ತಾನೆ. ಮದುವೆಯಾಗುವ ಮುನ್ನ ಕಂಕಣಭಾಗ್ಯ ಶೀಘ್ರ ಸಿಗಲಿ ಅಂತ ಹಂಬಲಿಸಿ, ಕಂಡ ಕಂಡ ದೇವರಿಗೆಲ್ಲಾ ಹರಕೆ ಹೊತ್ತುಕೊಳ್ಳುತ್ತಾರೆ. ಮದುವೆಯಾದ ನಂತರ, ಸಂಸಾರ ಸರಿದೂಗಿಸಲಾಗದೆ ಮದುವೆ ಯಾಕಾದರೂ ಮಾಡಿಕೊಂಡೆನೋ ಅಂತ ಹಲುಬುತ್ತಾರೆ. ಮದುವೆ ಎಂದರೆ ಸುಖವೇ ಇರುತ್ತೆ, ಅಲ್ಲಿ ದುಃಖವೇ ಇರುವುದಿಲ್ಲ ಅಂದು ಕೊಳ್ಳುವ ಭ್ರಮಾಧೀನರಿಗೆ ವಿವಾಹಾನಂತರ ಜುಗುಪ್ಸೆ ಅನುಭವಿಸುತ್ತಾರೆ. ಜೀವನ ಎಂದರೇನೆ ಏರಿಳಿತದ ಯಾನ. ದಾಂಪತ್ಯಜೀವನವೂ ಇದಕ್ಕೆ ಹೊರತಲ್ಲ ಅನ್ನೋ ಸತ್ಯ ತಿಳಿದವರು ಯಶಸ್ವಿ ಸಂಸಾರಿಯಾಗುತ್ತಾರೆ. 'ನಿನ್ನೆ ಇಂದಿನಂತಿರುವುದಿಲ್ಲ-ನಾಳೆ ಎಂದಿನಂತಿರುವುದಿಲ್ಲ' ಎಂಬ ಜೀವನದ ಕಠೋರ ಸತ್ಯ ಅರಿತವನು ಬದುಕನ್ನು ತೃಪ್ತಿಯಿಂದ ಕಳೆಯುತ್ತಾನೆ. ಇಂಥ ಬದುಕಿನ ಕಟು ವಾಸ್ತವತೆ ಅರಿಯದವರು ಮನಃಸ್ತಾಪ-ಕಲಹದಲ್ಲೇ ಜೀವನದ ನೆಮ್ಮದಿ ಕಳೆದುಕೊಳ್ಳುತ್ತಾರೆ.

ಭೂಮಿಗೆ ಬಂದ ಪ್ರತಿ ಜೀವವೂ ಜೀವನವನ್ನು ತೃಪ್ತಿಯಾಗಿ ಸವಿದು ನಿರ್ಗಮಿಸಬೇಕು. ಯಾವ ಜೀವ ನೆಮ್ಮದಿ ಇಲ್ಲದೆ ಪ್ರಾಣ ಬಿಡುತ್ತೋ, ಅದು ಮುಕ್ತಿ ಕಾಣದೆ ಇಹದಲ್ಲೇ ಚಡಪಡಿಸುತ್ತದೆ. ಇಂಥ ಆತ್ಮಗಳು ಪಿಶಾಚರೂಪ ತಾಳಬಾರದೆಂದು ಶಾಸ್ತ್ರಬದ್ಧವಾಗಿ ಅಂತ್ಯಸಂಸ್ಕಾರ ಮಾಡುತ್ತೇವೆ. ತೃಪ್ತಿ ಕಾಣದ ಆತ್ಮಗಳು ಪರಮಾತ್ಮನ ಸಾನ್ನಿಧ್ಯ ಹೊಂದುವುದಿಲ್ಲ ಅಂತ ಜೀವನದಲ್ಲಿ ಅವಶಿಷ್ಟ ಪಡುತ್ತಿದ್ದವುಗಳನ್ನೆಲ್ಲಾ ಎಡೆ ಇಡುತ್ತೇವೆ. ಇಂಥ ಅಪರಕರ್ಮದಲ್ಲೇ ನಮ್ಮ ಬದುಕಿನ ಸತ್ಯಗಳು ಅನಾವರಣಗೊಳ್ಳುತ್ತೆ. ಆದರೆ ಅದನ್ನು ಅರಿಯುವ ಒಳಗಣ್ಣು ನಮಗಿರಬೇಕಷ್ಟೆ. ಅತಿಥಿಯಾಗೋ,ಅಭ್ಯಾಗತರಾಗೋ ನಾವು ಈ ಭೂಮಿಗೆ ಬಂದಿರುತ್ತೇವೆ. ಇಲ್ಲಿ ಇದ್ದಷ್ಟು ಕಾಲ ಪರರಿಗೆ ತೊಂದರೆಯಾಗದಂತೆ ಬದುಕಿದ್ದು, ಕೊನೆಗೊಮ್ಮೆ ಹೋಗುವ ಕಾಲದಲ್ಲಿ ಮನಸ್ಸಿನಲ್ಲಿ ನೆಮ್ಮದಿ ತುಂಬಿಕೊಂಡು ನಿರ್ಗಮಿಸಬೇಕು.

ಎಲ್ಲರೂ ಮಾಡುವ ತಪ್ಪನ್ನು ನಾವು ಮಾಡುತ್ತೇವೆ. ಆದರೆ ಆದ ತಪ್ಪನ್ನು ಎಷ್ಟು ಬೇಗ ತಿದ್ದಿ ಜೀವನಪಥದಲ್ಲಿ ನಡೆಯುತ್ತೇವೋ, ಅಷ್ಟು ನಮ್ಮ ಜೀವನ ಸಾರ್ಥಕ್ಯ ಪಡೆಯುತ್ತದೆ. ಜೀವನದಲ್ಲಿ ನೆಮ್ಮದಿ ಕಾಣಲು ಋಷಿಗಳಂತೆ ಕಾಡು-ಮೇಡು ಅಲೆಯಬೇಕಿಲ್ಲ. ನಾಡಿನ ಬೀಡಿನಲ್ಲೇ ಮೌಲ್ಯಯುತವಾಗಿ ಬದುಕಿ ನೆಮ್ಮದಿ ಕಾಣಬಹುದು. ನೆಮ್ಮದಿ ಅನ್ನೋದು ಹಣಕ್ಕೆ ಸಿಗುವ ವಸ್ತುವೂ ಅಲ್ಲ, ಯಾರೋ ಕೊಡುವ ದಾನವೂ ಅಲ್ಲ. ಅದು ನಮ್ಮ ಮನದೊಳಗೆ ಆವಿರ್ಭವಿಸಿ ಬರುವ ಪುಣ್ಯತೀರ್ಥ. ಮನಸ್ಸೆಂಬ ಸಾಗರದಲ್ಲಿ ತೃಪ್ತಿಯ ಕಡೆಗೋಲಲ್ಲಿ ಮಂಥಿಸಿ ತೆಗೆದ ಅಮೃತ. ಇದನ್ನು ಸವಿದವರು 'ಸಚ್ಚಿದಾನಂದ'ದ ನೆಮ್ಮದಿ ಬದುಕು ಕಾಣುತ್ತಾರೆ.

'ಅಹಿತಕರ' ಕಾರ್ಯಕ್ರಮ ರದ್ದುಪಡಿಸಲು ವ್ಯವಸ್ಥಿತ ಹುನ್ನಾರ

• ಡಾ. ರಾಜೇಂದ್ರ ಚೆನ್ನಿ


ಇತ್ತೀಚೆಗೆ ಇಬ್ಬರು ಸ್ಟ್ಯಾಂಡ್ ಅಪ್ ಕಾಮಿಡಿಯನ್‌ಗಳ ನಿಗದಿತ ಕಾರ್ಯಕ್ರಮಗಳು ಬೆಂಗಳೂರಿನಲ್ಲಿ ರದ್ದು ಆಗಿರುವುದು ಅನಿರೀಕ್ಷಿತ ಏನಲ್ಲ. ಆಶ್ಚರ್ಯಕರವೂ ಅಲ್ಲ. ಕೆಲವು ವರ್ಷಗಳಿಂದ ಭಾರತದ ಅನೇಕ ಸ್ಥಳಗಳಲ್ಲಿ ಇಂತಹ ಘಟನೆಗಳು ಆಗುತ್ತಲೇ ಇವೆ. ನನ್ನ ದೃಷ್ಟಿಯಲ್ಲಿ ಇದರಲ್ಲಿ ಯಾವುದೇ ಘಟನೆಯು ಸಾಂದರ್ಭಿಕವಾಗಿ ಅಥವಾ ತತ್‌ಕ್ಷಣದ ಯಾವುದೇ ಅನಿರೀಕ್ಷಿತ ಕಾರಣದಿಂದ ನಡೆದಿಲ್ಲ. ಮುಂದಾಲೋಚನೆಯಿಂದ ವಿವರವಾಗಿ ಚರ್ಚಿಸಿ ಇಂಥ ಕಾರ್ಯಾಚರಣೆಗಳನ್ನು ಭಾರತದ ಎಲ್ಲ ಪ್ರದೇಶಗಳಲ್ಲಿ ಅವಕಾಶ ಸಿಕ್ಕಾಗ ಮಾಡಬೇಕೆಂದು ಬಲಪಂಥೀಯ ಥಿಂಕ್ ಟ್ಯಾಂಕ್ ನಿರ್ಧರಿಸಿದ ಮೇಲೆ ಎಲ್ಲ ಸರ್ಕಾರಗಳು ಈ ಕಾರ್ಯಾಚರಣೆಗಳಿಗೆ ಅವಶ್ಯಕವಾದ ಆಡಳಿತಾತ್ಮಕ ಕ್ರಮಗಳನ್ನು ಕೈಗೊಂಡಿವೆ. ಯಾವುದೂ ಲಿಖಿತವಾಗಿಲ್ಲದಿದ್ದರೂ ಮುಖ್ಯವಾಗಿ ಪೊಲೀಸ್ ಇಲಾಖೆಗಳಿಗೆ ಸ್ಪಷ್ಟವಾದ ಸಂದೇಶ ಹೋಗಿದೆ. ಇಲ್ಲದಿದ್ದರೆ ಎಲ್ಲ ಸ್ಥಳಗಳಲ್ಲಿ ಅಕ್ಷರಶಃ ಒಂದೇ ಮಾದರಿಯ ಘಟನೆಗಳು ಹೇಗೆ ನಡೆಯುತ್ತಿವೆ?

ಈ ಮಾದರಿಯಲ್ಲಿ ವ್ಯವಸ್ಥಿತವಾದ ಕೆಲವು ಹಂತಗಳಿವೆ. ಮೊದಲನೇ ಹಂತದಲ್ಲಿ ಬಲ ಪಂಥ ಅಥವಾ ಧಾರ್ಮಿಕ ವಿಷಯಗಳನ್ನು ಟೀಕೆ ಮಾಡುವವರನ್ನು ಟ್ರೋಲ್ ಮಾಡಲಾಗುತ್ತದೆ. ಯಾವುದೇ ಆಧಾರ ಇಲ್ಲದೆ ಇಂಥ ವ್ಯಕ್ತಿಗಳು ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ ಎನ್ನುವ ಆಪಾದನೆಯೂ ಸಾಮಾಜಿಕ ಜಾಲತಾಣಗಳಲ್ಲಿ ಓಡಾಡತೊಡಗುತ್ತದೆ.

ಎರಡನೇ ಹಂತದಲ್ಲಿ ಅವರನ್ನು ಆಹ್ವಾನಿಸುವ ಸಂಸ್ಥೆಗಳ ಮೇಲೆ ವಿವಿಧ ಬಗೆಯ ದಾಳಿಗಳು ಆರಂಭವಾಗುತ್ತವೆ. ಈ ದಾಳಿಗಳಲ್ಲಿ ಪ್ರಮುಖ ಆಯುಧವೆಂದರೆ ಅಂಥ ವ್ಯಕ್ತಿಯನ್ನು ಆಹ್ವಾನಿಸಿದರೆ ಗಲಭೆ, ಹಿಂಸೆ, ಆಗಬಹುದು (ಅಂದರೆ ಮಾಡುತ್ತೇವೆ) ಎಂಬ ಸಂದೇಶವು ಹೋಗುತ್ತದೆ. ನನ್ನ ಗುಮಾನಿಯೆಂದರೆ, ಇಂಥ ಸಂದೇಶ ನೀಡುವ ಮೊದಲೇ ಸಂಬಂಧಪಟ್ಟ ಪೊಲೀಸ್ ಠಾಣೆಗೆ, ಕಚೇರಿಗೆ ಮೌಖಿಕ ಸಂದೇಶ ಹೋಗಿ ಆತ್ಮೀಯವಾದ ಮಾತುಕತೆ ನಡೆದಿರುತ್ತದೆ. ಪೊಲೀಸ್ ಇಲಾಖೆಯು ಮತ್ತೆ ಮತ್ತೆ ನಡೆಯುತ್ತಿರುವ ಈ ಪ್ರಹಸನದಿಂದಾಗಿ ಒಂದು ರೆಡಿಮೇಡ್ ಡೈಲಾಗ್ ಸಿದ್ಧವಿರಿಸಿಕೊಂಡಿದೆ. ಅದೇನೆಂದರೆ, 'ನಾವು ಕಾರ್ಯಕ್ರಮವನ್ನು ನಿಷೇಧಿಸುವುದಿಲ್ಲ. ಆದರೆ, ಕಾನೂನು ಸುವ್ಯವಸ್ಥೆಯ ದೃಷ್ಟಿಯಿಂದ ನಿಮಗೆ ಸಲಹೆ ನೀಡುತ್ತಿದ್ದೇವೆ, ಯೋಚಿಸಿ' ಎಂಬುದೇ ಆ ಡೈಲಾಗ್.

ಇದರ ಸರಳ ಭಾಷಾಂತರವೆಂದರೆ, 'ಗಲಭೆ ಆಗುತ್ತದೆ, ನಾವು ನಿಮಗೆ ರಕ್ಷಣೆ ನೀಡುವುದಿಲ್ಲ' ಎಂದು. ಅಲ್ಲಿಗೆ ಬಹುಪಾಲು ಆತಿಥೇಯ ಸಂಸ್ಥೆಗಳು ನಿಗದಿತ ಕಾರ್ಯಕ್ರಮಗಳನ್ನು ರದ್ದುಪಡಿಸುತ್ತವೆ. ಈ ಸಂಸ್ಥೆಗಳಲ್ಲಿ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮನರಂಜನಾ ಸಂಸ್ಥೆಗಳು ಹಾಗೂ ವಾಹಿನಿಗಳು ಇವೆಲ್ಲವೂ ಸೇರಿಕೊಂಡಿವೆ. ನಾವು ಕಾರ್ಯಕ್ರಮವನ್ನು ನಿಷೇಧಿಸಿಲ್ಲ. ಅಂಥ ಯಾವುದೇ ಆಜ್ಞೆ, ಸೂಚನೆ ನೀಡಿಲ್ಲ ಎಂದು ಪೊಲೀಸರು ಸಮರ್ಥನೆ ಮಾಡಿಕೊಳ್ಳುತ್ತಾರೆ. ಇದು ನಿಜವೂ ಹೌದು.

ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಕಾಲದಿಂದಲೂ ಪೊಲೀಸರು ನ್ಯಾಯದ ಪರವಾಗಿ, ಸ್ವತಂತ್ರವಾಗಿ ಕಾರ್ಯನಿರ್ವಹಿಸಿದ ಉದಾಹರಣೆಯೇ ಇಲ್ಲ. ಅವರು ಶಿಸ್ತಿನ ಸಿಪಾಯಿಗಳಾಗಿದ್ದರಿಂದ ಸರ್ಕಾರದ ಆಜ್ಞೆಗಳನ್ನು ಪಾಲಿಸಿ ಸಮಾಜವನ್ನು ರಕ್ಷಿಸುತ್ತಾರೆ ಎಂಬ ನಂಬಿಕೆ ಈಗಲೂ ಬಲವಾಗಿದೆ. ಈ ಭ್ರಮೆಯು ಸುಲಭವಾಗಿ ಅಳಿದು ಹೋಗುವುದಿಲ್ಲ. ಮುಖ್ಯವಾಗಿ, ಪೊಲೀಸ್ ಇಲಾಖೆಯು ಸರ್ಕಾರದ ನಿಲುವುಗಳ ಬಗ್ಗೆ ಅತ್ಯಂತ ಸೂಕ್ಷ್ಮ ಸಂವೇದಿಯಾಗಿರುತ್ತದೆ. ಅದು ಪಿತೂರಿಯನ್ನು ಮಾಡುವುದಿಲ್ಲ. ಬದಲಾಗಿ, ಸರ್ಕಾರದ ಒಲವುಗಳನ್ನು ಗುರುತಿಸಿ ಆ ಪ್ರಕಾರ ನಡೆದುಕೊಳ್ಳುತ್ತದೆ. ಕರ್ನಾಟಕ ರಾಜ್ಯ ಸರ್ಕಾರವು ಖಚಿತವಾದ ಸಂದೇಶವನ್ನು ಆಡಳಿತಾಂಗಕ್ಕೆ ನೀಡಿದೆ. ಅದು ಅಭಿವ್ಯಕ್ತಿ ಸ್ವಾತಂತ್ರ್ಯ, ಸಂವಿಧಾನಾತ್ಮಕ ಹಕ್ಕುಗಳನ್ನು ಮಾನ್ಯ ಮಾಡುವುದಿಲ್ಲ. ಗಲಭೆ, ಬೆದರಿಕೆ ಹಾಗೂ ಹಿಂಸೆಯ ಮೂಲಕ ಸಾರ್ವಜನಿಕ ಕಾರ್ಯಕ್ರಮಗಳನ್ನು ನಿಲ್ಲಿಸುವವರ ವಿರುದ್ಧ ತಾನು ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ, ಆದರೆ ಪರೋಕ್ಷವಾಗಿ ತಿಳಿಸಿದೆ.



ವಿಶ್ವದ ಎಲ್ಲಾ ಸ್ಥಳಗಳಲ್ಲಿರುವಂತೆ ಭಾರತದಲ್ಲೂ ವ್ಯಂಗ್ಯಚಿತ್ರಕಾರರು, ವಿಡಂಬನೆಕಾರರು ವ್ಯವಸ್ಥೆಯನ್ನು ಅಣಕಿಸಿ, ಲೇವಡಿ ಮಾಡಿ, ವಿಮರ್ಶೆ ಮಾಡಿ ನಮ್ಮನ್ನು ಎಚ್ಚರಿಸುತ್ತಾ ಬಂದಿದ್ದಾರೆ. ಆದರೆ ಪ್ರಜಾಪ್ರಭುತ್ವವಾದಿ ನಂಬಿಕೆಗಳು ಕ್ರಮೇಣವಾಗಿ ನಾಶವಾಗುತ್ತಾ, ಸರ್ವಾಧಿಕಾರಿ ಪ್ರವೃತ್ತಿಗಳು ಪ್ರಬಲವಾದಂತೆ ಅವರು ಕಿಡಿಗೇಡಿಗಳಾಗಿ ಮತ್ತು ಅಪರಾಧಿಗಳಾಗಿ ಕಾಣುತ್ತಾರೆ

ಹೇಗಿದ್ದರೂ ದೇಶದ್ರೋಹದ ಆಪಾದನೆಯ ಅಸ್ತ್ರವಿರುವುದರಿಂದಾಗಿ, ಪ್ರಜಾಪ್ರಭುತ್ವದಲ್ಲಿ ಬಹುಮುಖ್ಯವಾದ ಅಕೌಂಟೆಬಿಲಿಟಿಯನ್ನು ಅದು ಅಲಕ್ಷಿಸುತ್ತದೆ. ನಮ್ಮ ನಾಗರಿಕರು ಈಗಲೂ ಕೂಡ ಪೊಲೀಸರು ಅಮಾಯಕರು, ಅವರು ಅನಿವಾರ್ಯವಾಗಿ ಹೀಗೆ ಮಾಡಬೇಕಾಗುತ್ತದೆ. ಅಲ್ಲದೆ ಅವರ ಕಾರ್ಯವಿಧಾನಕ್ಕೂ ಸರ್ಕಾರದ ಸೈದ್ಧಾಂತಿಕ ಒಲವುಗಳಿಗೂ ಏನೂ ಸಂಬಂಧವಿಲ್ಲವೆಂದು ನಂಬುತ್ತಾರೆ. ಒಟ್ಟಾರೆ ದೇಶದಲ್ಲಿ ಎಷ್ಟು ಭಾಷಣಗಳನ್ನು, ಕಾರ್ಯಕ್ರಮಗಳನ್ನು ಇದೇ ರೀತಿಯಲ್ಲಿ ನಿಲ್ಲಿಸಲಾಗಿದೆ ಎನ್ನುವ ಪಟ್ಟಿಯನ್ನು ಮಾಡಿಕೊಂಡರೆ ಈ ಭ್ರಮೆ ಸ್ವಲ್ಪವಾದರೂ ಕಡಿಮೆಯಾಗಬಹುದು.

ಬಹುಮುಖ್ಯವೆಂದರೆ ವಿಶ್ವದ ಎಲ್ಲಾ ಸ್ಥಳಗಳಲ್ಲಿರುವಂತೆ ಭಾರತದಲ್ಲೂ ವ್ಯಂಗ್ಯಚಿತ್ರಕಾರರು, ವಿಡಂಬನೆಕಾರರು ವ್ಯವಸ್ಥೆಯನ್ನು ಅಣಕಿಸಿ, ಲೇವಡಿ ಮಾಡಿ, ವಿಮರ್ಶೆ ಮಾಡಿ ನಮ್ಮನ್ನು ಎಚ್ಚರಿಸುತ್ತಾ ಬಂದಿದ್ದಾರೆ. ಆದರೆ ಪ್ರಜಾಪ್ರಭುತ್ವವಾದಿ ನಂಬಿಕೆಗಳು ಕ್ರಮೇಣವಾಗಿ ನಾಶವಾಗುತ್ತಾ, ಸರ್ವಾಧಿಕಾರಿ ಪ್ರವೃತ್ತಿಗಳು ಪ್ರಬಲವಾದಂತೆ ಅವರು ಕಿಡಿಗೇಡಿಗಳಾಗಿ ಮತ್ತು ಅಪರಾಧಿಗಳಾಗಿ ಕಾಣುತ್ತಾರೆ. ಅದನ್ನೇ ನಾವು ಒಂದು ಕಾಲದಲ್ಲಿ ಉದಾರವಾದಿ, ಆಧುನಿಕ ರಾಜ್ಯವಾಗಿದ್ದ ಕರ್ನಾಟಕದಲ್ಲಿಯೂ ಕಾಣುತ್ತಿದ್ದೇವೆ.

ಒಂದು ಅದ್ಭುತವಾದ ಜೋಕ್ ಈ ವಿದ್ಯಮಾನಗಳ ಬಗ್ಗೆ ನಮ್ಮ ಕಣ್ಣು ತೆರೆಯುತ್ತದೆ. ಸರ್ವಾಧಿಕಾರಿ ಆಳ್ವಿಕೆಯ ಒಂದು ದೇಶದಲ್ಲಿ ಒಬ್ಬನು ರಸ್ತೆಯಲ್ಲಿ 'ನಮ್ಮ ಸರ್ವಾಧಿಕಾರಿಯೊಬ್ಬ ಮೂರ್ಖ' ಎಂದು ಕೂಗುತ್ತಾ ಹೋದನಂತೆ. ಅವನನ್ನು ಸೆರೆಹಿಡಿದು ನ್ಯಾಯಾಲಯದಲ್ಲಿ ವಿಚಾರಿಸಿ ಶಿಕ್ಷೆ ನೀಡಲಾಯಿತು. ಶಿಕ್ಷೆ ಏನೆಂದರೆ ಆರು ತಿಂಗಳು ಮತ್ತು 20 ವರ್ಷಗಳ ಸಜೆ. ಇದೇನು ಎಂದು ಆಶ್ಚರ್ಯದಿಂದ ಅವನು ಕೇಳಿದಾಗ 'ಆರು ತಿಂಗಳು ಶಿಕ್ಷೆ ನೀನು ಸರ್ವಾಧಿಕಾರಿಯ ಮಾನನಷ್ಟ ಮಾಡಿದ್ದಕ್ಕಾಗಿ; 20 ವರ್ಷ ಶಿಕ್ಷೆ, ರಾಷ್ಟ್ರೀಯ ರಹಸ್ಯವನ್ನು ಹೀಗೆ ಬಯಲು ಮಾಡಿದ್ದಕ್ಕಾಗಿ' ಎಂದು ತಿಳಿಸಲಾಗುತ್ತದೆ.

ಮಾಧ್ಯಮಗಳು, ಸಮೂಹ ಮಾಧ್ಯಮಗಳು ಮತ್ತು ಜಾಲತಾಣಗಳು ಅಭಿಪ್ರಾಯವನ್ನು ರೂಪಿಸುವುದರಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿರುವ ಇಂದಿನ ಸಂದರ್ಭದಲ್ಲಿ ಸರ್ಕಾರಗಳು ಬಹು ಎಚ್ಚರಿಕೆಯಿಂದ ನಡೆದುಕೊಳ್ಳಬೇಕಾಗಿತ್ತು. ಪ್ರಜಾಪ್ರಭುತ್ವದ ಮಾದರಿಯಲ್ಲಿ ಬಹುಮತವನ್ನು ಪಡೆದು ಅಧಿಕಾರದಲ್ಲಿರುವ ಸರ್ಕಾರವು ತನ್ನ ಪರಿವಾರದ ಹತ್ತಾರು ಸಂಘಟನೆಗಳು ಹಾಗೂ ಸಂಸ್ಥೆಗಳಿಗೆ ಅನೈತಿಕವಾದ, ಸಂವಿಧಾನ ಹಾಗೂ ಆಡಳಿತ ವ್ಯವಸ್ಥೆಯನ್ನು ಮೀರಿದ ಅಧಿಕಾರವನ್ನು ಕೊಟ್ಟು ಅಭಿಪ್ರಾಯ, ವಿಮರ್ಶೆ, ಟೀಕೆ ಇವುಗಳನ್ನು ಒತ್ತಾಯದಿಂದ ನಿಲ್ಲಿಸುವಂತೆ ಮಾಡಿದರೆ ಅದು ಅಂತಿಮವಾಗಿ ಎರಡು ಪರಿಣಾಮಗಳಿಗೆ ಕಾರಣವಾಗುತ್ತದೆ. ಒಂದು ಅರಾಜಕತೆ, ಎರಡನೆಯದು ಹಿಂಸೆ. ಇವೆರಡನ್ನೂ ವಿಶ್ವದ ಯಾವುದೇ ಬಲಾಢ್ಯ ರಾಷ್ಟ್ರವು ಎದುರಿಸಿ ಗೆದ್ದ ಉದಾಹರಣೆಯಿಲ್ಲ. ಇದರ ಬದಲಾಗಿ ಎಷ್ಟೇ ದುರ್ಬಲವಾಗಿ ಕಂಡರೂ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ತಾಳಿಕೆಯ ಗುಣವಿದೆ. ಅವುಗಳನ್ನು ತಿರಸ್ಕರಿಸಿ ಅಧಿಕಾರದಲ್ಲಿ ಉಳಿಯುತ್ತೇವೆ ಎನ್ನುವುದು ಇನ್ನೇನಲ್ಲದಿದ್ದರೂ ರಾಜಕೀಯವಾಗಿ ಅಪಾಯಕಾರಿ ದಡ್ಡತನವಾಗುತ್ತದೆ.

ಲೇಖಕ: ಸಾಂಸ್ಕೃತಿಕ ಚಿಂತಕ

ಪದಬಂಧ 4797


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಗ್ಗೊಲೆಯ ಪ್ರಸಂಗವಿದು (4)
3.ತನಗೆ ಸಂಬಂಧವಿಲ್ಲದೆ ತಲೆ ಹಾಕುವುದು (4)
5.ಮಣ್ಣು ಕಲೆಸಿದ ನೀರು (3)
7.ಕೆಟ್ಟ ಮಂದಿ (3)
9.ಸವಿಯಾದುದು ಮರದೊಳಗಿದೆ (3)
10.ಬಾಣ ಹಿಡಿದಿರುವ ಶೈವ ಭಕ್ತ (3)
11.ವಾಲಿಯ ಮಗನಿವನು (3)
15.ಕೈಯಲ್ಲಿರುವ ಖಡ್ಗ (4)
16.ಕಾರನ್ನು ಏರಿ ನಡೆಸಿದ ಆಡಳಿತ! (4)

ಮೇಲಿಂದ ಕೆಳಕ್ಕೆ

1.ದೇವರಿಗೆ ಸಲ್ಲಿಸುವ ಮುಡಿಪು (3)
2.ತಗಡಿನಿಂದ ಮಾಡಿರುವ ಮುಚ್ಚುಳವುಳ್ಳ ಕರಂಡ (2)
3.ವಾರದ ಕೊನೆಗೆ ಬಂದಿರುವ ಅಭ್ಯರ್ಥಿ (5)
4.ಮಿತ್ರ ಬರೆದು ಕಳಿಸಿದ ಓಲೆ (2)
6.ಒಳ್ಳೆಯ ಅವಕಾಶ (5)
8.ಬಿಳಿಯ ಕೂದಲುಳ್ಳವನು (5)
9.ಸಾಯುವ ಸಮಯವಿದು (5)
12.ಒಡ್ಡೋಲಗದಲ್ಲಿ ಅಧಿಕಾರ ನಡೆಸುವಿಕೆ (3)
13.ಕಂಬಿ ತಿರುಗಿಸುತ್ತಾ ತೋರಿದ ಬಿನ್ನಾಣ (2)
14.ಉತ್ತರದವರ ಚಿಕ್ಕಪ್ಪ (2)



4796ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲಾಯನ3.ಜನಬಲ
5.ಕನ್ನಡಿ6.ಸುಮ್ಮಾನ
7.ಗಣಪ9.ಗುಮಾನಿ
11.ರಾದ್ಧಾಂತ
12.ಗುಲಾಮ13.ಪರಿಣತ
15.ತಿನ್ನಾಸಕ

ಮೇಲಿಂದ ಕೆಳಕ್ಕೆ:
1.ಪಗಡಿ2.ನಜ
4.ನಸುನಗು5.ಕರಗ
8.ಪರಾಯಣ10.ನಿಯಮ
12.ಗುಣಕ14.ತತ

ಸುಡೊಕು 5183

				5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1


5182 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಡಿಸೆಂಬರ್ 4, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ಅಮಾವಾಸ್ಯೆ ಗಂ. 17-44 (ಹ. 1-38) ಶನಿವಾರ ನಿತ್ಯ ನಕ್ಷತ್ರ ಅನೂರಾಧ ಗಂ. 12-56 (ಹ. 11-43) ಸುರ್ಮ ನಾಮ ಯೋಗ ಗಂ. 8-45 ನಾಗ ಕರಣ ಗಂ. 17-44 ವಿಷ ಗಂ. 25-57 ಅಮೃತ ಗಂ 48-17 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-31 ಸೂರ್ಯಾಸ್ತ: 5-48 ಅದೃಷ್ಟ ಸಂಖ್ಯೆ 3 7

ಮೇಷ: ಆರೋಗ್ಯದಲ್ಲಿ ವ್ಯತ್ಯಯದ ಸಾಧ್ಯತೆ ಕಂಡುಬರುವುದರಿಂದ ಎಚ್ಚರಿಕೆ ಅಗತ್ಯ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಮಿತ್ರರಿಂದ ಹೆಚ್ಚಿನ ಸಹಕಾರ ಲಭ್ಯ. ಕೃಷಿ ಯಂತ್ರೋಪಕರಣ ಬಳಸುವವರಿಗೆ ಎಚ್ಚರಿಕೆ ಅಗತ್ಯ.

ವೃಷಭ: ಗೃಹೋಪಯೋಗಿ ವಸ್ತುಗಳ ಖರೀದಿ ಸಾಧ್ಯತೆ. ಮನೆಯಲ್ಲಿ ನೆಮ್ಮದಿಯ ವಾತಾವರಣ. ನಿಷ್ಠೆ ಪ್ರಾಮಾಣಿಕತೆಗೆ ಮೇಲಧಿಕಾರಿಗಳಿಂದ ಪ್ರಶಂಸೆಯ ಮಾತುಗಳು. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಲಾಭ. ಕೆಲಸದ ಒತ್ತಡ.

ಮಿಥುನ: ವಿದ್ಯಾರ್ಥಿಗಳಿಗೆ ಉತ್ತಮ ಶ್ರದ್ಧೆಯಿಂದ ಸಫಲತೆ. ವಿದೇಶ ಪ್ರಯಾಣ ಯೋಗ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ ಇದ್ದು ಪತ್ರ ವ್ಯವಹಾರಗಳಲ್ಲಿ ಜಾಗರೂಕತೆ ಅಗತ್ಯ. ದತ್ತಾತ್ರೇಯನ ಆರಾಧನೆ ಮಾಡಿ.

ಕರ್ಕಾಟಕ: ಮಕ್ಕಳ ಆರೋಗ್ಯ ಹದಗೆಡುವ ಸಾಧ್ಯತೆ ಹೆಚ್ಚಿದ್ದು ನಿಗಾ ವಹಿಸಿ. ಆಧ್ಯಾತ್ಮಿಕತೆಯಲ್ಲಿ ಸಂತೃಪ್ತಿ. ಕೆಲಸ–ಕಾರ್ಯಗಳಿಗೆ ಉತ್ತಮ ಪ್ರೋತ್ಸಾಹ ದೊರಕುವುದು. ಮನಸ್ಸಿನ ಇಷ್ಟಾರ್ಥಗಳು ನೆರವೇರಿ ಸಮಾಧಾನ.

ಸಿಂಹ: ಮಾತೃವರ್ಗದವರಿಂದ ಉತ್ತಮ ಸಹಕಾರ ದೊರೆತು ಕಾರ್ಯದಲ್ಲಿ ಯಶಸ್ಸು. ಹಿರಿಯರ ಮಾತುಗಳನ್ನು ಉಪೇಕ್ಷಿಸಿ ವೃಥಾ ಗಂಡಾಂತರ ಎದುರಿಸುವ ಸಾಧ್ಯತೆ. ಅಮೂಲ್ಯ ವಸ್ತುಗಳು ಕೈ ಸೇರುವ ಯೋಗ.

ಕನ್ಯಾ: ಮಧುಮೇಹಿಗಳು ಆರೋಗ್ಯದ ಕಡೆ ಹೆಚ್ಚಿನ ನಿಗಾ ವಹಿಸುವ ಅಗತ್ಯ. ಸಂಕಲ್ಪಿತ ಕಾರ್ಯಗಳು ನೆರವೇರುವವು. ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ಆಂಜನೇಯನ ಅಷ್ಟೋತ್ತರ ಪಠಣದಿಂದ ಶ್ರೇಯಸ್ಸು.

ತುಲಾ: ಮಹಿಳೆಯರಿಗೆ ಅಗ್ನಿಬಾಧೆ ಕಂಡುಬರುತ್ತಿದ್ದು ಜಾಗರೂಕರಾಗಿರಿ. ಮಕ್ಕಳಿಂದ ನೆಮ್ಮದಿ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿ. ಆರೋಗ್ಯದಲ್ಲಿ ವ್ಯತ್ಯಯ. ಗುರುದೇವತಾ ದರ್ಶನ ಭಾಗ್ಯ. ಶಾರದಾ ದೇವಿಯ ಆರಾಧನೆ ಮಾಡಿ.

ವೃಶ್ಚಿಕ: ವೃತ್ತಿ ಜೀವನದ ಸಮಸ್ಯೆಗಳಿಗೆ ಸ್ವಲ್ಪ ಮಟ್ಟಿನ ಪರಿಹಾರ. ಮಹಿಳೆಯರಿಗೆ, ಕಲಾವಿದರಿಗೆ ಉತ್ತಮ ಪ್ರೋತ್ಸಾಹ ದೊರೆತು ಗೌರವ ಪ್ರಾಪ್ತಿ. ಸಹೋದರರ ಸಹಕಾರದಿಂದ ಯೋಜಿತ ಕಾರ್ಯಗಳಲ್ಲಿ ಯಶಸ್ಸು.

ಧನು: ಮಕ್ಕಳಿಂದ ಸಂತೋಷದ ವಾತಾವರಣ ಮೂಡುವುದು. ಮಹಿಳೆಯರ ಆಶೋತ್ತರಗಳು ನೆರವೇರುವ ಸದಾವಕಾಶ. ದೈನಂದಿನ ಚಟುವಟಿಕೆಗಳಲ್ಲಿ ಉತ್ಸಾಹ. ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರಶಂಸೆ ಕೇಳಿಬರುವುದು.

ಮಕರ: ಮಹಿಳೆಯರಿಗೆ ಚಿನ್ನಾಭರಣ ಖರೀದಿಸುವ ಸುಯೋಗ. ವಾಹನ ಚಲಾಯಿಸುವಾಗ ಎಚ್ಚರಿಕೆಯಿಂದಿರಿ. ಕೌಟುಂಬಿಕ ಸಮಸ್ಯೆಗಳು ಪರಿಹಾರ ಕಂಡುಕೊಂಡ ನೆಮ್ಮದಿ. ಗೃಹಿಣಿಯರು ಮಾತಿನಲ್ಲಿ ಎಚ್ಚರಿಕೆ ವಹಿಸಿ.

ಕುಂಭ: ಸಾಲ ಸೋಲಗಳಿಂದ ಮುಕ್ತರಾಗಿ ನೆಮ್ಮದಿ. ಅಧ್ಯಯನದಲ್ಲಿ ಪ್ರಗತಿ. ಆಧ್ಯಾತ್ಮಕ ವಿಷಯದಲ್ಲಿ ಉತ್ತಮ ಫಲ. ಗ್ರಹ ನಿರ್ಮಾಣ ಕಾರ್ಯಗಳು ಸುಗಮವಾಗಿ ಸಾಗುವವು. ಪ್ರೇಮ ಪ್ರಕರಣಗಳಲ್ಲಿ ಎಚ್ಚರಿಕೆ ಅಗತ್ಯ.

ಮೀನ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ. ಆಸ್ತಿ ವ್ಯವಹಾರಗಳಲ್ಲಿ ಅನುಕೂಲ. ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ ದೊರೆತು ನೆಮ್ಮದಿ. ಮಹಿಳೆಯರಿಗೆ ಸಾಮಾಜಿಕ ಜವಾಬ್ದಾರಿಯೊಂದಿಗೆ ಗೌರವಾದರಗಳು ಪ್ರಾಪ್ತವಾಗುವವು.

ನಿಮ್ಮ ಜನ್ಮದಿನ 4-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ವಿದ್ಯಾಭ್ಯಾಸದಲ್ಲಿ ಉನ್ನತಿಯು ವರವಾಗಿ ಪರಿಣಮಿಸುವುದು. ಉತ್ತಮ ಉದ್ಯೋಗ ದೊರೆತು ವಿದೇಶದಲ್ಲಿ ವಾಸಿಸುವ ಸಾಧ್ಯತೆಯನ್ನು ಹೊಂದಿದ್ದರೂ ಮಾತೃಭೂಮಿಯ ನಂಟನ್ನು ತೊರೆಯಲಾರಿರಿ. ಮಕ್ಕಳು ವಿದ್ಯಾಭ್ಯಾಸದಲ್ಲಿ ಪ್ರಗತಿ.

ಧಾರವಾಡ: ದ್ವಿಸದಸ್ಯ ಕ್ಷೇತ್ರ– ತಲಾ ಒಬ್ಬ ಅಭ್ಯರ್ಥಿಯನ್ನು ಕಣಕ್ಕಿಳಿಸಿದ ಬಿಜೆಪಿ, ಕಾಂಗ್ರೆಸ್

ನಂಗೊಂದು, ನಿಂಗೊಂದು: ಹೊಂದಾಣಿಕೆ ತಂತ್ರ

● ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಧಾರವಾಡ, ಗದಗ ಹಾಗೂ ಹಾವೇರಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ನ ಎರಡು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ 'ನಂಗೊಂದು, ನಿಂಗೊಂದು' ಎನ್ನುವ ಹೊಂದಾಣಿಕೆಯ ತಂತ್ರಕ್ಕೆ ಮೊರೆ ಹೋಗಿವೆ.

ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಎರಡೂ ಸ್ಥಾನಗಳನ್ನು ಗೆದ್ದುಕೊಳ್ಳುವ ಅವಕಾಶವನ್ನು ಎರಡೂ ರಾಷ್ಟ್ರೀಯ ಪಕ್ಷಗಳು ಚುನಾವಣೆ ಫಲಿತಾಂಶಕ್ಕೆ ಮುನ್ನವೇ ಕೈಚೆಲ್ಲಿವೆ. ಕಳೆದ ಬಾರಿ ಒಬ್ಬ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದ ಜೆಡಿಎಸ್, ಈ ಬಾರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ.

ಮೂರು ಜಿಲ್ಲೆಗಳಲ್ಲೂ ಪ್ರಬಲವಾಗಿದ್ದೇವೆ. ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಬೆಂಬಲಿಗರೇ ಗೆದ್ದಿದ್ದಾರೆ ಎಂದು ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು ಬಹಿರಂಗ ಸಭೆಗಳಲ್ಲಿ ಹೇಳಿಕೆ ನೀಡಿದರೂ, ಎರಡನೇ ಅಭ್ಯರ್ಥಿ ಕಣಕ್ಕಿಳಿಸಿ ಗೆಲ್ಲಿಸಿಕೊಳ್ಳಲು ಮುಂದಾಗಿಲ್ಲ. ಉತ್ತರ ಕರ್ನಾಟಕದಲ್ಲಿ ಬಿಜೆಪಿ ಪ್ರಬಲವಾಗಿದೆ ಎನ್ನುವ ನಾಯಕರು ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ರಿಸ್ಕ್ ತೆಗೆದುಕೊಳ್ಳದೇ ರಕ್ಷಣಾತ್ಮಕ ಆಟದ ಮೊರೆ ಹೋಗಿದ್ದಾರೆ.

ಜೆಡಿಎಸ್‌ನೊಂದಿಗೆ ಬಿಜೆಪಿಯವರು ಹೊಂದಾಣಿಕೆ ಮಾಡಿಕೊಂಡಿದ್ದಾರೆ. 'ಜೆಡಿಎಸ್ ಪಕ್ಷವು ಬಿಜೆಪಿಯ ಬಿ ಟೀಂ' ಎನ್ನುವ ಕಾಂಗ್ರೆಸ್ ನಾಯಕರೂ ಎರಡನೇ ಅಭ್ಯರ್ಥಿ ಕಣಕ್ಕಿಳಿಸಿಲ್ಲ. ಇಬ್ಬರನ್ನು ಕಣಕ್ಕಿಳಿಸಿದರೆ ಸೋಲಿನ ಭಯ ಎದುರಾಗುವ ಆತಂಕ ಎರಡೂ ಪಕ್ಷಗಳಲ್ಲಿದೆ. ಹಾಗಾಗಿಯೇ, ಹೊಂದಾಣಿಕೆ ಮಂತ್ರ ಜಪಿಸಿವೆ.



ಗ್ರಾಮ ಪಂಚಾಯ್ತಿಗಳಿಗೆ ನೇರ ಅನುದಾನ ತರಲು, ವೇತನ ಹೆಚ್ಚಳಕ್ಕೆ ಹೋರಾಟ ಮಾಡಿದ್ದೇನೆ. ಪರಿಷತ್ ಸದಸ್ಯರ ಅನುದಾನ ಪೂರ್ಣವಾಗಿ ಬಳಸಿದ್ದೇನೆ. ಹೆಚ್ಚಿನ ಅನುದಾನ ತಂದಿದ್ದೇನೆ
ಪ್ರದೀಪ ಶೆಟ್ಟರ್, ಬಿಜೆಪಿ ಅಭ್ಯರ್ಥಿ



ನಾನು ಹೊರಗಿನವನಲ್ಲ. 25 ವರ್ಷಗಳಿಂದ ಹಾವೇರಿ ಕ್ಷೇತ್ರದ ಮತದಾರ. ಮೂರೂ ಜಿಲ್ಲೆಯ ಎಲ್ಲ ಮುಖಂಡರೂ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ
ಸಲೀಂ ಅಹ್ಮದ್, ಕಾಂಗ್ರೆಸ್ ಅಭ್ಯರ್ಥಿ

ಜಿಲ್ಲೆ	ಮಹಿಳೆಯರು	ಪುರುಷರು	ಒಟ್ಟು ಮತದಾರರು	ಮತಗಟ್ಟೆಗಳ ಸಂಖ್ಯೆ
ಧಾರವಾಡ	1,111	1,054	2,165	144
ಹಾವೇರಿ	1,733	1,636	3,369	230
ಗದಗ	1,000	969	1,969	130

ಬಿಜೆಪಿಗಿದು ಪ್ರತಿಷ್ಠೆಯ ಕ್ಷೇತ್ರ: ಈಗ ಮುಖ್ಯಮಂತ್ರಿಯಾಗಿರುವ ಬಸವರಾಜ ಬೊಮ್ಮಾಯಿ ಅವರು ಈ ಹಿಂದೆ ಎರಡು ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ತವರು ಜಿಲ್ಲೆ ಧಾರವಾಡ ಹಾಗೂ ಅವರು ಶಾಸಕರಾಗಿರುವ ಶಿಗ್ಗಾವಿ ಕ್ಷೇತ್ರ ಇದೇ ಕ್ಷೇತ್ರದಲ್ಲಿ ಬರುತ್ತವೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಧಾರವಾಡ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದಾರೆ.

ಬಿಜೆಪಿ ಅಭ್ಯರ್ಥಿ ಪ್ರದೀಪ ಶೆಟ್ಟರ್, ಶಾಸಕ ಜಗದೀಶ ಶೆಟ್ಟರ್ ಅವರ ಸಹೋದರ. ಕ್ಷೇತ್ರ ವ್ಯಾಪ್ತಿಯ 17 ಶಾಸಕರಲ್ಲಿ 13 ಶಾಸಕರು ಹಾಗೂ ಇಬ್ಬರು ಸಂಸದರು ಬಿಜೆಪಿಯವರಿದ್ದಾರೆ. ಹೀಗಾಗಿ ಪ್ರಥಮ ಪ್ರಾಶಸ್ತ್ಯದ ಹೆಚ್ಚು ಮತಗಳಲ್ಲಿಯೇ ಗೆಲುವು ಸಾಧಿಸಲು ಬಿಜೆಪಿ ನಾಯಕರು ಯತ್ನಿಸುತ್ತಿದ್ದಾರೆ. ಪರಿಷತ್ ಸದಸ್ಯರಾಗಿದ್ದಾಗ ಪ್ರದೀಪ ಶೆಟ್ಟರ್ ಅವರು ಕ್ಷೇತ್ರದಲ್ಲಿ ಸಂಚರಿಸಿ ಸಮಸ್ಯೆಗಳಿಗೆ ಸ್ಪಂದಿಸಿಲ್ಲ ಎಂಬ ಅಸಮಾಧಾನ ಅಲ್ಲಲ್ಲಿ ವ್ಯಕ್ತವಾಗುತ್ತಿದೆ. ಅದನ್ನು ಶಮನಗೊಳಿಸುವ ಕಾರ್ಯವೂ ನಡೆದಿದೆ.

ಕಾಂಗ್ರೆಸ್ ಅಭ್ಯರ್ಥಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಅವರು ಬೆಂಗಳೂರು ಮೂಲದವರಾದರೂ ಎರಡು ಬಾರಿ ಹಾವೇರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರಿಂದ ಪರಿಚಿತರಾಗಿದ್ದಾರೆ. ಅವರ ಗೆಲುವಿಗೆ ಕ್ಷೇತ್ರ ವ್ಯಾಪ್ತಿಯ ನಾಲ್ವರು ಶಾಸಕರು ಹಾಗೂ ಮುಖಂಡರು ಸಂಘಟಿತ ಯತ್ನ ಮಾಡುತ್ತಿದ್ದಾರೆ. ಜೊತೆಗೆ ಜೆಡಿಎಸ್ ಮುಖಂಡ ಎನ್.ಎಚ್. ಕೋನರಡ್ಡಿ ಅವರು ಬಹಿರಂಗವಾಗಿಯೇ ಕಾಂಗ್ರೆಸ್ ಬೆಂಬಲಿಸಿದ್ದಾರೆ.

ಜನತಾ ಪಕ್ಷದಿಂದ ಇಬ್ಬರು ಅಭ್ಯರ್ಥಿಗಳು ಸೇರಿದಂತೆ ಒಟ್ಟು 10 ಮಂದಿ ಕಣದಲ್ಲಿದ್ದಾರೆ. ಬಿಜೆಪಿ ಬಂಡಾಯ ಅಭ್ಯರ್ಥಿ ಎಂದೇ ಗುರುತಿಸಿಕೊಂಡಿರುವ ಹಾವೇರಿ ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಹಾವೇರಿ ಸದ್ದು ಮಾಡುತ್ತಿದ್ದಾರೆ. ಬಿಜೆಪಿ ಹಾಗೂ ಕಾಂಗ್ರೆಸ್ ಬೆಂಬಲಿತ ಸದಸ್ಯರ ನೆರವಿನಿಂದ ಎಪಿಎಂಸಿ ಅಧ್ಯಕ್ಷರಾಗಿದ್ದಾರೆ. ಎರಡು ಸ್ಥಾನಗಳಿಗೆ ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ಒಬ್ಬರೇ ಅಭ್ಯರ್ಥಿ ಕಣಕ್ಕಿಳಿಸಿರುವುದರಿಂದ ಹೆಚ್ಚೂ-ಕಡಿಮೆ ಅವರ ಗೆಲುವಿನ ಹಾದಿ ಸುಗಮವಾಗಿದೆ.

ಪರಿಷತ್ ಚುನಾವಣೆ
ಕ್ಷೇತ್ರ ಸಮೀಕ್ಷೆ

ಗೆದ್ದವರಿಗೆ ಇತಿಹಾಸ ರಚನೆಯ ಅವಕಾಶ!

ಉತ್ತರ ಕನ್ನಡ: ಬಿಜೆಪಿ – ಕಾಂಗ್ರೆಸ್ ನೇರ ಹಣಾಹಣಿ, ಸ್ಪರ್ಧೆಯಲ್ಲಿಲ್ಲದ ಜೆಡಿಎಸ್

● ಸದಾಶಿವ ಎಂ.ಎಸ್

ಕಾರವಾರ: ಈ ಬಾರಿಯ ವಿಧಾನಪರಿಷತ್ ಚುನಾವಣೆಗೆ ಉತ್ತರ ಕನ್ನಡ ಕ್ಷೇತ್ರದಲ್ಲಿ ಐವರು ಕಣದಲ್ಲಿದ್ದಾರೆ. ಆದರೆ, ನೇರ ಹಣಾಹಣಿ ಏರ್ಪಟ್ಟಿರುವುದು ಬಿಜೆಪಿಯ ಗಣಪತಿ ಉಳ್ವೇಕರ್ ಮತ್ತು ಕಾಂಗ್ರೆಸ್‌ನ ಭೀಮಣ್ಣ ನಾಯ್ಕ ಅವರ ನಡುವೆ. ಸ್ಪರ್ಧೆಯಲ್ಲಿಲ್ಲದ ಜೆಡಿಎಸ್ ಯಾರನ್ನು ಬೆಂಬಲಿಸಬೇಕು ಎಂಬ ಗೊಂದಲದಿಂದ ಇನ್ನೂ ಹೊರಬಂದಿಲ್ಲ.

ಈ ಕ್ಷೇತ್ರದಲ್ಲಿ ಮೂರು ಬಾರಿ ಕಾಂಗ್ರೆಸ್ ಹಾಗೂ ಎರಡು ಬಾರಿ ಜನತಾ ಪರಿವಾರದ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಬಿಜೆಪಿಗೆ ಒಮ್ಮೆಯೂ ಗೆಲುವು ದಕ್ಕಿಲ್ಲ. ಹಿಂದಿನ ಎರಡು ಅವಧಿಗೆ ಆಯ್ಕೆಯಾಗಿದ್ದ ಕಾಂಗ್ರೆಸ್‌ನ ಶ್ರೀಕಾಂತ ಘೊಟ್ನೇಕರ್, ಈ ಬಾರಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದರು. ಅವರೀಗ ಹಳಿಯಾಳ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿದ್ದಾರೆ.

ಸೂಕ್ತ ಅಭ್ಯರ್ಥಿಯನ್ನು ಕಣಕ್ಕಿಳಿಸುವ ವಿಚಾರದಲ್ಲಿ ಕೆಲವು ಸಲ ಶಾಸಕ ಆರ್.ವಿ.ದೇಶಪಾಂಡೆ ಜೊತೆಗೆ ವೈಮನಸ್ಸು ಉಂಟಾಗಿದ್ದೂ ಇದೆ. ಆದರೂ ಈ ಬಾರಿಯ ವಿಧಾನಪರಿಷತ್ ಚುನಾವಣೆಯನ್ನು ದೇಶಪಾಂಡೆ ಅವರದ್ದೇ ಮುಂದಾಳತ್ವದಲ್ಲಿ ಕಾಂಗ್ರೆಸ್ ಎದುರಿಸುತ್ತಿದೆ. ಹಾಗಾಗಿ ಅವರ ಶಕ್ತಿ ಪ್ರದರ್ಶನಕ್ಕೆ ಈ ಚುನಾವಣೆ ವೇದಿಕೆ ಎಂಬಂತಿದೆ. ಯಾರನ್ನು ಕಣಕ್ಕಿಳಿಸುವುದು ಎಂಬ ಜಿಜ್ಞಾಸೆಯಲ್ಲಿ ಅಂತಿಮವಾಗಿ ಪಕ್ಷದ ಜಿಲ್ಲಾ ಸಮಿತಿ ಅಧ್ಯಕ್ಷ ಭೀಮಣ್ಣ ನಾಯ್ಕ ಅವರನ್ನೇ ಪಕ್ಷವು ಅಭ್ಯರ್ಥಿಯನ್ನಾಗಿ ಘೋಷಿಸಿತು.

ಮತದಾರರು: ಅಂಕಿ ಅಂಶ	
ಮಹಿಳೆಯರು	1,533
ಪುರುಷರು	1,383
ಒಟ್ಟು	2,916
ಮತಗಟ್ಟೆಗಳು	238



ಜಿ.ಪಂ ಸದಸ್ಯನಾಗಿ ಪಂಚಾಯತ್ ರಾಜ್ ಬಗ್ಗೆ ಅರಿತಿದ್ದೇನೆ. ಈ ವ್ಯವಸ್ಥೆಯಲ್ಲಿ ನಂಬಿಕೆಯಿಲ್ಲದ ಬಿಜೆಪಿ, ಉದ್ದೇಶಪೂರ್ವಕ ಜಿ.ಪಂ, ತಾ.ಪಂ ಚುನಾವಣೆ ವಿಳಂಬ ಮಾಡುತ್ತಿದೆ.
ಭೀಮಣ್ಣ ನಾಯ್ಕ, ಕಾಂಗ್ರೆಸ್ ಅಭ್ಯರ್ಥಿ



ಜಿಲ್ಲೆಯ ಶೇ 70ರಷ್ಟು ಮತದಾರರು ಬಿ.ಜೆ.ಪಿ ಬೆಂಬಲಿಸುತ್ತಾರೆ. ಈ ಹಿಂದೆ ಆಯ್ಕೆಯಾದವರ ಕಾರ್ಯವೈಖರಿಯಿಂದ ಬೇಸತ್ತು ಪಕ್ಷಕ್ಕೆ ಮತ ನೀಡಲಿದ್ದಾರೆ.
ಗಣಪತಿ ಉಳ್ವೇಕರ್, ಬಿಜೆಪಿ ಅಭ್ಯರ್ಥಿ

ಮುಖ್ಯಾಂಶಗಳು

- ಒಮ್ಮೆಯೂ ಗೆಲುವು ಕಾಣದ ಬಿ.ಜೆ.ಪಿ
- ಕಾಂಗ್ರೆಸ್‌ಗೆ ಹ್ಯಾಟ್ರಿಕ್ ಗೆಲುವಿನ ಗುರಿ
- ಕಣದಲ್ಲಿ ಮೂವರು ಪಕ್ಷೇತರರು

ಶಿರಸಿ–ಸಿದ್ದಾಪುರ ವಿಧಾನ ಸಭೆ ಕ್ಷೇತ್ರದ ಚುನಾವಣೆ, ಯಲ್ಲಾಪುರ–ಮುಂಡಗೋಡ ಕ್ಷೇತ್ರದ ಉಪ ಚುನಾವಣೆಗಳಲ್ಲಿ ಸ್ಪರ್ಧಿಸಿ ಅವರು ಸೋತಿದ್ದರು. ಆದರೆ, ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಕೆಲಸ ಮಾಡಿದ್ದ ಭೀಮಣ್ಣ ಅವರ ಜನಪ್ರಿಯತೆ ವಿಧಾನಪರಿಷತ್ ಚುನಾವಣೆಯಲ್ಲಿ ಕೆಲಸ ಮಾಡಬಹುದು ಎಂಬ ನಂಬಿಕೆ ಪಕ್ಷದ ಮುಖಂಡರದ್ದು.

ಬಂಡಾಯದ ನಡುವೆ: ಇತ್ತ ಪಕ್ಷದ ಅಭ್ಯರ್ಥಿಯ ಆಯ್ಕೆಗೆ ಬಿಜೆಪಿ ನಡೆಸಿದ ಸಭೆಯಲ್ಲಿ 24 ಆಕಾಂಕ್ಷಿಗಳು ಮುಂದೆ ಬಂದಿದ್ದರು. ಕೊನೆಗೆ ಮೀನುಗಾರರ ಮುಖಂಡ ಗಣಪತಿ ಉಳ್ವೇಕರ್ ಅವರಿಗೆ ಟಿಕೆಟ್ ಘೋಷಣೆಯಾಯಿತು. ಹಿಂದಿನ ಚುನಾವಣೆಗಳಲ್ಲಿಯೂ ಸ್ಪರ್ಧಿಸಿ ಸೋತಿದ್ದವರಿಗೆ ಮತ್ತೆ ಟಿಕೆಟ್ ನೀಡಿದ್ದು ಕೆಲವು ಉಮೇದುವಾರರ ಕಣ್ಣು ಕೆಂಪಾಗಿಸಿತು. ಟಿಕೆಟ್ ನಿರೀಕ್ಷೆಯಲ್ಲಿದ್ದ ಉದ್ಯಮಿ ಭಾಸ್ಕರ ನಾರ್ವೇಕರ್ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಮುಂದಾದರು. ಕೊನೆಗೆ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ ಹಾಗೂ ಇತರರು ಮನವೊಲಿಸಿ ಒಗ್ಗಟ್ಟಿನ ಮಂತ್ರ ಜಪಿಸಿದರು.

ಬಿಜೆಪಿಯ ಮತ್ತೊಬ್ಬ ಮುಖಂಡ ದತ್ತಾತ್ರೇಯ ನಾಯ್ಕ ಕೂಡ ಪಕ್ಷೇತರರಾಗಿ ಸ್ಪರ್ಧೆಯಲ್ಲಿದ್ದಾರೆ. ಆದರೆ, ಅವರನ್ನು ಪಕ್ಷದ ಮುಖಂಡರು ನಿರ್ಲಕ್ಷಿಸಿದ್ದಾರೆ.

ಸಚಿವ ಶಿವರಾಮ ಹೆಬ್ಬಾರ ನೇತೃತ್ವದಲ್ಲಿ ಮತ ಯಾಚನೆ ನಡೆಯುತ್ತಿದೆ. ಶಾಸಕ ಬಿ.ಎಸ್. ಯಡಿಯೂರಪ್ಪ ಅವರನ್ನು ಯಲ್ಲಾಪುರಕ್ಕೆ ಕರೆಯಿಸಿ ಸಮಾವೇಶ ಹಮ್ಮಿಕೊಂಡು ಶಕ್ತಿ ಪ್ರದರ್ಶನವನ್ನೂ ಮಾಡಲಾಗಿದೆ. ಉಳಿದಂತೆ, 'ರೈತ ಭಾರತ' ಪಕ್ಷದ ಅಭ್ಯರ್ಥಿಯಾಗಿ ಸೋಮಶೇಖರ ವಿ.ಎಸ್. ಹಾಗೂ ಪಕ್ಷೇತರರಾಗಿ ಈಶ್ವರ ಗೌಡ ಕೂಡ ಕಣದಲ್ಲಿದ್ದಾರೆ.

'ಒಕ್ಕಲಿಗರನ್ನು ಒಡೆಯಲು ಬಿಡಲ್ಲ'

ಗುಬ್ಬಿ (ತುಮಕೂರು): 'ಜಿಲ್ಲೆಯಲ್ಲಿ ಯಾವ ಪುಣ್ಯಾತ್ಮ ಜಾತಿ ವಿಷ ಬೀಜ ಬಿತ್ತಿದ್ದಾರೋ ಅವರಿಗೆ ತಕ್ಕ ಉತ್ತರ ನೀಡಬೇಕು. ಸಮಾಜವನ್ನು ಒಡೆದು, ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಇಂತಹ ಅನ್ಯಾಯ ನೋಡಿಕೊಂಡು ಸುಮ್ಮನಿರುವುದಿಲ್ಲ. ಅಂತಹವರ ವಿರುದ್ಧ ಜೀವ ಇರುವವರೆಗೂ ಹೋರಾಡುತ್ತೇನೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಗುಡುಗಿದರು.

ಹೆರೂರಿನಲ್ಲಿ ಪಕ್ಷದ ಅಭ್ಯರ್ಥಿ ಆರ್. ಅನಿಲ್ ಕುಮಾರ್ ಪರ ಶುಕ್ರವಾರ ಹಮ್ಮಿಕೊಂಡಿದ್ದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. 'ಒಕ್ಕಲಿಗ ಸಮುದಾಯದ ಗಂಗಟಕಾರ, ಕುಂಚಿಟಿಗ, ಮೊರಸು ಒಕ್ಕಲಿಗರೆಲ್ಲಾ ಒಂದೇ. ಆದರೆ ಕೆಲವರು ನಮ್ಮ ಸಮುದಾಯದ ಒಗ್ಗಟ್ಟು ಮುರಿದು, ನಮ್ಮ ಶಕ್ತಿ ನಾಶ ಮಾಡಲು ಹೊರಟಿದ್ದಾರೆ' ಎಂದು ಟೀಕಿಸಿದರು.

'ಕಳೆದ ಲೋಕಸಭೆ ಚುನಾವಣೆಯಲ್ಲಿ ನನ್ನ ಸೋಲಿಗೆ ಕಾರಣರಾದವರ ಸಮುದಾಯದವರನ್ನೇ ಅಭ್ಯರ್ಥಿ ಮಾಡಿದ್ದೇನೆ. ನನ್ನ ಸೋಲಿನ ನೋವು ಮರೆಯಬೇಕಾದರೆ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಡಿ' ಎಂದು ಮನವಿ ಮಾಡಿದರು.

ಸಂವಾದದಲ್ಲಿ ಪೇಚಿಗೆ ಸಿಲುಕಿದ ಅಭ್ಯರ್ಥಿಗಳು

ದೇವರ ಹೆಸರಿನಲ್ಲಿ ಪ್ರಮಾಣ ಮಾಡಲು ಹಿಂದೇಟು

ಪ್ರಜಾವಾಣಿ ವಾರ್ತೆ

ಮೈಸೂರು: 'ಚುನಾವಣೆಯಲ್ಲಿ ಮತದಾರರಿಗೆ ಹಣ ಹಂಚುವುದಿಲ್ಲ ಎಂದು ದೇವರ ಹೆಸರಿನಲ್ಲಿ ಆಣೆ, ಪ್ರಮಾಣ ಮಾಡುವಿರಾ' ಎಂಬ ಪ್ರಶ್ನೆಗೆ ನೇರವಾಗಿ ಉತ್ತರಿಸಲಾಗದೆ, ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯ ಅಭ್ಯರ್ಥಿಗಳು ಪೇಚಿಗೆ ಸಿಲುಕಿದ ಪ್ರಸಂಗ ಶುಕ್ರವಾರ ಇಲ್ಲಿ ನಡೆಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಏರ್ಪಡಿಸಿದ್ದ ಸಂವಾದದಲ್ಲಿ, 'ಈ ಬಾರಿ ಒಬ್ಬೊಬ್ಬ ಅಭ್ಯರ್ಥಿಗೆ ₹ 15 ಕೋಟಿವರೆಗೆ ಖರ್ಚಾಗುತ್ತದೆ. ಮತದಾರರ ಖರೀದಿ ನಡೆಯುತ್ತಿದೆ ಎಂಬ ಮಾತುಗಳು ಸಾರ್ವಜನಿಕವಾಗಿ ಕೇಳಿಬಂದಿವೆ. ನಾವು ಹಣ ಹಂಚುವುದಿಲ್ಲ ಎಂದು ಪ್ರಮಾಣ ಮಾಡಿ, ಇಡೀ ರಾಜ್ಯಕ್ಕೆ ಸಂದೇಶ ರವಾನಿಸುವಿರಾ' ಎಂಬ ಪ್ರಶ್ನೆ ಎದುರಾಯಿತು.

ಕನ್ನಡ ಚಳವಳಿ ವಾಟಾಳ್ ಪಕ್ಷದ ಅಭ್ಯರ್ಥಿ ವಾಟಾಳ್ ನಾಗರಾಜ್ ಅವರನ್ನು ಹೊರತುಪಡಿಸಿದರೆ, ಬಿಜೆಪಿಯ ಆರ್.ರಘು ಕೌಟಿಲ್ಯ, ಕಾಂಗ್ರೆಸ್‌ನ ಡಾ.ಡಿ.ತಿಮ್ಮಯ್ಯ, ಜೆಡಿಎಸ್‌ನ ಸಿ.ಎನ್.ಮಂಜೇಗೌಡ ನೇರ ಉತ್ತರ ನೀಡಲಿಲ್ಲ.

'ಮತದಾರರಿಗೆ ಇದುವರೆಗೆ ನಯಾಪೈಸೆ ಕೊಟ್ಟಿಲ್ಲ, ಮುಂದೆಯೂ ಕೊಡುವುದಿಲ್ಲ ಎಂದು ವೆಂಕಟರಮಣಸ್ವಾಮಿ ದೇವರ ಹೆಸರಲ್ಲಿ ಪ್ರಮಾಣ ಮಾಡುತ್ತೇನೆ' ಎಂದು ವಾಟಾಳ್ ನಾಗರಾಜ್ ಪ್ರಮಾಣ ಮಾಡಿದರು. ನಂತರ ಅವರು, 'ನಾನು ಪ್ರಮಾಣ ಮಾಡಿದಂತೆ ನೀವೂ ಮಾಡಿ' ಎಂದು ಪ್ರತಿಸ್ಪರ್ಧಿಗಳಿಗೆ ಸವಾಲು ಹಾಕಿದರು.

ಡಿ.ತಿಮ್ಮಯ್ಯ ಮಾತನಾಡಿ, 'ಇದು ನನಗೆ ಮೊದಲ ಚುನಾವಣೆ. ಮತಕ್ಕೆ ದುಡ್ಡು ಕೊಡುವ ವಿಚಾರ ಗೊತ್ತಿಲ್ಲ. ಪಕ್ಷದ ಕೊಡುಗೆಗಳನ್ನು ನೋಡಿ ಮತ ಹಾಕುವಂತೆ ಮತದಾರರಲ್ಲಿ ಕೇಳಿಕೊಳ್ಳುತ್ತೇನೆ' ಎಂದರು.

ರಘು ಕೌಟಿಲ್ಯ ಅವರು, 'ಇಂತಿಷ್ಟು ಹಣ ಖರ್ಚು ಮಾಡಬಹುದು ಎಂದು ಚುನಾವಣಾ ಆಯೋಗ ಹೇಳಿದೆ. ಖರ್ಚು ವೆಚ್ಚ ಇಲ್ಲದೆ ಯಾವ ಚುನಾವಣೆ ಆಗುವುದಿಲ್ಲ. ಆದರೆ ಮತಗಳು ಬಿಕರಿಗಿಲ್ಲ ಎಂದು ಸಾಬೀತುಪಡಿಸುವ ಪ್ರಯತ್ನ ಮಾಡುತ್ತೇನೆ' ಎಂದರು.

'ದೇವರ ಹೆಸರಿನಲ್ಲಿ ಪ್ರಮಾಣ ಮಾಡಬೇಕು' ಎಂದು ವಾಟಾಳ್ ಮತ್ತೆ ಒತ್ತಾಯಿಸಿದಾಗ ರಘು ಅವರು, 'ಎಲ್ಲ ಅಭ್ಯರ್ಥಿಗಳ ಪರವಾಗಿ ಉತ್ತರಿಸುತ್ತಿದ್ದೇನೆ. ಕಣದಲ್ಲಿರುವ ಎಲ್ಲರೂ ನಾಮಪತ್ರ ಸಲ್ಲಿಸುವಾಗ ಸಂವಿಧಾನದ ಆಶಯದಂತೆ ಪ್ರಮಾಣವಚನ ಮಾಡಿದ್ದು, ಅದಕ್ಕೆ ಬದ್ಧರಾಗಿದ್ದೇವೆ. ಸಂವಿಧಾನಕ್ಕಿಂತ ಶ್ರೇಷ್ಠವಾದುದು ಬೇರೊಂದಿಲ್ಲ' ಎಂದು ಚರ್ಚೆಗೆ ಅಂತ್ಯ ಹಾಡಿದರು.

ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಉಪ್ಪಾರರ ಅಸಮಾಧಾನ

ಮೈಸೂರು: 'ಉಪ್ಪಾರ ಸಮುದಾಯದ ಮುಖಂಡರ ಹೆಸರನ್ನು ಹೇಳಲಿಲ್ಲ, ವೇದಿಕೆಗೂ ಕರೆದಿಲ್ಲ' ಎಂದು ಸಮುದಾಯದ ಕಾರ್ಯಕರ್ತರು ಕಾಂಗ್ರೆಸ್ ಚುನಾವಣೆ ಪ್ರಚಾರ ಸಭೆಯ ನಡುವೆಯೇ ವೇದಿಕೆ ಏರಿ ಅಸಮಾಧಾನ ವ್ಯಕ್ತಪಡಿಸಿದರು.

ವರುಣ ವಿಧಾನಸಭಾ ಕ್ಷೇತ್ರದ ವರುಣ ಹಾಗೂ ತಗಡೂರು ಬ್ಲಾಕ್ ಕಾಂಗ್ರೆಸ್ ಸಮಿತಿಯು ನಗರದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಕಾರ್ಯಕರ್ತರು, 'ಸಮುದಾಯದವರಿಗೆ ಕ್ಷೇತ್ರದಲ್ಲಿ ಮಾನ್ಯತೆ ನೀಡುತ್ತಿಲ್ಲ' ಎಂದು ದೂರಿದ್ದರಿಂದ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಮುಖಂಡ ಡಾ.ಎಚ್.ಸಿ. ಮಹದೇವಪ್ಪ ಮಾತನಾಡುವಾಗ ಈ ಘಟನೆ ನಡೆಯಿತು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಸಮಾಧಾನ ಪಡಿಸಲು ಯತ್ನಿಸಿದರು. ಕಾರ್ಯಕರ್ತರು ಜೋರು ಧ್ವನಿಯಲ್ಲಿ ಮಾತು ಮುಂದುವರಿಸಿದಾಗ ಕೋಪದಿಂದ ಹೊರಹಾಕುವುದಾಗಿ ಎಚ್ಚರಿಸಿದರು. ಕಾರ್ಯಕರ್ತರು ಹೊರ ಹೋದ ನಂತರ ಮಹದೇವಪ್ಪ ಭಾಷಣ ಮುಂದುವರಿಸಿದರು.

'ರಮೇಶ ಇಬ್ಬರನ್ನೂ ಗೆಲ್ಲಿಸಲಾರರು'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿಧಾನಪರಿಷತ್ ಚುನಾವಣೆಯಲ್ಲಿ ಶಾಸಕ ರಮೇಶ ಜಾರಕಿಹೊಳಿ ಅವರು ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ ಅಥವಾ ಬಿಜೆಪಿಯ ಮಹಾಂತೇಶ ಕವಟಗಿಮಠ ಅವರನ್ನು ಗೆಲ್ಲಿಸಬೇಕು. ಇಬ್ಬರನ್ನೂ ಗೆಲ್ಲಿಸುವ ಶಕ್ತಿ ಅವರಲ್ಲಿ ಇಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಶುಕ್ರವಾರ ಲೇವಡಿ ಮಾಡಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಬಳಿ ಇರುವ ಮತಗಳಲ್ಲಿ ಎರಡು ಸ್ಥಾನ ಗೆಲ್ಲಲು ಸಾಧ್ಯವಿಲ್ಲ. ಅವರ ಪಕ್ಷದಲ್ಲೇ ಗೊಂದಲವಿದೆ. ಹೀಗಿರುವಾಗ ರಮೇಶ ನಮಗೆ ಬುದ್ಧಿ ಹೇಳುವ ಅವಶ್ಯಕತೆ ಇಲ್ಲ' ಎಂದು ತಿರುಗೇಟು ನೀಡಿದರು.

'ಬಿಜೆಪಿ ಬ್ಯಾನರ್‌ನಲ್ಲೇ ರಮೇಶ ಕಾರ್ಯಕ್ರಮ ನಡೆಸುತ್ತಾರೆ. ಅದೇ ವೇದಿಕೆಯಲ್ಲಿ ಪಕ್ಷೇತರ ಅಭ್ಯರ್ಥಿ (ಲಖನ್)ಗೆ ಮತ ಚಲಾಯಿಸಿ ಎನ್ನುತ್ತಾರೆ. ಮೊದಲು ಇದನ್ನು ಸರಿಪಡಿಸಿಕೊಳ್ಳಲಿ' ಎಂದು ಕುಟುಕಿದರು. 'ವಿವೇಕರಾವ್ ಪಾಟೀಲ ಮೇಲೆ ರಮೇಶ್‌ಗೆ ಅಷ್ಟೊಂದು ಪ್ರೀತಿ ಇದ್ದಿದ್ದರೆ ಅವರನ್ನೇ ಚುನಾವಣೆಗೆ ನಿಲ್ಲಿಸಬೇಕಿತ್ತು. ಹಾಗೇಕೆ ಮಾಡಲಿಲ್ಲ' ಎಂದು ಅವರು ಕೇಳಿದರು.

'ಬೆಳಗಾವಿಯಲ್ಲಿ ಬಿಜೆಪಿ ಶಾಸಕರು ಹೆಚ್ಚಿರಬಹುದು. ಆದರೆ ರಾಯಬಾಗ, ಕುಡಚಿ, ಅಥಣಿ, ನಿಪ್ಪಾಣಿ ತಾಲ್ಲೂಕಿನಲ್ಲಿ ಕಾಂಗ್ರೆಸ್ ಬೆಂಬಲಿತ ಗ್ರಾಮ ಪಂಚಾಯಿತಿ ಸದಸ್ಯರು ಹೆಚ್ಚಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುತ್ತಾರೆಂಬ ಪೂರ್ಣ ವಿಶ್ವಾಸವಿದೆ' ಎಂದರು.

ಲಖನ್ ಹಾಗೂ ಕವಟಗಿಮಠ ಇಬ್ಬರೂ ನಮ್ಮ ಎದುರಾಳಿಗಳೇ. ಅವರ ವಿರುದ್ಧವೇ ಚುನಾವಣೆ ಮಾಡುತ್ತಿದ್ದೇವೆ
ಸತೀಶ ಜಾರಕಿಹೊಳಿ
ಕೆಪಿಸಿಸಿ ಕಾರ್ಯಾಧ್ಯಕ್ಷ

ಲಖನ್ ಆಯೋಜಿಸಿದ್ದ ಸಭೆಯಲ್ಲಿ ರಮೇಶ ಜಾರಕಿಹೊಳಿ ಭಾಷಣ

ನಿಪ್ಪಾಣಿ: ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ ಶುಕ್ರವಾರ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಇಬ್ಬರೂ ಸಹೋದರರ ನಡೆ ಗೊಂದಲ ಸೃಷ್ಟಿಸಿತು. ಶಾಸಕ ರಮೇಶ ಜಾರಕಿಹೊಳಿ ಅವರು ತಮ್ಮ ಭಾಷಣದ ನಂತರ ಸಭೆಯಿಂದ ಹೊರ ನಡೆದರು. ಅವರು ಹೋದ ನಂತರ ಲಖನ್ ಸಭೆಗೆ ಬಂದರು.

'ಮಹಾಂತೇಶ ಕವಟಗಿಮಠ ಮತ್ತು ಲಖನ್ ಜಾರಕಿಹೊಳಿ ಇಬ್ಬರನ್ನೂ ಆಯ್ಕೆ ಮಾಡಬೇಕು' ಎಂದು ರಮೇಶ ಹೇಳಿದರು.

ತಾಲ್ಲೂಕಿನ ಸ್ತವನಿಧಿ ಗ್ರಾಮದ ಬ್ರಹ್ಮನಾಥ ಭವನದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಮೊದಲ ಪ್ರಾಶಸ್ತ್ಯದ ಮತ ಯಾರಿಗೆ ಹಾಕಬೇಕು ಎಂಬುದನ್ನು ಶೀಘ್ರದಲ್ಲೇ ಹೇಳುತ್ತೇನೆ. ಹೆಬ್ಬಾಳ್ಕರ ಸಹೋದರನ ಬಿಟ್ಟು ಬೇರೆ ಯಾರಿಗಾದರೂ ಕಾಂಗ್ರೆಸ್ ಟಿಕೆಟ್ ನೀಡಿದ್ದರೆ ನನ್ನ ಸಹೋದರನನ್ನು ಕಣಕ್ಕೆ ಇಳಿಸುತ್ತಿರಲಿಲ್ಲ' ಎಂದರು.

'ದೌರ್ಜನ್ಯ: ಬ್ರಿಟಿಷರನ್ನೂ ಮೀರಿಸಿದ ಬಿಜೆಪಿ ಸರ್ಕಾರ'

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಪ್ರಚಾರ: ಸಿಎಂ ಯೋಗಿ ವಿರುದ್ಧ ಅಖಿಲೇಶ್ ವಾಗ್ದಾಳಿ

ಝಾನ್ಸಿ (ಪಿಟಿಐ): ಜನರ ಮೇಲೆ ಎಸಗಿದ ದೌರ್ಜನ್ಯಗಳ ವಿಷಯದಲ್ಲಿ, ಬಿಜೆಪಿ ಸರ್ಕಾರವು ಬ್ರಿಟಿಷ್ ಆಳ್ವಿಕೆಯನ್ನೂ ಮೀರಿಸಿದೆ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ. ಬಿಜೆಪಿಯದು 'ಕೊಂದು ಆಳು'ವ ನೀತಿ ಎಂದು ಟೀಕಿಸಿದ್ದಾರೆ.

ಬುಂದೇಲಖಂಡ ಭಾಗದಲ್ಲಿ ಮೂರು ದಿನಗಳ ಪ್ರವಾಸದಲ್ಲಿರುವ ಅಖಿಲೇಶ್, 'ಸಮಾಜದ ಪ್ರತಿಯೊಂದು ವರ್ಗವೂ ಬಿಜೆಪಿ ಆಡಳಿತದಲ್ಲಿ ನಲುಗಿದೆ' ಎಂದರು.

'ಈ ಸರ್ಕಾರದ ಅಮಾನವೀಯ ವರ್ತನೆಯು ಬ್ರಿಟಿಷರನ್ನೂ ಹಿಂದಿಕ್ಕಿದೆ. ಸರ್ಕಾರದ ವಿರುದ್ಧ ನಿಂತ ರೈತರನ್ನು ವಾಹನ ಹರಿಸಿ ಸಾಯಿಸಲಾಗುತ್ತದೆ. ಆದರೆ, ಆ ಪ್ರಕರಣಕ್ಕೆ (ಲಖಿಂಪುರ ಖೇರಿ) ಸಂಬಂಧಿಸಿದಂತೆ ಇದುವರೆಗೆ ಯಾವುದೇ ನಿರ್ದಿಷ್ಟ ಕ್ರಮವನ್ನೂ ಕೈಗೊಳ್ಳುವುದಿಲ್ಲ. ಯಾರು ವಿರೋಧಿಸುತ್ತಾರೋ ಅವರನ್ನು ಜೈಲಿಗೆ ಕಳುಹಿಸಲಾಗುತ್ತದೆ. ಅವರ ನೀತಿಯೇ 'ಮಾರೋ ಔರ್ ರಾಜ್ ಕರೋ' (ಸಾಯಿಸು ಮತ್ತು ರಾಜ್ಯಭಾರ ಮಾಡು) ಎಂಬುದು' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಪಾದಿಸಿದರು.

'ಬಿಜೆಪಿ ಸರ್ಕಾರದಲ್ಲಿ ನಕಲಿ ಎನ್‌ಕೌಂಟರ್‌ಗಳ ಸಂಖ್ಯೆ ಹೆಚ್ಚಾಗಿದೆ. ಇದಕ್ಕಾಗಿ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದಿಂದ (ಎನ್‌ಎಚ್‌ಆರ್‌ಸಿ) ಅತಿ ಹೆಚ್ಚು ನೋಟಿಸ್ ಕೂಡ ಪಡೆದಿದೆ. ತಮ್ಮ ವಿರುದ್ಧದ ಪ್ರಕರಣವನ್ನು ತಾವೇ ಹಿಂದೆಗೆದುಕೊಳ್ಳುವ ಮುಖ್ಯಮಂತ್ರಿಯಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ?' ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿರುದ್ಧ ವಾಗ್ದಾಳಿ ನಡೆಸಿದರು.

ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಚುನಾವಣೆ ಹಿನ್ನೆಲೆಯಲ್ಲಿ, 'ಸಮಾಜವಾದಿ ವಿಜಯ ರಥ' ಯಾತ್ರೆಯೊಂದಿಗೆ ರಾಜ್ಯದುದ್ದಕ್ಕೂ ಅವರು ಪ್ರವಾಸ ಮಾಡುತ್ತಿದ್ದಾರೆ. ತಮ್ಮ ಯಾತ್ರೆಗೆ ಜನರಿಂದ ಪೂರ್ಣ ಬೆಂಬಲ ಸಿಗುತ್ತಿರುವುದಾಗಿ ಅವರು ಹೇಳಿದರು.

'ಬುಂದೇಲಖಂಡದ ಜನರು ಕಳೆದ ಚುನಾವಣೆಯಲ್ಲಿ ಬಿಜೆಪಿಗೆ ಪೂರ್ತಿ ಬೆಂಬಲ ನೀಡಿದ್ದರು. ಆದರೀಗ, ಆ ಪಕ್ಷದ ಗಿಮಿಕ್ ಅವರಿಗೆ ಅರ್ಥವಾಗಿದೆ. ಬಿಜೆಪಿಯನ್ನು ಬರಿಗೈಯಲ್ಲಿ ಕಳುಹಿಸಬೇಕೆಂದು ಬುಂದೇಲಖಂಡದ ಜನರು ನಿರ್ಧರಿಸಿಯಾಗಿದೆ. ಉತ್ತರ ಪ್ರದೇಶದ ಜನರು ಬಿಜೆಪಿ ಸರ್ಕಾರವನ್ನು ಕಿತ್ತೊಗೆದು, ಸಮಾಜವಾದಿ ಪಕ್ಷದ ಸರ್ಕಾರ ತರಲು ನಿರ್ಧರಿಸಿದ್ದಾರೆ ಎಂದರು' ಎಂದರು.

ಕೋವಿಡ್‌-19 ಸಾಂಕ್ರಾಮಿಕ ಹಾಗೂ ಲಾಕ್‌ಡೌನ್ ಸಂದರ್ಭದಲ್ಲಿ, ತಮ್ಮೂರಿಗೆ ಮರಳುತ್ತಿದ್ದ ಕಾರ್ಮಿಕರನ್ನು ಬ್ಯಾರಿಕೇಡ್ ಹಾಕಿ ತಡೆಯಲಾಯಿತು. ಆ ಹೊತ್ತಿನಲ್ಲಿ ಸರ್ಕಾರವು ಬಡ ಅಸಹಾಯಕರ ಕೈಬಿಟ್ಟಿತು. ಆಗ ಅವರ ನೆರವಿಗೆ ನಿಂತಿದ್ದು ತಮ್ಮ ಪಕ್ಷ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಹೇಳಿದರು.

'ಬಿಜೆಪಿ ಸರ್ಕಾರವು, ತನ್ನದೇ ಆದ ಸ್ವಂತ ಕೆಲಸವನ್ನು ಮಾಡುವ ಬದಲು, ಹಿಂದಿನ ಸರ್ಕಾರಗಳು ಮಾಡಿದ್ದ ಯೋಜನೆ ಮತ್ತು ಕೆಲಸಗಳ ಹೆಸರುಗಳನ್ನು ಬದಲಾವಣೆ ಮಾಡಿತು. ಜಗತ್ತಿನಲ್ಲೇ ಅತ್ಯಂತ ಉತ್ತಮವಾದುದು ಎನಿಸಿದ್ದ ತುರ್ತು ಸಂದರ್ಭದ (ಅಪರಾಧ) ಸಹಾಯವಾಣಿ ಸಂಖ್ಯೆಯನ್ನು 100ರ ಬದಲು 112 ಎಂದು ಬದಲಿಸಿ ಹಾಳುಗೆಡವಿತು. ವಿದ್ಯುತ್ ಶುಲ್ಕವನ್ನು ಹೆಚ್ಚಿಸುವ ಮೂಲಕ ಜನರಿಗೆ ಆಘಾತ ನೀಡಿತು' ಎಂದು ಹರಿಹಾಯ್ದರು.

'ಈ ಸರ್ಕಾರ, ಭ್ರಷ್ಟಾಚಾರ ಹಾಗೂ ಅಪರಾಧದಲ್ಲಿ ಎಲ್ಲ ದಾಖಲೆಗಳನ್ನೂ ಮುರಿದಿದೆ. ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿಇಟಿ) ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿಯು ಮುಖ್ಯಮಂತ್ರಿ ಕ್ಷೇತ್ರಕ್ಕೇ ಸೇರಿದವರಾಗಿದ್ದು, ಈ ಬಗ್ಗೆ ತನಿಖೆಯಾಗಬೇಕು' ಎಂದು ಅಖಿಲೇಶ್ ಆರೋಪಿಸಿದರು.

ಸುದ್ದಿಗೋಷ್ಠಿ ಸಂದರ್ಭದಲ್ಲಿಯೇ, ಬಿಜೆಪಿಯ ಮಾಜಿ ಶಾಸಕ ಸತೀಶ್ ಜಟಾರಿಯಾ ಮತ್ತು ಕಾಂಗ್ರೆಸ್ ಮುಖಂಡ ವಿಜಯ್ ವರ್ಮಾ ಅವರು ಸಮಾಜವಾದಿ ಪಕ್ಷಕ್ಕೆ ಸೇರ್ಪಡೆಯಾದರು.

ಆ ಬಳಿಕ, ಝಾನ್ಸಿ–ಖಾನ್‌ಪುರ ರಸ್ತೆಯ ಕೆಲವು ಹಳ್ಳಿಗಳಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದ್ದರು.

ಮಾಜಿ ಡಿಜಿಪಿ ಸೇರಿ ಹಲವರು ಬಿಜೆಪಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಪಂಜಾಬ್ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಮಾಜಿ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಸರಬ್‌ದೀಪ್ ಸಿಂಗ್ ವಿರ್ಕ್ ಸೇರಿದಂತೆ ರಾಜ್ಯದ ಹಲವಾರು ಪ್ರಮುಖರು ಶುಕ್ರವಾರ ಬಿಜೆಪಿ ಸೇರ್ಪಡೆಯಾದರು.

ಪಂಜಾಬ್ ಸಹಕಾರಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಅವತಾರ್ ಸಿಂಗ್ ಝಿರಾ, ಕೈಗಾರಿಕೋದ್ಯಮಿ ಹರ್‌ಚರಣ್ ಸಿಂಗ್ ರನೌತ್ ಮತ್ತು ಎಸ್‌ಎಡಿ ಮಾಜಿ ನಾಯಕ ಸರಬ್ಜಿತ್ ಸಿಂಗ್ ಮಕ್ಕರ್ ಬಿಜೆಪಿ ಸೇರಿದರು. ಕೇಂದ್ರ ಸಚಿವ ಹಾಗೂ ಪಂಜಾಬ್‌ನ ಬಿಜೆಪಿ ಘಟಕದ ಉಸ್ತುವಾರಿ ಗಜೇಂದ್ರ ಸಿಂಗ್ ಶೇಖಾವತ್ ಅವರು ಇವರೆಲ್ಲರನ್ನೂ ಪಕ್ಷಕ್ಕೆ ಬರಮಾಡಿಕೊಂಡರು.



ಸಮಾಜವಾದಿ ಪಕ್ಷದ ವಿಜಯ ಯಾತ್ರೆಯ ಅಂಗವಾಗಿ ಝಾನ್ಸಿಯಲ್ಲಿ ಶುಕ್ರವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷ ಅಖಿಲೇಶ್ ಯಾದವ್ ಮಾತನಾಡಿದರು ಪಿಟಿಐ ಚಿತ್ರ

'ಬಿಜೆಪಿ, ಎಸ್‌ಪಿ, ಕಾಂಗ್ರೆಸ್ ಜನರ ದಾರಿ ತಪ್ಪಿಸುತ್ತಿವೆ'

ಲಖನೌ (ಪಿಟಿಐ): ಬಿಜೆಪಿ, ಎಸ್‌ಪಿ ಮತ್ತು ಕಾಂಗ್ರೆಸ್ ಚುನಾವಣೆಗೂ ಮುನ್ನ ಸುಳ್ಳು ಭರವಸೆಗಳನ್ನು ನೀಡಿ ಉತ್ತರ ಪ್ರದೇಶದ ಜನರನ್ನು ದಾರಿ ತಪ್ಪಿಸುತ್ತಿವೆ ಎಂದು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ನಾಯಕಿ ಮಾಯಾವತಿ ಆರೋಪಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್‌ಗಳನ್ನು ಮಾಡಿರುವ ಅವರು, ಈ ಮೂರು ಪಕ್ಷಗಳ ಕುರಿತು ಎಚ್ಚರಿಕೆಯಿಂದ ಇರಲು ಜನರನ್ನು ಕೇಳಿಕೊಂಡಿದ್ದಾರೆ.

'ಉತ್ತರ ಪ್ರದೇಶದಲ್ಲಿರುವ ರಾಜಕೀಯ ಪಕ್ಷಗಳು, ವಿಶೇಷವಾಗಿ ಬಿಜೆಪಿ, ಎಸ್‌ಪಿ ಮತ್ತು ಕಾಂಗ್ರೆಸ್ ಪ್ರತಿದಿನ ಭರವಸೆಗಳ ಮಳೆಯನ್ನೇ ಸುರಿಸುತ್ತಿವೆ ಮತ್ತು ಜನರನ್ನು ತಪ್ಪು ದಾರಿಗೆ ಎಳೆಯುತ್ತಿವೆ. ಅಧಿಕಾರಕ್ಕೆ ಬಂದ ಬಳಿಕ ತಾವು ನೀಡಿದ್ದ ಭರವಸೆಗಳನ್ನು ಮರೆಯುತ್ತವೆ. ಇದು ಆ ಪಕ್ಷಗಳ ಇಲ್ಲಿಯವರೆಗಿನ ಇತಿಹಾಸವಾಗಿದೆ. ಜನರು ಎಚ್ಚರಿಕೆಯಿಂದ ಇರಬೇಕು' ಎಂದು ಟ್ವೀಟ್ ಮಾಡಿದ್ದಾರೆ.

ಬಿಜೆಪಿ ಮತ್ತು ಎಸ್‌ಪಿ ಇಲ್ಲಿ ಅಧಿಕಾರದಲ್ಲಿ ಇತ್ತು. ಈಗ ನೀಡುತ್ತಿರುವ ಆಶ್ವಾಸನೆಗಳಂತೆ ಅಧಿಕಾರದಲ್ಲಿ ಇದ್ದ ವೇಳೆ ಏಕೆ ಅವರು ನಡೆದುಕೊಳ್ಳಲಿಲ್ಲ. ಚುನಾವಣೆಯಲ್ಲಿ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳಾ ಅಭ್ಯರ್ಥಿಗಳಿಗೆ ನೀಡುವುದಾಗಿ ಮತ್ತು ಮಹಿಳೆಯರಿಗೆ ಸ್ಕೂಟಿ ಕೊಡುವುದಾಗಿ ಕಾಂಗ್ರೆಸ್ ವಾಗ್ದಾನ ಮಾಡಿದೆ. ಕಾಂಗ್ರೆಸ್ ಆಡಳಿತದಲ್ಲಿ ಇರುವ ರಾಜ್ಯಗಳಲ್ಲಿ ಏಕೆ ಈ ಕೆಲಸಗಳನ್ನು ಮಾಡಿಲ್ಲ. ಇದು ನೀವೆಲ್ಲರೂ ಯೋಚಿಸಬೇಕಾದ ವಿಷಯ ಎಂದು ಅವರು ಹೇಳಿದ್ದಾರೆ.

ಪಂಜಾಬಿ ಗಾಯಕ ಮೂಸೆವಾಲಾ ಕಾಂಗ್ರೆಸ್ ಸೇರ್ಪಡೆ

ಚಂಡೀಗಡ (ಪಿಟಿಐ): ಪಂಜಾಬಿ ಗಾಯಕ ಸಿಧು ಮೂಸೆವಾಲಾ ಅವರು ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹಾಗೂ ಪಕ್ಷದ ರಾಜ್ಯ ಮುಖ್ಯಸ್ಥ ನವಜೋತ್ ಸಿಂಗ್ ಸಿಧು ಅವರ ಸಮ್ಮುಖದಲ್ಲಿ ಶುಕ್ರವಾರ ಇಲ್ಲಿ ಕಾಂಗ್ರೆಸ್ ಪಕ್ಷ ಸೇರಿದರು.

ಮೂಸೆವಾಲಾ ಅವರನ್ನು ಯುವಜನತೆಯ ನೇತಾರ ಮತ್ತು ಅಂತರಾಷ್ಟ್ರೀಯ ವ್ಯಕ್ತಿತ್ವದವರು ಎಂದು ಬಣ್ಣಿಸಿರುವ ಚನ್ನಿ, 'ಸಿಧು ಮೂಸೆವಾಲಾ ನಮ್ಮ ಕುಟುಂಬವನ್ನು ಸೇರುತ್ತಿದ್ದಾರೆ. ನಾನು ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಸ್ವಾಗತಿಸುತ್ತೇನೆ' ಎಂದು ತಿಳಿಸಿದರು.

ಮೂಸೆವಾಲಾ ಅವರ ಮೂಲ ಹೆಸರು ಶುಭದೀಪ್ ಸಿಂಗ್ ಸಿಧು ಎಂದಾಗಿದ್ದು, ಅವರು ರಾಜ್ಯದ ಮನ್ಸಾ ಜಿಲ್ಲೆಯ ಮೂಸಾ ಗ್ರಾಮದವರಾಗಿದ್ದಾರೆ. ಅವರು ಹಿಂಸೆಯನ್ನು ಮತ್ತು ಗನ್ ಸಂಸ್ಕೃತಿಯನ್ನು ತನ್ನ ಹಾಡಿನಲ್ಲಿ ಉತ್ತೇಜಿಸಿದ್ದಕ್ಕಾಗಿ ಟೀಕೆಗಳನ್ನು ಎದುರಿಸಿದ್ದರು.

ರಾಜ್ಯ, ಕೇಂದ್ರ ಚುನಾವಣಾ ಆಯುಕ್ತರಿಗೆ ನೋಟಿಸ್

ಸೂರಜ್ ರೇವಣ್ಣ ನಾಮಪತ್ರದಲ್ಲಿ ಅಪೂರ್ಣ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸನ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಂದ ವಿಧಾನ್ ಪರಿಷತ್ ಸ್ಥಾನಕ್ಕೆ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಆರ್. ಸೂರಜ್ ಅವರ ನಾಮಪತ್ರ ಕಾನೂನು ಬಾಹಿರವಾಗಿದೆ' ಎಂದು ಆಕ್ಷೇಪಿಸಿ ಸಲ್ಲಿಸಿದ್ದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗದ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಶುಕ್ರವಾರ ಆದೇಶಿಸಿದೆ.

ಹಾಸನ ಜಿಲ್ಲೆ ದಂಡಿಗಾನ ಹೋಬಳಿಯ ಕುಂದೂರು ಗ್ರಾಮದ ಕೆ.ಎಲ್.ಹರೀಶ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ಪ್ರತಿವಾದಿಗಳಾದ ಜಿಲ್ಲಾ ಚುನಾವಣಾಧಿಕಾರಿ ಸೇರಿದಂತೆ ಮೂವರಿಗೆ ನೋಟಿಸ್ ಜಾರಿಗೊಳಿಸಿ, ಇದೇ 6ಕ್ಕೆ ವಿಚಾರಣೆ ಮುಂದೂಡಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ, 'ಆರ್.ಸೂರಜ್ ತಮ್ಮ ನಾಮಪತ್ರದೊಂದಿಗೆ ಸಲ್ಲಿಸಿರುವ ನಮೂನೆ 26ರ ಅಡಿಯಲ್ಲಿನ ಪ್ರಮಾಣಪತ್ರದಲ್ಲಿ ಅನೇಕ ಮಾಹಿತಿಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದ್ದಾರೆ. ಆದ್ದರಿಂದ, ಇವರ ನಾಮಪತ್ರ ತಿರಸ್ಕರಿಸಬೇಕು ಅಥವಾ ಆಯುಕ್ತರಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಕೋರಿದರು.

ಅರ್ಜಿಯಲ್ಲಿ ಏನಿದೆ?: 'ಸೂರಜ್ ಅವರು ಪ್ರಮಾಣಪತ್ರದಲ್ಲಿ ತಮ್ಮ ಹಾಗೂ ಕುಟುಂಬದ ಸದಸ್ಯರ ಆಸ್ತಿ ವಿವರ, ನಗದು, ಸಾಲ ಹಾಗೂ ಆರ್ಥಿಕ ವಿವರಗಳನ್ನು ಸಂಪೂರ್ಣವಾಗಿ ಬಹಿರಂಗಪಡಿಸಿಲ್ಲ. ಇವುಗಳಿಗೆ ಅನ್ವಯವಾಗುವ ಕಾಲಂಗಳಲ್ಲಿ ಇದು ಅನ್ವಯಿಸುವುದಿಲ್ಲ' ಎಂದು ಬರೆದಿದ್ದಾರೆ.

'ಸೂರಜ್ 2017ರ ಮಾರ್ಚ್ 4ರಂದು ಅರಮನೆ ಮೈದಾನದಲ್ಲಿ ಸಾಗರಿಕಾ ಅವರನ್ನು ವಿವಾಹವಾಗಿದ್ದಾರೆ. ಆದರೆ, ಪ್ರಮಾಣ ಪತ್ರದಲ್ಲಿ ಅವರು ತಮ್ಮ ಮದುವೆಯ ಕುರಿತಾದ ವಿವರಗಳನ್ನು ಮುಚ್ಚಿಟ್ಟಿದ್ದಾರೆ. ಅವರ ಆಸ್ತಿ ವಿವರಗಳನ್ನು ಘೋಷಿಸಿಲ್ಲ. ಅಂತೆಯೇ ತಮ್ಮ ಕುಟುಂಬಸ್ಥರ ಆಸ್ತಿ ವಿವರಗಳ ಬಗೆಗಾಗಲಿ ಅಥವಾ ಹೊಳೆನರಸೀಪುರದಲ್ಲಿನ ಕರ್ಣಾಟಕ ಬ್ಯಾಂಕ್ ಶಾಖೆಯಲ್ಲಿ ಹೊಂದಿರುವ ಅವರ ಖಾತೆ ಸಂಖ್ಯೆ 608ರಲ್ಲಿರುವ ₹ 15 ಲಕ್ಷದ ವಿವರ ನೀಡಿಲ್ಲ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಸಂಪುಟ ಪುನರ್ ರಚನೆ ವಿಚಾರ

'ಪ್ರಜಾವಾಣಿ' ಜತೆ ಮಾತನಾಡಿದ ಸಚಿವರೊಬ್ಬರು, 'ಸಚಿವರ ಬದಲಾವಣೆ ಸೂಚನೆಗಳು ಇಲ್ಲ. ಯತ್ನಾಳ ಅವರಿಗೆ ಹೀಗೇ ಮಾತನಾಡುವುದು ಖಯಾಲಿ ' ಎಂದರು.

ಯತ್ನಾಳ ಹೇಳಿಕೆ ಚರ್ಚೆಗೆ ಗ್ರಾಸ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿರುವ ನಿಷ್ಕ್ರಿಯ ಸಚಿವರನ್ನು ಕೈಬಿಟ್ಟು ಹೊಸಬರನ್ನು ತೆಗೆದುಕೊಳ್ಳಲಾಗುವುದು ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆ ಬಿಜೆಪಿಯಲ್ಲಿ ಚರ್ಚೆಗೆ ಕಾರಣವಾಗಿದೆ.

ಡಿ.10ರ ಬಳಿಕ ಸಂಪುಟ ಪುನರ್‌ರಚನೆ ಆಗಲಿದೆ ಎಂದು ಯತ್ನಾಳ ಸುದ್ದಿಗಾರರಿಗೆ ಗುರುವಾರ ಹೇಳಿದ್ದರು.

'ತಕ್ಷಣಕ್ಕೆ ಯಾವುದೇ ಬದಲಾವಣೆ ಆಗುವುದಿಲ್ಲ. ಜನವರಿಯ ಬಳಿಕ ಕೆಲ ಹಿರಿಯರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡುವ ಸಾಧ್ಯತೆ ಇದೆ. ಆದರೆ, ಈ ಬಗ್ಗೆ ವಿಸ್ತೃತ ಚರ್ಚೆಗಳು ಇನ್ನೂ ಆಗಿಲ್ಲ' ಎಂದು ಬಿಜೆಪಿ ಮೂಲಗಳು ಹೇಳಿವೆ.

'ಸಂಪುಟದ ಎಲ್ಲ ಸಚಿವರ ಕಾರ್ಯವೈಖರಿಯ ಬಗ್ಗೆ ವರಿಷ್ಠರು ಮಾಹಿತಿ ಪಡೆದಿದ್ದಾರೆ. ಕೆಲವು ಸಚಿವರು ವಿಧಾನಸೌಧಕ್ಕೇ ಬರುವುದಿಲ್ಲ. ಶಾಸಕರ ಮೊಬೈಲ್ ಕರೆಗಳನ್ನೂ ಸ್ವೀಕರಿಸುವುದಿಲ್ಲ. ಆದ್ದರಿಂದ ಮುಖ್ಯಮಂತ್ರಿಯವರು ಎಲ್ಲ ಶಾಸಕರ ಅಭಿಪ್ರಾಯ ಪಡೆದು ಸಂಪುಟ ಪುನರ್‌ರಚನೆ ಮಾಡುವುದು ಸೂಕ್ತ' ಎಂದು ಯತ್ನಾಳ ಸಲಹೆ ನೀಡಿದ್ದರು.

ಕೆಲವು ಸಚಿವರು ಕೆಲಸ ಬಿಟ್ಟು ಮುಖ್ಯಮಂತ್ರಿಯವರ ಬಾಲಂಗೋಚಿಯಂತೆ ಓಡಾಡಿಕೊಂಡಿರುತ್ತಾರೆ. ಮುಖ್ಯಮಂತ್ರಿ ಅವರಿಗೆ ಸ್ವತಂತ್ರವಾಗಿ ಕೆಲಸ ಮಾಡಲು ಬಿಡಬೇಕು. ಸಚಿವರ ನಿಷ್ಕ್ರಿಯತೆ ಬಗ್ಗೆ ಕ್ರಮ ಕೈಗೊಳ್ಳದೇ ಇದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗಬಹುದು ಎಂದು ಅವರು ಹೇಳಿದ್ದರು

'ಬೆಳಗಾವಿಯಲ್ಲೇ ಅಧಿವೇಶನ'

ಬೆಂಗಳೂರು: ರಾಜ್ಯದಲ್ಲಿ ಮತ್ತೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ವಿಧಾನಮಂಡಲದ ಚಳಿಗಾಲದ ಅಧಿವೇಶನವನ್ನು ಬೆಳಗಾವಿ ಬದಲು ಬೆಂಗಳೂರಿನಲ್ಲೇ ನಡೆಸಬೇಕು ಎಂಬ ಶಾಸಕರ ಒತ್ತಾಯಕ್ಕೆ ಸರ್ಕಾರ ಮಣಿದಿಲ್ಲ.

'ಬೆಳಗಾವಿಯಲ್ಲಿಯೇ ಅಧಿವೇಶನ ನಡೆಸಲಾಗುವುದು. ಅದಕ್ಕಾಗಿ ಎಲ್ಲ ರೀತಿಯ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ' ಎಂದು ಕಂದಾಯ ಸಚಿವ ಆರ್.ಅಶೋಕ ಶುಕ್ರವಾರ ಸುದ್ದಿಗಾರರಿಗೆ ಹೇಳಿದರು.

ಮತದಾನ ಬಹಿಷ್ಕಾರಕ್ಕೆ ಗ್ರಾ.ಪಂ ಸದಸ್ಯರ ನಿರ್ಧಾರ

ತೀರ್ಥಹಳ್ಳಿ: ವಾರಾಹಿ ಹಿನ್ನೀರು ಜಲವಿದ್ಯುತ್ ಯೋಜನೆಗೆ ಮುಳುಗಡೆಯಾದ ತಾಲ್ಲೂಕಿನ ಹತ್ತಾರು ಹಳ್ಳಿ ಒಳಗೊಂಡ ನಾಲೂರು ಗ್ರಾಮ ಪಂಚಾಯಿತಿಯ 7 ಸದಸ್ಯರು, ಮೇಲ್ಮನೆ ಚುನಾವಣೆಗೆ ಮತದಾನ ಬಹಿಷ್ಕರಿಸಿ ಜಿಲ್ಲಾಧಿಕಾರಿಗೆ ಪತ್ರ ರವಾನಿಸಿದ್ದಾರೆ.

ಗ್ರಾಮ ಪಂಚಾಯಿತಿಯ ಸ್ವಯಂ ಆದಾಯ ಬಾಕಿ ಉಳಿಸಿಕೊಂಡ ಸರ್ಕಾರದ ಕ್ರಮ ಸದಸ್ಯರ ಆಕ್ರೋಶಕ್ಕೆ ಕಾರಣವಾಗಿದ್ದು, ಮತದಾನ ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಓಮೈಕ್ರಾನ್: ಕೇಂದ್ರ ಆರೋಗ್ಯ ಸಚಿವಾಲಯದ ಪ್ರಶ್ನೋತ್ತರ ಬಿಡುಗಡೆ

- ‘ಓಮೈಕ್ರಾನ್‌ನ ಕೆಲವು ಸ್ಪೈಕ್ ಜೀನೋಮ್‌ಗಳು ಲಸಿಕೆಯ ಪರಿಣಾಮ ತಗ್ಗಿಸುತ್ತವೆ’
- ಹರಡುವ ವೇಗ, ರೋಗದ ತೀವ್ರತೆ ದೃಢಪಡಿಸಿಕೊಳ್ಳಲು ಕಾಯುತ್ತಿರುವ ಸರ್ಕಾರ

‘ಲಸಿಕೆ ನಿಷ್ಪ್ರಯೋಜಕ ಎಂಬುದಕ್ಕೆ ಸಾಕ್ಷ್ಯವಿಲ್ಲ’

ನವದೆಹಲಿ (ಪಿಟಿಐ, ರಾಯಿಟರ್ಸ್): ‘ಕೋವಿಡ್ ತಡೆಗಟ್ಟಲು ಈಗ ನೀಡಲಾಗುತ್ತಿರುವ ಲಸಿಕೆಗಳು ಓಮೈಕ್ರಾನ್ ರೂಪಾಂತರ ತಳಿಯ ವಿರುದ್ಧ ಕೆಲಸ ಮಾಡುವುದಿಲ್ಲ ಎಂಬುದಕ್ಕೆ ಯಾವುದೇ ಸಾಕ್ಷ್ಯವಿಲ್ಲ’ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿದೆ. ‘ಆದರೆ ಓಮೈಕ್ರಾನ್‌ನ ಕೆಲವು ಸ್ಪೈಕ್ ಜೀನೋಮ್‌ಗಳು, ಈ ಲಸಿಕೆಗಳ ಪರಿಣಾಮವನ್ನು ಕಮ್ಮಿ ಮಾಡುತ್ತವೆ ಎಂದು ಹೇಳಲಾಗುತ್ತಿದೆ’ ಎಂದೂ ಸಚಿವಾಲಯವು ಹೇಳಿದೆ.

ಓಮೈಕ್ರಾನ್ ರೂಪಾಂತರ ತಳಿಗೆ ಸಂಬಂಧಿಸಿದಂತೆ ಸಚಿವಾಲಯವು ಶುಕ್ರವಾರ ಬಿಡುಗಡೆ ಮಾಡಿರುವ ಪ್ರಶ್ನೋತ್ತರದಲ್ಲಿ ಈ ಮಾಹಿತಿ ಇದೆ. ‘ಓಮೈಕ್ರಾನ್‌ನಿಂದ ಕೋವಿಡ್ ಹರಡುವಿಕೆಯ ವೇಗ ಹೆಚ್ಚುತ್ತದೆ ಮತ್ತು ಅದು ಕೋವಿಡ್ ಪ್ರತಿರೋಧವನ್ನು ತಪ್ಪಿಸಿ, ಮನುಷ್ಯನ ದೇಹವನ್ನು ಸೇರುತ್ತದೆ ಎಂಬುದನ್ನು ದೃಢಪಡಿಸಿ ಹೇಳಲು ಯಾವುದೇ ಸಾಕ್ಷ್ಯ ಈಗ ಇಲ್ಲ. ಆದರೆ, ಇದನ್ನು ದೃಢಪಡಿಸುವ ವರದಿಗಳಿಗಾಗಿ ಕಾಯುತ್ತಿದ್ದೇವೆ’ ಎಂದು ಪ್ರಶ್ನೋತ್ತರದಲ್ಲಿ ವಿವರಿಸಲಾಗಿದೆ.

‘ದಕ್ಷಿಣ ಆಫ್ರಿಕಾ ಅಲ್ಲದೆ, ವಿಶ್ವದ ಹಲವು ದೇಶಗಳಲ್ಲಿ ಓಮೈಕ್ರಾನ್ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಅದರ ಹರಡುವಿಕೆಯ ಸ್ವರೂಪವನ್ನು ಗಮನಿಸಿದರೆ ಭಾರತವೂ ಸೇರಿದಂತೆ ವಿಶ್ವದ ಹಲವು ದೇಶಗಳಿಗೆ ಓಮೈಕ್ರಾನ್ ವ್ಯಾಪಕವಾಗಿ ಹರಡುವ ಸಾಧ್ಯತೆ ಇದೆ. ಆದರೆ ಇದು ಯಾವ ಮಟ್ಟದಲ್ಲಿ ಹರಡಬಹುದು ಮತ್ತು ಓಮೈಕ್ರಾನ್‌ನಿಂದ ಉಂಟಾಗುವ ಕೋವಿಡ್‌ನ ತೀವ್ರತೆ ಎಷ್ಟಿರುತ್ತದೆ ಎಂಬುದರ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ಇಲ್ಲ’ ಎಂದು ಸಚಿವಾಲಯವು ಹೇಳಿದೆ.

‘ದೇಶದಲ್ಲಿ ಸಾಕಷ್ಟು ಮಂದಿಗೆ ಕೋವಿಡ್ ಲಸಿಕೆ ನೀಡಲಾಗಿದೆ. ಜತೆಗೆ ಎರಡನೇ ಅಲೆಯ ವೇಳೆ ದೇಶದ ಬಹುಪಾಲು ಮಂದಿ ಸೋಂಕಿನ ಸಂಪರ್ಕಕ್ಕೆ ಬಂದಿದ್ದಾರೆ ಎಂದು ಸೆರೋ-ಸಮೀಕ್ಷೆಗಳು ಹೇಳಿವೆ. ಹೀಗಾಗಿ ಲಸಿಕೆ ಮತ್ತು ಸೋಂಕಿನ ಸಂಪರ್ಕದಿಂದ ಉಂಟಾಗಿರುವ ಪ್ರತಿಕಾಯ ಇರುವ ಕಾರಣ, ದೇಶದಲ್ಲಿ ಕೋವಿಡ್‌ನ ಮೂರನೇ ಅಲೆ ಬಂದರೂ ಅದರ ತೀವ್ರತೆ ಕಡಿಮೆ ಇರಲಿದೆ ಎಂದು ಅಂದಾಜಿಸಲಾಗಿದೆ’ ಎಂದು ಸಚಿವಾಲಯವು ಹೇಳಿದೆ.

ಪರೀಕ್ಷೆಗೆ ಒತ್ತು ಬೆಂಗಳೂರಿನಿಂದ ಚೆನ್ನೈನ ಕೇಂದ್ರೀಯ ರೈಲು ನಿಲ್ದಾಣಕ್ಕೆ ಶುಕ್ರವಾರ ಬಂದ ಪ್ರಯಾಣಿಕರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲು ಸರದಿಯಲ್ಲಿ ನಿಲ್ಲಿಸಲಾಗಿತ್ತು



ಹೊರರಾಜ್ಯಗಳ ಪ್ರಯಾಣಿಕರಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆ

‘ರಕ್ಷಣೆ ಇದ್ದೇ ಇರುತ್ತದೆ’

‘ಕೋವಿಡ್‌ನಿಂದ ಉಂಟಾದ ಪ್ರತಿಕಾಯ ಮತ್ತು ಲಸಿಕೆಯಿಂದ ಉಂಟಾದ ಪ್ರತಿಕಾಯ ಇದ್ದೇ ಇರುತ್ತದೆ. ಲಸಿಕೆಯ ಪರಿಣಾಮವನ್ನು ಈ ರೂಪಾಂತರ ತಳಿಯು ಕಡಿಮೆ ಮಾಡಿದರೂ, ಕೋವಿಡ್‌ನಿಂದ ರಕ್ಷಣೆ ಇದ್ದೇ ಇರುತ್ತದೆ’ ಎಂದು ಸಚಿವಾಲಯವು ಹೇಳಿದೆ.

‘ವಿಶ್ಲೇಷಣೆ ಅನಿವಾರ್ಯ’

‘ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ಓಮೈಕ್ರಾನ್ ಪತ್ತೆಯಾಗದೇ ಇರುವ ಸಾಧ್ಯತೆ ಇದೆ. ಹೀಗಾಗಿ ಶಂಕಿತ ಪ್ರಕರಣಗಳ ಮಾದರಿಯನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಒಳಪಡಿಸಿ, ದೃಢಪಡಿಸಿಕೊಳ್ಳಬೇಕು’ ಎಂದು ಸಚಿವಾಲಯವು ಹೇಳಿದೆ.

‘ಗಡಿಬಂದ್ ಉಪಯೋಗವಿಲ್ಲ’

‘ದೇಶಗಳು ಗಡಿಗಳನ್ನು ಬಂದ್ ಮಾಡುವುದರಿಂದ ಓಮೈಕ್ರಾನ್ ಬರುವುದನ್ನು ಕೆಲವು ಕಾಲ ತಡೆಯಬಹುದು ಅಷ್ಟೆ. ಆದರೆ ಅದನ್ನು ನಿಯಂತ್ರಿಸುವ ಕೆಲಸ ಮಾಡಲೇಬೇಕು. ಡೆಲ್ಟಾ ತಳಿಯನ್ನು ತಡೆಗಟ್ಟಲು ಅನುಸರಿಸಿದ್ದ ಕ್ರಮಗಳನ್ನೇ ಅನುಸರಿಸಿದರೆ ಸಾಕು’ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಹೆಚ್ಚು ಪ್ರಕರಣ ಇಲ್ಲ

90% ವಿಶ್ವದ ಎಲ್ಲೆಡೆ ಪ್ರತಿದಿನ ಪತ್ತೆಯಾಗುತ್ತಿರುವ ಪ್ರಕರಣಗಳಲ್ಲಿ ಡೆಲ್ಟಾ ಪ್ರಕರಣಗಳ ಪ್ರಮಾಣ

ಜೀನೋಮ್ ಸೀಕ್ವೆನ್ಸ್ ಮೂಲಕವೇ ಓಮೈಕ್ರಾನ್ ದೃಢಪಡುವ ಕಾರಣ, ಹೆಚ್ಚು ಪ್ರಕರಣಗಳು ವರದಿಯಾಗಿಲ್ಲ

10% ಆಲ್ಫಾ, ಓಮೈಕ್ರಾನ್, ಡೆಲ್ಟಾ ಪ್ಲಸ್ ಪ್ರಕರಣಗಳ ಪ್ರಮಾಣ


ಲಸಿಕೆಯು ಸೋಂಕಿನ ಹರಡುವಿಕೆ, ತೀವ್ರತೆ ತಡೆಗೆ ಸಹಕಾರಿ

‘ಓಮೈಕ್ರಾನ್ ವೈರಾಣು ಪತ್ತೆಯಾದವರಲ್ಲಿಯೂ ಲಕ್ಷಣಗಳು ಅಷ್ಟಾಗಿ ಗೋಚರಿಸುವುದಿಲ್ಲ. ಜ್ವರ, ಮೈಕೈ ನೋವು ಸೇರಿದಂತೆ ಕೆಲ ಲಕ್ಷಣಗಳು ಸೌಮ್ಯವಾಗಿ ಕಾಣಿಸಿಕೊಳ್ಳುತ್ತವೆ’

‘ಲಕ್ಷಣ ಆಧರಿಸಿ ಚಿಕಿತ್ಸೆ’

ಬೆಂಗಳೂರು: ‘ಕೊರೊನಾ ಡೆಲ್ಟಾ ತಳಿ ಸೇರಿದಂತೆ ವಿವಿಧ ತಳಿಗಳಿಗೆ ಅನುಸರಿಸುತ್ತಿರುವ ಚಿಕಿತ್ಸಾ ವಿಧಾನವನ್ನೇ, ಓಮೈಕ್ರಾನ್ ತಳಿಗೂ ಅನುಸರಿಸಲಾಗುತ್ತದೆ’ ಎಂದು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ ನಿರ್ದೇಶಕ ಡಾ.ಸಿ.ನಾಗರಾಜ್ ತಿಳಿಸಿದರು.

ಓಮೈಕ್ರಾನ್ ತಳಿಯ ವೈರಾಣು ಪತ್ತೆಯಾದವರ ಚಿಕಿತ್ಸೆಗಾಗಿ ಸಂಸ್ಥೆಯ ಕೋವಿಡ್ ವಿಂಗ್ ಆಸ್ಪತ್ರೆಯಲ್ಲಿ 200 ಹಾಸಿಗೆಗಳನ್ನು ಸಜ್ಜುಗೊಳಿಸಲಾಗುತ್ತಿದೆ. ಕಳೆದ ವರ್ಷ ಮಾರ್ಚ್‌ನಲ್ಲಿಯೂ ಕೋವಿಡ್ ಚಿಕಿತ್ಸೆಗೆ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿತ್ತು.



ಡಾ.ಸಿ. ನಾಗರಾಜ್

‘ದಕ್ಷಿಣ ಆಫ್ರಿಕಾದಲ್ಲಿ ಈ ತಳಿಯ ಪ್ರಕರಣಗಳು ಹೆಚ್ಚು ವರದಿಯಾಗಿವೆ. ಅಲ್ಲಿನ ತಜ್ಞರ ಜತೆಯೂ ಚಿಕಿತ್ಸೆ ಬಗ್ಗೆ ಚರ್ಚಿಸಲಾಗಿದೆ. ಹೊಸ ತಳಿಯ ಸೋಂಕಿತರಿಗೆ ವಿಶೇಷ ಚಿಕಿತ್ಸೆಗಳ ಅಗತ್ಯವಿರುವುದಿಲ್ಲ. ಲಕ್ಷಣಗಳನ್ನು ಆಧರಿಸಿ ಚಿಕಿತ್ಸೆ ನೀಡಲಾಗುತ್ತದೆ. ಈ ತಳಿಯ ವೈರಾಣು ವೇಗವಾಗಿ ಹರಡಲಿದೆ. ಆದರೆ, ತೀವ್ರತೆ ಕಡಿಮೆ’ ಎಂದು ಡಾ.ಸಿ. ನಾಗರಾಜ್ ವಿವರಿಸಿದರು.

‘ವೈರಾಣು ರೂಪಾಂತರಗೊಳ್ಳುವುದು ಸಾಮಾನ್ಯ. ಕೋವಿಡ್ ಎರಡನೇ ಅಲೆಗೆ ಕಾರಣವಾಗಿದ್ದ ಡೆಲ್ಟಾ ವೇಗವಾಗಿ ವ್ಯಾಪಿಸಿಕೊಂಡಿತ್ತು. ಆದರೆ, ಅದರ ತೀವ್ರತೆ ಮೊದಲ ಅಲೆಯಷ್ಟು ಇರಲಿಲ್ಲ. ಹೆಚ್ಚಿನವರು ಮನೆ ಆರೈಕೆಯಲ್ಲಿಯೇ ಚೇತರಿಸಿಕೊಂಡರು’ ಎಂದು ಹೇಳಿದರು.

‘ರಾಜ್ಯದಲ್ಲಿ ಪತ್ತೆಯಾದ ಓಮೈಕ್ರಾನ್ ಪ್ರಕರಣಗಳಲ್ಲಿ ಒಬ್ಬರಿಗೆ ಪ್ರಯಾಣದ ಇತಿಹಾಸವಿಲ್ಲ. ಹೀಗಾಗಿ, ಸಮುದಾಯದ ಹಂತದಲ್ಲಿಯೂ ಈ ತಳಿಯ ವೈರಾಣು ಅಭಿವೃದ್ಧಿಗೊಂಡಿದೆಯೇ ಎನ್ನುವುದರ ಬಗ್ಗೆ ಅಧ್ಯಯನಗಳು ನಡೆಯಬೇಕಿದೆ’ ಎಂದರು.

‘ಲಸಿಕೆಯು ಸೋಂಕಿನ ಹರಡುವಿಕೆ ಹಾಗೂ ತೀವ್ರತೆ ತಡೆಗೆ ಸಹಕಾರಿ. ಎಲ್ಲರೂ ಆದಷ್ಟು ಬೇಗ ಎರಡೂ ಡೋಸ್ ಲಸಿಕೆ ಹಾಕಿಸಿಕೊಳ್ಳಬೇಕು. ಮುಖಗವಸು ಧರಿಸುವಿಕೆ ಸೇರಿದಂತೆ ಕೋವಿಡ್ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು’ ಎಂದು ತಿಳಿಸಿದರು.

‘ಮರುಸೋಂಕು ಮೂರುಪಟ್ಟು ಹೆಚ್ಚು’

ಜಿನೀವಾ (ರಾಯಿಟರ್ಸ್): ‘ದಕ್ಷಿಣ ಆಫ್ರಿಕಾದಲ್ಲಿ ಈ ಹಿಂದೆ ಬೇರೆ ತಳಿಯ ಕೊರೊನಾ ವೈರಾಣುಗಳು ಸೋಂಕು ಹರಡಿದ್ದಕ್ಕಿಂತಲೂ ಮೂರು ಪಟ್ಟು ಹೆಚ್ಚು ತ್ವರಿತವಾಗಿ ಓಮೈ ಕ್ರಾನ್‌ನಿಂದ ಮರು ಸೋಂಕು ಹರಡುತ್ತಿದೆ’ ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮುಖ್ಯ ವಿಜ್ಞಾನಿ ಡಾ.ಸೌಮ್ಯ ಸ್ವಾಮಿನಾಥನ್ ಅವರು ಹೇಳಿದ್ದಾರೆ.

ಓಮೈಕ್ರಾನ್ ರೂಪಾಂತರ ತಳಿಗೆ ಸಂಬಂಧಿಸಿದಂತೆ ಈವರೆಗೆ ಲಭ್ಯವಿರುವ ಮಾಹಿತಿಗಳು ಮತ್ತು ನಡೆಯುತ್ತಿರುವ ಅಧ್ಯಯನಗಳ ವಿವರವನ್ನು ಅವರು ರಾಯಿಟರ್ಸ್ ಜತೆಗೆ ಹಂಚಿಕೊಂಡಿದ್ದಾರೆ.

‘ಓಮೈಕ್ರಾನ್ ಹೇಗೆ ರೂಪಾಂತರವಾಗುತ್ತದೆ, ಅದರ ಸ್ಪೈಕ್ ಪ್ರೊಟೀನ್ ಗಳು ಹೇಗೆ ವರ್ತಿಸುತ್ತವೆ ಎಂಬುದು ಇನ್ನೂ ಪತ್ತೆಯಾಗಿಲ್ಲ. ಅದನ್ನು ನಾವು ಊಹಿಸಲೂ ಸಾಧ್ಯವಿಲ್ಲ. ಅಲ್ಲದೆ, ನಾವು ಓಮೈಕ್ರಾನ್‌ನ ಸ್ಪೈಕ್ ಪ್ರೊಟೀನ್ ಹೊರತುಪಡಿಸಿ ಬೇರೆ ಆಯಾಮಗಳಲ್ಲೂ ಪರಿಶೀಲನೆ ನಡೆಸಬೇಕಾದ ಅನಿವಾರ್ಯ ಇದೆ. ಓಮೈಕ್ರಾನ್ ಕುರಿತ ಅಧ್ಯಯನಗಳು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದನ್ನು ನಿರ್ಧರಿಸಲು ಇದೇ ಸೋಮವಾರ ತಜ್ಞರ ಸಭೆ ನಡೆಸಲಾಗುತ್ತದೆ’ ಎಂದು ಅವರು ಹೇಳಿದ್ದಾರೆ.



ಗಾಬರಿಯಾಗುವ ಅಗತ್ಯವಿಲ್ಲ. ಈ ಹಿಂದೆ ಬೇರೆ ತಳಿಗಳನ್ನು ಎದುರಿಸಿದ ಅನುಭವದ ಆಧಾರದಲ್ಲೇ ಓಮೈಕ್ರಾನ್ ತಡೆಗಟ್ಟಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು

ಸೌಮ್ಯ ಸ್ವಾಮಿನಾಥನ್
ಡಬ್ಲ್ಯುಎಚ್‌ಒ ಮುಖ್ಯ ವಿಜ್ಞಾನಿ

‘ಈಗ ಕೋವಿಡ್ ತಡೆಗಟ್ಟಲು ನೀಡಲಾಗುತ್ತಿರುವ ಲಸಿಕೆಗಳು ಓಮೈಕ್ರಾನ್ ವಿರುದ್ಧ ಪರಿಣಾಮಕಾರಿಯಲ್ಲ ಎಂಬುದು ದೃಢಪಟ್ಟಿಲ್ಲ. ಅದನ್ನು ಪತ್ತೆ ಮಾಡುವ ಅಧ್ಯಯನಗಳು ನಡೆಯುತ್ತಿವೆ. ಈ ಅಧ್ಯಯನಗಳು ಪೂರ್ಣವಾಗಲು ಇನ್ನೂ ಒಂದು ಅಥವಾ ಎರಡು ವಾರ ಬೇಕಾಗಬಹುದು. ಅಲ್ಲಿಯವರೆಗೂ ನಾವು ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ’ ಎಂದು ಅವರು ವಿವರಿಸಿದ್ದಾರೆ.

‘ಈಗ ಬಳಸಲಾಗುತ್ತಿರುವ ಲಸಿಕೆಗಳನ್ನು ಮಾರ್ಪಾಡು ಮಾಡಬೇಕು ಎಂದು ಹೇಳಲು ಸಾಧ್ಯವಿಲ್ಲ, ಮಾರ್ಪಡಿಸುವ ಅವಶ್ಯಕತೆ ಇಲ್ಲ ಎಂದು ಹೇಳಲೂ ಸಾಧ್ಯವಿಲ್ಲ. ಆದರೆ ಓಮೈಕ್ರಾನ್‌ನಿಂದ ಕೋವಿಡ್ ತಗುಲಿರುವವರಲ್ಲಿ ರೋಗದ ತೀವ್ರತೆ ಅತ್ಯಂತ ಕಡಿಮೆ ಇದೆ. ಇದನ್ನು ಗಮನಿಸಿದರೆ ಓಮೈಕ್ರಾನ್ ವಿರುದ್ಧ ಈ ಲಸಿಕೆಗಳು ಸ್ವಲ್ಪಮಟ್ಟದ ರಕ್ಷಣೆ ನೀಡುತ್ತಿವೆ ಎಂಬುದು ಗೊತ್ತಾಗುತ್ತದೆ’ ಎಂದು ಡಾ.ಸೌಮ್ಯ ಸ್ವಾಮಿನಾಥನ್ ಅವರು ವಿವರಿಸಿದ್ದಾರೆ.

ಮೂಲ ಪತ್ತೆ ಕಷ್ಟ: ಸೌಮ್ಯ ಸ್ವಾಮಿನಾಥನ್

‘ಓಮೈಕ್ರಾನ್ ರೂಪಾಂತರ ತಳಿಯನ್ನು ದಕ್ಷಿಣ ಆಫ್ರಿಕಾದ ವಿಜ್ಞಾನಿಗಳು ಮೊದಲು ಪತ್ತೆ ಮಾಡಿದ್ದಾರೆ. ಅದೊಂದೇ ಕಾರಣಕ್ಕೆ ದಕ್ಷಿಣ ಆಫ್ರಿಕಾದಲ್ಲೇ ಓಮೈಕ್ರಾನ್ ವಿಕಾಸವಾಗಿದೆ ಎಂದಲ್ಲ. ಅದು ಬೇರೆ ದೇಶಗಳಲ್ಲಿ ವಿಕಾಸವಾಗಿರ ಬಹುದು. ಬಹುಶಃ ವೈರಾಣು ಸಂರಚಣೆ ವಿಶ್ಲೇಷಣೆ ಇಲ್ಲದೇ ಇರುವ ದೇಶ ಗಳಲ್ಲಿ ಇದು ವಿಕಾಸವಾಗಿರಬಹುದು. ಆದರೆ ಈಗಿನ ಪರಿಸ್ಥಿತಿ ಗಮನಿಸಿದರೆ, ಓಮೈಕ್ರಾನ್ ಮೊದಲು ವಿಕಾಸವಾಗಿದ್ದು ಎಲ್ಲಿ ಎಂಬುದು ಪತ್ತೆಯಾಗದೇ ಇರುವ ಸಾಧ್ಯತೆಯೇ ಹೆಚ್ಚು’ ಎಂದು ಸೌಮ್ಯ ಸ್ವಾಮಿನಾಥನ್ ಹೇಳಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

29,97,246▲ ಒಟ್ಟು ಸೋಂಕಿತರು (29,96,833 ನಿನ್ನೆಯ ವಿವರ)

6,896▲ ಸಕ್ರಿಯ ಪ್ರಕರಣಗಳು

29,52,101▲ ಗುಣಮುಖರಾದವರು

38,220▲ ಒಟ್ಟು ಸಾವು

ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ		
ಹೊಸ ಪ್ರಕರಣ	413	▲
ಗುಣಮುಖ	256	▲
ಸಾವು	4	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಮಡಿಕೇರಿ: 9 ವಿದ್ಯಾರ್ಥಿಗಳಿಗೆ ಕೋವಿಡ್

ಮಡಿಕೇರಿ: ನಗರದ ಭಾರತೀಯ ವಿದ್ಯಾಭವನದ 8ನೇ ತರಗತಿಯ 9 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

‘ಎರಡು ದಿನದ ಹಿಂದೆ ಇಬ್ಬರಲ್ಲಿ ಸೋಂಕು ಪತ್ತೆಯಾಗಿತ್ತು. ನಂತರ 51 ವಿದ್ಯಾರ್ಥಿಗಳ ಪರೀಕ್ಷೆ ನಡೆ ಸಿದ್ದು, 9 ವಿದ್ಯಾರ್ಥಿಗಳಿಗೆ ಸೋಂಕಿರುವುದು ಗೊತ್ತಾಯಿತು’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಮಾಹಿತಿ ನೀಡಿದ್ದಾರೆ.

ರಾಜ್ಯದಲ್ಲಿ ಏರುಗತಿ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದು ಕೊಂಡಿದ್ದು, ಶುಕ್ರವಾರ 413 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.97 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಸದ್ಯ 6,896 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾ-ರೆ. ಸೋಂಕಿತರಲ್ಲಿ 256 ಮಂದಿ ಚೇತ-ರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.52 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.05 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡ ಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.39 ರಷ್ಟು ದೃಢಪಟ್ಟಿದೆ. 7 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಬೂಸ್ಟರ್ ಡೋಸ್: ತಜ್ಞರ ಶಿಫಾರಸಿನಂತೆ ನಿರ್ಧಾರ

ನವದೆಹಲಿ (ಪಿಟಿಐ): ‘ಬೂಸ್ಟರ್ ಡೋಸ್ ನೀಡುವ ಬಗ್ಗೆ ಮತ್ತು ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಸಂಬಂಧ ತಜ್ಞರು ನೀಡಿರುವ ವೈಜ್ಞಾನಿಕ ಮಾರ್ಗಸೂಚಿಗಳ ಆಧಾರದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ.

ಲೋಕಸಭೆಯಲ್ಲಿ ಶುಕ್ರವಾರ ಓಮೈಕ್ರಾನ್ ರೂಪಾಂತರ ಕೋವಿಡ್ ತಳಿಯ ಕುರಿತು ನಡೆದ ಚರ್ಚೆಯ ವೇಳೆ ಅವರು ಈ ಮಾತು ಹೇಳಿದ್ದಾರೆ.

‘ಓಮೈಕ್ರಾನ್ ಹರಡುವುದನ್ನು ತಡೆಗಟ್ಟಲು ಕೇಂದ್ರ ಸರ್ಕಾರವು ಈಗಾಗಲೇ ಸಾಕಷ್ಟು ಕ್ರಮ ತೆಗೆದುಕೊಂಡಿದೆ. ಓಮೈಕ್ರಾನ್ ಪತ್ತೆಯಾಗಿರುವ ದೇಶಗಳಿಂದ ಬರುವ ಪ್ರಯಾಣಿಕರನ್ನು ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಈವರೆಗೆ 16,000 ವಿದೇಶಿ ಪ್ರಯಾಣಿಕರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಅವರಲ್ಲಿ 18 ಜನರಲ್ಲಿ ಕೋವಿಡ್ ಇರುವುದು ಪತ್ತೆಯಾಗಿದೆ. ಆ 18 ಜನರ ಮೂಗು ಮತ್ತು ಗಂಟಲ ದ್ರವದ ಮಾದರಿಯನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ ಕಳುಹಿಸಲಾಗಿದೆ’ ಎಂದು ಅವರು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

‘ದೇಶದಲ್ಲಿ ಕೋವಿಡ್ ಮತ್ತೆ ತೀವ್ರತೆ ಪಡೆದರೆ ಅದನ್ನು ಎದುರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಲ್ಲಾ ರಾಜ್ಯಗಳಲ್ಲಿ ಸಾಕಷ್ಟು ಸಂಖ್ಯೆಯ ಲಸಿಕೆ ಲಭ್ಯವಿದೆ. ರಾಜ್ಯಗಳ ಬಳಿ ಇನ್ನೂ 21 ಕೋಟಿ ಡೋಸ್‌ಗಳಷ್ಟು ಲಸಿಕೆ ಸಂಗ್ರಹವಿದೆ. ಈ ತಿಂಗಳ ಅಂತ್ಯದ ವೇಳೆಗೆ ಇನ್ನೂ 10 ಕೋಟಿ ಡೋಸ್ ಲಸಿಕೆ ಪೂರೈಕೆ ಮಾಡುತ್ತೇವೆ’ ಎಂದು ಅವರು ಹೇಳಿದ್ದಾರೆ.

ರಾಜಸ್ಥಾನ: 9 ಶಂಕಿತ ಪ್ರಕರಣ

ದಕ್ಷಿಣ ಆಫ್ರಿಕಾದಿಂದ ಜೈಪುರಕ್ಕೆ ವಾಪಸಾಗಿದ್ದ ಒಂದೇ ಕುಟುಂಬದ ನಾಲ್ವರಿಗೆ ಕೋವಿಡ್ ಇರುವುದು ದೃಢಪಟ್ಟಿದೆ. ಅದೇ ಕುಟುಂಬದ ಇನ್ನೂ ಐವರಿಗೆ ಕೋವಿಡ್ ತಗುಲಿದೆ. ಈ ಒಂಬತ್ತೂ ಜನರಿಗೆ ಓಮೈಕ್ರಾನ್‌ನಿಂದ ಕೋವಿಡ್ ತಗುಲಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಲು ವೈರಾಣು ಸಂರಚನೆ ವಿಶ್ಲೇಷಣೆಗೆ ಮಾದರಿಗಳನ್ನು ಕಳಿಸಲಾಗಿದೆ ಎಂದು ರಾಜಸ್ಥಾನ ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ತಮಿಳುನಾಡಿನಲ್ಲಿ ಎರಡು ಶಂಕಿತ ಪ್ರಕರಣ: ಓಮೈಕ್ರಾನ್ ಅಪಾಯವಿರುವ ದೇಶಗಳಿಂದ ತಮಿಳುನಾಡಿಗೆ ಬಂದಿದ್ದ ಇಬ್ಬರು ಪ್ರಯಾಣಿಕರಿಗೆ ಕೋವಿಡ್ ಇರುವುದು ದೃಢಪಟ್ಟಿದೆ. ಬ್ರಿಟನ್‌ನಿಂದ ಚೆನ್ನೈಗೆ ತನ್ನ ಕುಟುಂಬದ ಜತೆಗೆ ಬಂದಿದ್ದ 10 ವರ್ಷದ ಬಾಲಕಿಗೆ ಕೋವಿಡ್ ಇರುವುದು ಪತ್ತೆಯಾಗಿದೆ. ಸಿಂಗಪುರದಿಂದ ತಿರುಚಿರಾಪಲ್ಲಿ ವಿಮಾನ ನಿಲ್ದಾಣಕ್ಕೆ ಬಂದಿದ್ದ ಪ್ರಯಾಣಿಕರೊಬ್ಬರಿಗೆ ಕೋವಿಡ್ ಇರುವುದು ಪತ್ತೆಯಾಗಿದೆ. ಇಬ್ಬರ ಮೂಗು ಮತ್ತು ಗಂಟಲ ದ್ರವದ ಮಾದರಿಯನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ ಕಳುಹಿಸಲಾಗಿದೆ ಎಂದು ತಮಿಳುನಾಡು ಸರ್ಕಾರವು ಹೇಳಿದೆ.

ಓಮೈಕ್ರಾನ್ ತಡೆಗೆ ಕಠಿಣ ನಡೆ

ಒಂದನೇ ಪುಟದಿಂದ

ಕೋವಿಡ್ ಪರೀಕ್ಷಾ ಸಾಮರ್ಥ್ಯ-ವನ್ನು ಪ್ರತಿನಿತ್ಯ 60 ಸಾವಿರದಿಂದ 1 ಲಕ್ಷಕ್ಕೆ ಹೆಚ್ಚಿಸಲಾಗುವುದು ಎಂದು ತಿಳಿಸಿದರು.

3ನೇ ಅಲೆ ಬಂದರೆ ಅದನ್ನು ಎದುರಿಸಲು ಆರೋಗ್ಯ ಇಲಾಖೆ ಚಿಕಿತ್ಸಾ ಸೌಲಭ್ಯವನ್ನು ಸಿದ್ಧತೆ ಮಾಡಿಕೊಳ್ಳಬೇಕು. ಆಮ್ಲಜನಕ ಹೊಂದಿದ ಹಾಸಿಗೆಗಳು, ಆಮ್ಲಜನಕ ತಯಾರಿಕಾ ಘಟಕಗಳನ್ನು ಸಜ್ಜುಗೊಳಿಸಲು ತೀರ್ಮಾನಿಸಲಾಯಿತು. ಆಮ್ಲಜನಕದ ಲಭ್ಯತೆ, ಸಾಗಾಣಿಕೆ, ಪೂರೈಕೆ ಜಾಲ ಸಕ್ರಿಯಗೊಳಿಸಲಾಗುವುದು ಹಾಗೂ ಔಷಧಗಳ ಲಭ್ಯತೆಯನ್ನು ಖಾತರಿಪಡಿಸಲು ಸಭೆಯಲ್ಲಿ ಅಧಿ ಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಶಾಲೆಗಳಲ್ಲಿ ಸದ್ಯಕ್ಕೆ ತರಗತಿಗಳನ್ನು ಯಥಾಸ್ಥಿತಿ ಮುಂದುವರೆಸಲಾಗು-ವುದು. ಆದರೆ ಶಾಲೆಗಳಲ್ಲಿ ತೀವ್ರ ನಿಗಾವಹಿಸಲು ಸೂಚಿಸಲಾಗಿದೆ. ಕೇರಳದಿಂದ ಬಂದ ವಿದ್ಯಾರ್ಥಿಗ-ಳಿಂದ ಸಮಸ್ಯೆ ಆಗುತ್ತಿದ್ದು, ಶೈಕ್ಷಣಿಕ ಸಂಸ್ಥೆಗಳಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆ-ದುಕೊಳ್ಳಲಾಗುವುದು. ಓಮೈಕ್ರಾನ್ ಜತೆಗೆ ಈಗಾಗಲೇ ಕಂಡು ಬಂದಿರುವ ಡೆಲ್ಟಾ ವೈರಾಣು ಸೋಂಕಿನ ಕುರಿತೂ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ ಎಂದು ಅಶೋಕ ಹೇಳಿದರು.

ದಕ್ಷಿಣ ಆಫ್ರಿಕಾದಿಂದ ಬಂದ ಓಮೈಕ್ರಾನ್ ಸೋಂಕಿತ ವ್ಯಕ್ತಿಯ ಎರಡು ಪರೀಕ್ಷಾ ವರದಿಗಳಲ್ಲಿ ಭಿನ್ನತೆ ಕಂಡು ಬಂದಿರುವ ಬಗ್ಗೆ ಕೂಲಂಕಶ ತನಿಖೆ ನಡೆಸುವಂತೆ ಸಭೆಯಲ್ಲಿ ಹೈಗ್ರೌಂಡ್ಸ್ ಪೊಲೀಸರಿಗೆ ಸೂಚಿಸಲಾಯಿತು ಎಂದರು.

ಭಾರತ ಸರ್ಕಾರಕ್ಕೆ ಪತ್ರ ಬರೆದು, ರಾಷ್ಟ್ರೀಯ ಜೀವ ವಿಜ್ಞಾನ ಗಳ ಸಂಸ್ಥೆಯ(ಎನ್‌ಸಿಬಿಎಸ್) ಪ್ರಯೋಗಾಲಯ ಓಮೈಕ್ರಾನ್ ನಡೆಸಿರುವ ಅಧ್ಯಯನದ ವಿವರವಾದ ವರದಿ ಒದಗಿಸುವಂತೆಯೂ ಮನವಿ ಮಾಡಲು ತೀರ್ಮಾನಿಸಲಾಗಿದೆ. ಐಎಎಸ್ ಅಧಿಕಾರಿ ಶಿಲ್ಪಾ ನಾಗ್ ಅವರನ್ನು ಕೋವಿಡ್ ವಿಚಕ್ಷಣಾ ಅಧಿಕಾರಿಯಾಗಿ ನೇಮಿಸಲಾಗಿದೆ ಎಂದು ತಿಳಿಸಿದರು.

ತರಬೇತಿ: ‘ಮೊದಲೆರಡು ಅಲೆಯಲ್ಲಿ ಚಿಕಿತ್ಸೆ ಒದಗಿಸಲು ದಾದಿಯರ ಕೊರತೆ ಉಂಟಾಗಿತ್ತು. ಇದಕ್ಕೆ ಪರಿಹಾರ ಕಂಡುಕೊಳ್ಳಲು ಈ ಬಾರಿ ಅಂತಿಮ ವರ್ಷದ ನರ್ಸಿಂಗ್, ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳನ್ನು ಬಳಸಿಕೊಳ್ಳ ಲಾಗುವುದು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾ-ಲಯ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ 18 ಸಾವಿರ ವಿದ್ಯಾ-ರ್ಥಿಗಳಿಗೆ ಒಂದು ತಿಂಗಳ ತರಬೇತಿ ನೀಡಲಾಗುವುದು’ ಎಂದು ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

40ರ ಮೇಲಿನವರಿಗೆ ಬೂಸ್ಟರ್ ಡೋಸ್‌ಗೆ ಶಿಫಾರಸು

ಒಂದನೇ ಪುಟದಿಂದ

ಐಎನ್‌ಎಸ್‌ಎಸಿಒಜಿಯ ವಾರದ ವಾರ್ತಾಪತ್ರದಲ್ಲಿ ಈ ಶಿಫಾರಸು ಮಾಡಲಾಗಿದೆ. ಕೊರೊನಾ ವೈರಾಣುವಿನ ರೂಪಾಂತರಗಳ ಬಗ್ಗೆ ನಿಗಾ ಇರಿಸುವುದಕ್ಕಾಗಿ-ಯೇ ಐಎನ್‌ಎಸ್‌ಎಸಿಒಜಿಯನ್ನು ರಚಿಸಲಾಗಿದೆ.



‘ಈವರೆಗೆ ಲಸಿಕೆ ಹಾಕಿ-ಸಿಕೊಂಡಿಲ್ಲದ, ಸೋಂಕು ತಗಲುವ ಅಪಾಯ ಹೆಚ್ಚು ಇರುವ ಎಲ್ಲರಿಗೂ ತಕ್ಷಣವೇ ಲಸಿಕೆ ಹಾಕಿಸಬೇಕು. 40 ವರ್ಷಕ್ಕಿಂತ ಹೆಚ್ಚು ವಯಸ್ಸಾದವರಿಗೆ ಬೂಸ್ಟರ್ ಡೋಸ್ ಹಾಕಿಸುವ ಬಗ್ಗೆ ಪರಿಶೀಲನೆ ನಡೆಸಬೇಕು’ ಎಂದು ಎನ್‌ಎಸ್‌ಎಸಿಒಜಿ ಹೇಳಿದೆ.

ಸಾಂಕ್ರಾಮಿಕ ಸ್ಥಿತಿಯ ಬಗ್ಗೆ ಲೋಕಸಭೆಯಲ್ಲಿ ನಡೆದ ಚರ್ಚೆಯ ವೇಳೆಯಲ್ಲಿಯೂ ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ನೀಡಬೇಕು ಎಂಬ ಬೇಡಿಕೆ ಕೇಳಿ ಬಂದಿತ್ತು.

ಅದರ ಮಧ್ಯದಲ್ಲಿಯೇ, ಐಎನ್‌ಎಸ್‌ಎಸಿಒಜಿ ಕೂಡ ಈ ಶಿಫಾರಸು ಮಾಡಿದೆ. ಓಮೈಕ್ರಾನ್ ಪ್ರಕರಣಗಳು ದೃಢಪಟ್ಟ ಪ್ರದೇಶಗಳಿಗೆ ಹೋದವರು ಮತ್ತು ಅಲ್ಲಿಂದ ಬಂದವರ ಮೇಲೆ ನಿಗಾ ಇರಿಸಬೇಕು. ಸೋಂಕು ದೃಢಪಟ್ಟವರ ಸಂಪರ್ಕಿ-ತರನ್ನು ಗುರುತಿಸಬೇಕು ಎಂದೂ ಶಿಫಾರಸಿನಲ್ಲಿ ಹೇಳಲಾಗಿದೆ.

35 ದೇಶಗಳಿಗೆ ಹರಡಿದ ಓಮೈಕ್ರಾನ್

ಒಂದನೇ ಪುಟದಿಂದ

ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಮೂವರು ವಿದ್ಯಾರ್ಥಿಗಳಲ್ಲಿ ಶುಕ್ರವಾರ ಓಮೈಕ್ರಾನ್ ಸೋಂಕು ಪತ್ತೆ ಆಗಿದೆ. ವಿದೇಶಿಯರು ದೇಶ ಪ್ರವೇಶಿಸುವುದಕ್ಕೆ ಆಸ್ಟ್ರೇಲಿಯಾ ನಿಷೇಧ ಹೇರಿದೆ. ದಕ್ಷಿಣ ಆಫ್ರಿಕಾದಿಂದ ಬರುವ ವಿಮಾನಗಳನ್ನು ನಿಷೇಧಿಸಲಾಗಿದೆ. ಹಾಗಿದ್ದರೂ ಆಸ್ಟ್ರೇಲಿಯಾದಲ್ಲಿ ಪ್ರಕರಣಗಳು ದೃಢಪಟ್ಟಿವೆ.

ಸಿಂಗಪುರದಲ್ಲಿ ಎರಡು ಪ್ರಕರಣಗಳು ಪತ್ತೆಯಾದ ಮರುದಿನವೇ, ಸಮೀಪದ ಮಲೇಷ್ಯಾದಲ್ಲಿ ಶುಕ್ರವಾರ ಒಂದು ಪ್ರಕರಣ ವರದಿಯಾಗಿದೆ. ದಕ್ಷಿಣ ಆಫ್ರಿಕಾದಿಂದ ವಿದ್ಯಾರ್ಥಿಯಲ್ಲಿ ಸೋಂಕು ಪತ್ತೆಯಾಗಿದೆ. ಶ್ರೀಲಂಕಾದಲ್ಲಿ ಒಂದು ಪ್ರಕರಣ ದೃಢಪಟ್ಟಿದ್ದು, ಸೋಂಕಿತ ವ್ಯಕ್ತಿಯು ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದವರು.

ಹವಾಲಾ ದಂಧೆ; 185 ಖಾತೆ, ₹ 31.50 ಕೋಟಿ ಅಕ್ರಮ ವರ್ಗ

ಬೆಂಗಳೂರು: ರಾಜ್ಯದಲ್ಲಿ ಸಕ್ರಿಯವಾಗಿದ್ದ ಹವಾಲಾ ದಂಧೆ ಜಾಲವನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಭೇದಿಸಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ಜಾಲ, ಇದುವರೆಗೂ ₹ 31.50 ಕೋಟಿ ಮೊತ್ತವನ್ನು ಅಕ್ರಮ ವರ್ಗಾವಣೆ ಮಾಡಿರುವುದನ್ನು ಪತ್ತೆ ಮಾಡಿದ್ದಾರೆ.

‘ಕೇರಳದ ಮೊಹಮ್ಮದ್ ಸಾಹಿಲ್, ಫೈಸಲ್, ಫಜಲ್ ಹಾಗೂ ಅಬ್ದುಲ್ ಮನಾಸ್ ಬಂಧಿತರು. ತಮ್ಮದೇ ಜಾಲ ರೂಪಿಸಿಕೊಂಡಿದ್ದ ಆರೋಪಿಗಳು, ಹಣದ ಅಕ್ರಮ ವರ್ಗಾವಣೆಯಲ್ಲಿ ತೊಡಗಿದ್ದರು. ಜಾಲದ ಪ್ರಮುಖ ರೂವಾರಿ ತಲೆಮರೆಸಿಕೊಂಡಿದ್ದು, ಪತ್ತೆಕಾರ್ಯ ಮುಂದುವರಿದಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ರಾಜ್ಯದ 25 ಬ್ಯಾಂಕ್‌ಗಳ 2,656 ಗ್ರಾಹಕರ ಖಾತೆಗಳನ್ನು ಆರೋಪಿಗಳು ಅಕ್ರಮಕ್ಕೆ ಬಳಸಿಕೊಂ-ಡಿದ್ದರು. ಈ ಪೈಕಿ 185 ಖಾತೆಗಳ ವಹಿವಾಟಿನ ವಿವರ ಮಾತ್ರ ಲಭ್ಯವಾಗಿದ್ದು, ₹ 31.50 ಕೋಟಿ ಹಣ ವರ್ಗಾವಣೆ ಆಗಿರುವುದು ಗೊತ್ತಾಗಿದೆ. ಉಳಿದ ಖಾತೆಗಳ ವಿವರ ಸಂಗ್ರಹಕ್ಕಾಗಿ ಬ್ಯಾಂಕ್ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ’ ಎಂದೂ ತಿಳಿಸಿದರು.

‘ಆರೋಪಿಗಳ ವಾಸಸ್ಥಳ, ಕಚೇರಿಗಳ ಮೇಲೂ ದಾಳಿ ಮಾಡಲಾಗಿದೆ. ₹ 20.15 ಲಕ್ಷ ನಗದು, ನೋಟು ಎಣಿಸುವ ಯಂತ್ರ ಪತ್ತೆ ಆಗಿದೆ. ಹಣ ವರ್ಗಾವಣೆ ಮಾಡಿದ್ದ ಬಗ್ಗೆ ದಾಖಲೆಗಳು ಸಿಕ್ಕಿವೆ. ಎಲ್ಲವನ್ನೂ ಪರಿಶೀಲನೆ ನಡೆಸಲಾಗುತ್ತಿದೆ’ ಎಂದೂ ಹೇಳಿದರು.

‘ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿದ್ದ ಕೆಲ ಉದ್ಯಮಿಗಳು, ಕಪ್ಪು ಹಣವನ್ನು ಆರೋಪಿಗಳಿಗೆ ಕೊಡುತ್ತಿದ್ದರು. ಅದೇ ಹಣವನ್ನು ಆರೋಪಿಗಳು ಅಕ್ರಮವಾಗಿ ವಿವಿಧ ಖಾತೆಗಳಿಗೆ ವರ್ಗಾವಣೆ ಮಾಡುತ್ತಿದ್ದರು. ಪ್ರತಿಯೊಬ್ಬ ಆರೋಪಿಯು ತಲಾ ₹ 60,000 ಕಮಿಷನ್ ಪಡೆಯುತ್ತಿದ್ದರು’ ಎಂದೂ ಪೊಲೀಸ್ ಅಧಿಕಾರಿ ವಿವರಿಸಿದರು.

ಮಚ್ಚು ಸಮೇತ ಸಿಕ್ಕಿಬಿದ್ದಿದ್ದ: ‘ಜೆ.ಪಿ. ನಗರದ 6ನೇ ಹಂತದ ಜರಗನ ಹಳ್ಳಿಯ 16ನೇ ಅಡ್ಡರಸ್ತೆ ಯಲ್ಲಿ ಆರೋಪಿ ಮೊಹಮ್ಮದ್ ಸಾಹಿಲ್ ಅನುಮಾನಾಸ್ಪದವಾಗಿ ಸುತ್ತಾಡು ತ್ತಿದ್ದ. ಆತನನ್ನು ಗಮನಿಸಿದ್ದ ಸ್ಥಳೀಯ ರೊಬ್ಬರು, ಏನು ಮಾಡುತ್ತಿದ್ದಿಯಾ ಎಂದು ಪ್ರಶ್ನಿಸಿದ್ದರು. ಅವರ ಕೈಗೆ ಆರೋಪಿ ಹಣದ ಕಂತೆಗಳನ್ನು ನೀಡಲು ಮುಂದಾಗಿದ್ದ’ ಎಂದು ಮೂಲ ಗಳು ಹೇಳಿವೆ.

‘ಆರೋಪಿ ಬಗ್ಗೆ ಅನುಮಾನಗೊಂಡ ಸ್ಥಳೀಯರು, ಆತನನ್ನು ಹಿಡಿಯಲು ಮುಂದಾಗಿದ್ದರು. ತಪ್ಪಿಸಿಕೊಳ್ಳಲು ಯತ್ನಿಸಿದ್ದ ಆತ, ಬ್ಯಾಗ್‌ನಿಂದ ಮಚ್ಚು ಹೊರಗೆ ತೆಗೆದು ಕೊಲೆ ಬೆದರಿಕೆಯೊಡ್ಡಿದ್ದ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋದ ಹೊಯ್ಸಳ ಸಿಬ್ಬಂದಿ, ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಿಸಿದ್ದರು. ಆತನೇ ಹಣ ಅಕ್ರಮ ವರ್ಗಾವಣೆ ಬಗ್ಗೆ ಬಾಯ್ಬಿಟ್ಟಿದ್ದ. ಆತನ ಬಳಿ ₹ 1 ಲಕ್ಷ ನಗದು ಪತ್ತೆಯಾಗಿತ್ತು. ಅದಕ್ಕೆ ದಾಖಲೆ ಇರಲಿಲ್ಲ’ ಎಂದೂ ತಿಳಿಸಿವೆ.

ಸಿಬಿಐ, ಇ.ಡಿ ನಿರ್ದೇಶಕರ ಅವಧಿ ವಿಸ್ತರಣೆ: ಮಸೂದೆ ಮಂಡನೆ

ನವದೆಹಲಿ (ಪಿಟಿಐ): ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ನಿರ್ದೇಶಕರ ಅಧಿಕಾರಾವಧಿಯನ್ನು ಎರಡು ವರ್ಷಗಳಿಂದ ಗರಿಷ್ಠ ಐದು ವರ್ಷಗಳವರೆಗೆ ವಿಸ್ತರಿಸುವ ಎರಡು ಮಸೂದೆಗಳನ್ನು ಕೇಂದ್ರ ಸರ್ಕಾರವು ವಿರೋಧ ಪಕ್ಷಗಳ ಸದಸ್ಯರ ವಿರೋಧದ ನಡುವೆಯೂ ಲೋಕಸಭೆಯಲ್ಲಿ ಶುಕ್ರವಾರ ಮಂಡಿಸಿತು.

ಕೇಂದ್ರೀಯ ಜಾಗೃತ ಆಯೋಗ (ತಿದ್ದುಪಡಿ) ಮಸೂದೆ ಮತ್ತು ದೆಹಲಿ ವಿಶೇಷ ಪೊಲೀಸ್ ಸ್ಥಾಪನೆ (ತಿದ್ದುಪಡಿ) ಮಸೂದೆಯನ್ನು ಕೇಂದ್ರ ಸಿಬ್ಬಂದಿ ಖಾತೆಯ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಯಲ್ಲಿ ಮಂಡಿಸಿದರು.

ಸಿಬಿಐ ಮತ್ತು ಇ.ಡಿ ನಿರ್ದೇಶಕರ ಹುದ್ದೆಯ ಅಧಿಕಾರದ ಅವಧಿಯನ್ನು ಐದು ವರ್ಷಗಳಿಗೆ ಹೆಚ್ಚಿಸಿ ಸರ್ಕಾರ ಕಳೆದ ತಿಂಗಳು ಸುಗ್ರೀವಾಜ್ಞೆ ಹೊರಡಿಸಿದೆ.

‘ಎನ್‌ಎಸ್‌ಒ ನಿಷೇಧದ ಪ್ರಸ್ತಾವ ಇಲ್ಲ’

‘ಎನ್‌ಎಸ್‌ಒ ಗ್ರೂಪ್’ ಹೆಸರಿನ ಯಾವುದೇ ಕಂಪನಿಯನ್ನು ನಿಷೇಧಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಪೆಗಾಸಸ್ ಗೂಢಚಾರಿಕೆ ತಂತ್ರಾಂಶ ಪೂರೈಸಿದ್ದಕ್ಕಾಗಿ ಇಸ್ರೇಲ್‌ನ ಈ ಕಂಪನಿಯನ್ನು ಅಮೆರಿಕ ಕಪ್ಪು ಪಟ್ಟಿಗೆ ಸೇರಿಸಿದೆಯೇ ಎಂಬ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ ಎಂದು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ರಾಜ್ಯಸಭೆಗೆ ಲಿಖಿತ ಮಾಹಿತಿಯಲ್ಲಿ ತಿಳಿಸಿದ್ದಾರೆ.

ಇಸ್ರೇಲ್‌ನ ಪೆಗಾಸಸ್ ಕುತಂತ್ರಾಂಶವನ್ನು ಭಾರತದ ಗಣ್ಯರ ವಿರುದ್ಧ ಗೂಢಚಾರಿಕೆಗೆ ಬಳಸಲಾಗಿದೆ ಎಂಬ ಆರೋಪ ಇದೆ.

ಕಟ್ಟಡ ದಾಖಲಾತಿ: ರುಪ್ಸ ಆಕ್ಷೇಪ

ಬೆಂಗಳೂರು: ಶಾಲೆಗಳ ಮಾನ್ಯತೆ ನವೀಕರಣಕ್ಕಾಗಿ ಕೈಗೊಂಡಿರುವ ಆನ್‌ಲೈನ್ ಪ್ರಕ್ರಿಯೆ ಸಂದರ್ಭದಲ್ಲಿ ತಕ್ಷಣಕ್ಕೆ ವಿವಿಧ ಪ್ರಮಾಣಪತ್ರಗಳನ್ನು ಒದಗಿಸಬೇಕು ಎಂದು ಶಿಕ್ಷಣ ಇಲಾಖೆ ನೀಡಿರುವ ಆದೇಶಕ್ಕೆ ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ರುಪ್ಸ) ಆಕ್ಷೇಪ ವ್ಯಕ್ತಪಡಿಸಿದೆ.

ಈ ಬಗ್ಗೆ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿರುವ ರುಪ್ಸ, ದಾಖಲೆಗಳ ಸಲ್ಲಿಕೆಗೆ ಕನಿಷ್ಠ ಐದು ವರ್ಷಗಳ ಕಾಲಾವಕಾಶ ನೀಡಬೇಕು ಎಂದು ಕೋರಿಕೆ ಸಲ್ಲಿಸಿದೆ.

ಅಧಿಕಾರಿಗಳ ಕಿರುಕುಳ ಮತ್ತು ಭ್ರಷ್ಟಾಚಾರಕ್ಕೆ ಕಾರಣವಾಗಿದ್ದ ಶಾಲೆ ಗಳ ಮಾನ್ಯತೆ ನವೀಕರಣ ಪ್ರಕ್ರಿಯೆಯ-ನ್ನು ಸರಳಗೊಳಿಸಿ ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಿದ್ದು ಮಹತ್ವದ ಹೆಜ್ಜೆ ಯಾಗಿದೆ. 2009ರಿಂದಲೂ ನವೀಕರಣ ಪ್ರಕ್ರಿಯೆ ಖಾಸಗಿ ಶಾಲೆಗಳಿಗೆ ದೊಡ್ಡ ಸಮಸ್ಯೆಯಾಗಿತ್ತು ಎಂದು ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಮನವಿಯಲ್ಲಿ ತಿಳಿಸಿದ್ದಾರೆ.

ಆದರೆ, ಇಲಾಖೆಯ ಕೆಲವು ಆದೇಶಗಳು ಆಕ್ಷೇಪಾರ್ಹವಾಗಿವೆ. ಕಟ್ಟಡ ಸುರಕ್ಷತೆ, ಅಗ್ನಿ ಅವಘಡದ ಸುರಕ್ಷತೆಯ ಪ್ರಮಾಣಪತ್ರ, ಭೂಪರಿವರ್ತನಾ ದಾಖಲಾತಿಗಳನ್ನು ತಕ್ಷಣಕ್ಕೆ ಒದಗಿಸಬೇಕು ಎಂದು ಸೂಚಿಸಲಾಗಿದೆ. ಈ ರೀತಿಯ ಆದೇಶ ಅವೈಜ್ಞಾನಿಕವಾಗಿ-ದೆ ಎಂದು ದೂರಿದ್ದಾರೆ.

ಕಟ್ಟಡ ಸುರಕ್ಷತೆ ವಿಚಾರದಲ್ಲಿ ಲೋಕೋಪಯೋಗಿ ಇಲಾಖೆ ಕಳೆದ ವಾರ ಹೊರಡಿಸಿರುವ ಸುತ್ತೋಲೆಯಲ್ಲಿ ಎಲ್ಲ ದಾಖಲಾತಿಗಳನ್ನು ಒದಗಿಸಲು ಕೆಲವು ವರ್ಷಗಳೇ ಬೇಕಾಗಬಹುದು. ಬಹುತೇಕ ಖಾಸಗಿ ಶಾಲಾ ಕಟ್ಟಡಗಳು ನಿರ್ಮಾಣಗೊಂಡು ಕೆಲವು ದಶಕಗಳಾಗಿವೆ. ಈಗ ಆ ಕಟ್ಟಡಗಳ ಮಣ್ಣು ಪರೀಕ್ಷೆ ವರದಿ, ಕಟ್ಟಡದ ನೀಲನಕಾಶೆ, ಕಟ್ಟಡ ರಚನೆ ನಕಾಶೆ, ಅನುಮತಿ ಪ್ರಮಾಣಪತ್ರ, ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ, ಕಟ್ಟಡ ಪ್ರವೇಶಕ್ಕೆ ಅನುಮತಿ ಪತ್ರ ಇತ್ಯಾದಿ ದಾಖಲಾತಿಗಳನ್ನು ತಕ್ಷಣಕ್ಕೆ ಒದಗಿಸಲು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ಕೋವಿಡ್ ಪರಿಹಾರ: ವಯಸ್ಸಿನ ನಿಬಂಧನೆ ಇಲ್ಲ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ಬಿಪಿಎಲ್ ಕುಟುಂಬಗಳಿಗೆ ತಲಾ ₹1 ಲಕ್ಷ ಪರಿಹಾರ ನೀಡುವ ಆದೇಶವನ್ನು ಮಾರ್ಪಾಡು ಮಾಡಲಾಗಿದ್ದು, ‘ಮೃತ ವ್ಯಕ್ತಿಯು ಕುಟುಂಬದ ದುಡಿಯುವ ಸದಸ್ಯನಾಗಿರಬೇಕು’ ಎಂಬ ಪದವನ್ನು ತೆಗೆದು ‘ಬಿಪಿಎಲ್ ಕುಟುಂಬದ ಸದಸ್ಯನಾಗಿದ್ದರೆ ಸಾಕು’ ಎಂದು ಸೇರಿಸಲಾಗಿದೆ.

ಈ ಹಿಂದಿನ ಆದೇಶದಲ್ಲಿ ‘ಬಿಪಿಎಲ್ ಕುಟುಂಬದ ದುಡಿಯುವ ಸದಸ್ಯನಾಗಿರಬೇಕು’ ಎಂದು ಷರತ್ತು ವಿಧಿಸಲಾಗಿತ್ತು. ಹೊಸ ಆದೇಶದಲ್ಲಿ ‘ಮೃತ ವ್ಯಕ್ತಿಯು ಬಿಪಿಎಲ್ ಕುಟುಂಬದ ಸದಸ್ಯನಾಗಿರಬೇಕು ಮತ್ತು ವಯಸ್ಸಿನ ನಿಬಂಧನೆ ಇಲ್ಲದೇ ಕೋವಿಡ್ ಸೋಂಕಿನಿಂದ ಕುಟುಂಬದ ಸದಸ್ಯರನ್ನು ಕಳೆದುಕೊಂಡ ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಕುಟುಂಬಗಳ ಅರ್ಹ ಕಾನೂನು ಬದ್ಧ ವಾರಸುದಾರರಿಗೆ ₹ 1 ಲಕ್ಷ ಆರ್ಥಿಕ ನೆರವು ನೀಡಲಾಗುವುದು’ ಎಂದು ಕಂದಾಯ ಇಲಾಖೆ ತಿಳಿಸಿದೆ.

ಕರ್ನಾಟಕದಲ್ಲಿ 40.32 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ನೀರಾವರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿರುವ 1.28 ಕೋಟಿ ಹೆಕ್ಟೇರ್ ಕೃಷಿ ಭೂಮಿಯ ಪೈಕಿ 40.32 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ನೀರಾವರಿ ವ್ಯವಸ್ಥೆ ಇದೆ ಎಂದು ಶುಕ್ರವಾರ ರಾಜ್ಯಸಭೆಗೆ ತಿಳಿಸಲಾಗಿದೆ.

ಬಿಜೆಪಿಯ ಕೆ.ಸಿ.ರಾಮಮೂರ್ತಿ ಅವರಿಗೆ ಲಿಖಿತ ಉತ್ತರ ನೀಡಿದ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ದೇಶದಲ್ಲಿರುವ 18.09 ಕೋಟಿ ಹೆಕ್ಟೇರ್ ಕೃಷಿ ಭೂಮಿಯ ಪೈಕಿ 7.15 ಕೋಟಿ ಹೆಕ್ಟೇರ್‌ಗೆ ಮಾತ್ರ ನೀರಾವರಿ ಸೌಲಭ್ಯ ಇದೆ ಎಂದು ಹೇಳಿದ್ದಾರೆ.

ಕೃಷಿ ರಾಜ್ಯ ಪಟ್ಟಿಯಲ್ಲಿರುವುದ-ರಿಂದ ನೀರಾವರಿ ಮತ್ತು ಜಲಸಂಪ-ನ್ಮೂಲಕ್ಕೆ ಸಂಬಂಧಿಸಿದ ಕೆಲಸಗಳನ್ನು ರಾಜ್ಯ ಸರ್ಕಾರಗಳೇ ತಮ್ಮ ಸಂಪನ್ಮೂಲ ಬಳಸಿ ಮಾಡುತ್ತಿವೆ ಎಂದು ಸಚಿವರು ತಿಳಿಸಿದ್ದಾರೆ.



ಜಲಸಂಪನ್ಮೂಲಗಳ ದಕ್ಷ ನಿರ್ವಹಣೆಗಾಗಿ ಕೇಂದ್ರವು ತಾಂತ್ರಿಕ ಮತ್ತು ಹಣಕಾಸಿನ ನೆರವು ನೀಡುತ್ತಿದೆ. ಪ್ರಧಾನಮಂತ್ರಿ ಕೃಷಿ ಸಂಚಾಯಿ ಯೋಜನೆ (ಪಿಎಂಕೆಎಸ್‌ವೈ) ಇಂತಹ ಯೋಜನೆಗಳಲ್ಲಿ ಒಂದು. ಕರ್ನಾಟಕಕ್ಕೆ ಈ ಯೋಜನೆ ಅಡಿಯಲ್ಲಿ 2015–16 ಮತ್ತು 2020–21ರ ನಡುವೆ ₹ 2,000.15 ಕೋಟಿ ಬಿಡುಗಡೆ ಮಾಡಲಾಗಿದೆ. 2021–22ರಲ್ಲಿ ₹ 300 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಬೋಯಿಂಗ್, ಏರ್‌ಬಸ್ ಜೊತೆ ಜೆಟ್ ಏರ್‌ವೇಸ್ ಮಾತುಕತೆ




ಮುಂಬೈ (ಪಿಟಿಐ): ಮುಂದಿನ ವರ್ಷದಲ್ಲಿ ವಿಮಾನಯಾನ ಸೇವೆಗಳನ್ನು ಮತ್ತೆ ಆರಂಭಿಸುವ ಉದ್ದೇಶ ಹೊಂದಿರುವ ಜೆಟ್ ಏರ್‌ವೇಸ್ ಕಂಪನಿಯು ವಿಮಾನಗಳನ್ನು ಖರೀದಿಸಲು ಮತ್ತು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲು ಬೋಯಿಂಗ್ ಹಾಗೂ ಏರ್‌ಬಸ್ ಕಂಪನಿಗಳ ಜೊತೆ ಮಾತುಕತೆ ನಡೆಸಿರುವುದಾಗಿ ತಿಳಿಸಿದೆ.

ಹಣಕಾಸಿನ ಬಿಕ್ಕಟ್ಟಿನ ಕಾರಣದಿಂದಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಈ ಕಂಪನಿಯನ್ನು ಈಗ ಮುರಾರಿಲಾಲ್ ಜಲನ್ ಮತ್ತು ಕಲ್‌ರಾಕ್ ಕ್ಯಾಪಿಟಲ್ ಒಕ್ಕೂಟವು ಖರೀದಿಸಿದೆ. ಈಗ ನಡೆದಿರುವ ಮಾತುಕತೆಗಳು ಕಂಪನಿಯ ಪುನಶ್ಚೇತನಕ್ಕೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಮುಂಬೈ ಪೀಠ ಅನುಮೋದನೆ ನೀಡಿರುವ ಕಾರ್ಯಯೋಜನೆಯ ಭಾಗ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಸರಿಸುಮಾರು 200 ವಿಮಾನಗಳನ್ನು ಹೊಂದಲು ಒಕ್ಕೂಟವು ಏರ್‌ಬಸ್ ಮತ್ತು ಬೋಯಿಂಗ್ ಜೊತೆ ಮಾತುಕತೆ ನಡೆಸಿದೆ ಎಂದು ವರದಿಯಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,401
ಇಂದಿನ ಅಂತ್ಯ	17,196
▼	204
ದಿನದ ಗರಿಷ್ಠ	17,489

ವಿನಿಮಯ ದರ

$ ಡಾಲರ್	75.12
£ ಪೌಂಡ್	99.69
€ ಯುರೊ	84.8
¥ ಯೆನ್ (100ಕ್ಕೆ)	66.14

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹470
12 ಮೊಟ್ಟೆಗೆ	₹65

ಮೈಸೂರು

100 ಮೊಟ್ಟೆಗೆ	₹472

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1315 (1310)
ಸೋಯಾ (ರಿಫೈನ್ಡ್)	₹1215(1215)
ಸೂರ್ಯಕಾಂತಿ (ರಿಫೈನ್ಡ್)	₹1260 (1260)
ಪಾಮೋಲಿನ್	₹1178 (1172)

ಮುಂಬೈ ಧಾರಣೆ

ಶೇಂಗಾ

3-12-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	-
ದಪ್ಪ ಗುಜರಾತ್(ಹೊಸ)	-

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1325 (1320)
ಒಂದು ವಾರದ ಡೆಲಿವರಿ	1320 (1315)
ಸೋಯಾ ಕಚ್ಚಾ	1155 (1150)
ಪಾಮ್ ವಾರದ ಡೆಲಿವರಿ	1176 (1170)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,300 (47,300)
ಬೆಳ್ಳಿ ಕೆ.ಜಿ
60,900 (60,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 500- 550
ನಡುಗೋಲು 600-650
ರಾಶಿ 700-800
ರಾಶಿ ಉತ್ತಮ 800-900
ಜರಡಿ 1000 -1050
ಹೆರಕಿದ್ದು 1200-1300
ಹಸಿರು ಸಾಧಾರಣ 750-850
ಹಸಿರು ಉತ್ತಮ 900-1000
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು - 505
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-43500
ಹಳತು 46000-52500
ಭದ್ರಾವತಿ
ರಾಶಿ 45099-46999
ಚಿತ್ರದುರ್ಗ
ಆಪಿ 46319-46729
ಬೆಟ್ಟೆ 39849-40269
ಕೆಂಪುಗೋಟು 30609-31010
ರಾಶಿ 45839-46289
ಹೊನ್ನಾಳಿ
ರಾಶಿ 46299-46499
ಹೊಸನಗರ
ಬಿಳಿಗೋಟು 28799-28799
ಚಾಲಿ 43599-43599
ಕೆಂಪುಗೋಟು 36329-39999
ರಾಶಿ 44799-47709
ಕಾರ್ಕಳ
ಹೊಸತು 38000-43500
ಹಳತು 45000-51500
ಕುಮಟಾ
ಚಿಪ್ಪು 25509-40999
ಕೋಕ 21019-35559
ಫ್ಯಾಕ್ಟರಿ 21019-35559
ಹಳೆಚಾಲಿ 47509-49599
ಹೊಸಚಾಲಿ 37019-41299
ಪುತ್ತೂರುಹೊಸತು
27500-43500
ಮಂಗಳೂರು
ಕೋಕ 27000-32000
ಶಿವಮೊಗ್ಗ
ಬೆಟ್ಟೆ 47609-53589
ಗೊರಬಲು 17045-39069
ರಾಶಿ 44289-47019
ಸರಕು 50059-76696
ಸಿದ್ದಾಪುರ
ಬಿಳಿಗೋಟು 31799-42089
ಚಾಲಿ 46292-50409
ಕೋಕ 25099-37799
ಹೊಸಚಾಲಿ 34099-38699
ಕೆಂಪುಗೋಟು 26399-36099
ರಾಶಿ 44099-49099
ತಟ್ಟಬೆಟ್ಟೆ 32099-36469
ಶಿರಸಿ
ಬೆಟ್ಟೆ 41269-47899
ಬಿಳಿಗೋಟು 13599-44009
ಚಾಲಿ 36899-50881
ರಾಶಿ 36669-50999
ಯಲ್ಲಾಪುರ
ಬಿಳಿಗೋಟು 34899-42769
ಚಾಲಿ 44262-50540
ಕೋಕ 22899-35100
ಕೆಂಪುಗೋಟು 30199-36499
ರಾಶಿ 45607-53972
ತಟ್ಟಬೆಟ್ಟೆ 38399-44899

ರಾಮನಗರ ರೇಷ್ಮೆ
ಮಿಶ್ರತಳಿ (ಸಿ.ಬಿ) 330-560
ದ್ವಿತಳಿ (ಬಿ.ವಿ) 475-755

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,000	14,700	14650	236.60 ಸೆಂಟ್ಸ್
ಎಸಿ	6,450	6,100	6150	
ಆರ್‌ಪಿ	6,200	-	-	ಲಂಡನ್
ಆರ್‌ಸಿ	3,745	142 on O.T	-	2335ಡಾಲರ್ಸ್

ಓಮೈಕ್ರಾನ್ ಪ್ರಭಾವ: 764 ಅಂಶ ಕುಸಿದ ಸೆನ್ಸೆಕ್ಸ್



ಮುಂಬೈ (ಪಿಟಿಐ): ಕೊರೊನಾ ವೈರಾಣುವಿನ ಓಮೈಕ್ರಾನ್ ರೂಪಾಂತರಿಯ ಪ್ರಕರಣಗಳು ದೇಶದಲ್ಲಿ ವರದಿಯಾದ ಮಾರನೆಯ ದಿನ ಷೇರುಪೇಟೆ ಸೂಚ್ಯಂಕಗಳು ಇಳಿಕೆಯ ಹಾದಿ ಹಿಡಿದವು.

ಎರಡು ದಿನಗಳಿಂದ ಚೇತರಿಕೆಯ ಹಾದಿಯಲ್ಲಿ ಇದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 764 ಅಂಶ ಕುಸಿಯಿತು. ದಿನದ ಕೊನೆಯಲ್ಲಿ 57,696 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 204 ಅಂಶ ಇಳಿಕೆಯಾಗಿ 17,196 ಅಂಶದಲ್ಲಿ ವಹಿವಾಟು ಕೊನೆಗೊಳಿಸಿತು.

ಸೆನ್ಸೆಕ್ಸ್‌ನಲ್ಲಿ ಎಲ್‌ಆ್ಯಂಡ್‌ಟಿ, ಇಂಡಸ್‌ಇಂಡ್ ಬ್ಯಾಂಕ್, ಟಾಟಾ ಸ್ಟೀಲ್ ಮತ್ತು ಅಲ್ಟ್ರಾ ಟೆಕ್ ಸಿಮೆಂಟ್ ಷೇರುಗಳು ಮಾತ್ರ ಗಳಿಕೆ ಕಂಡುಕೊಂಡವು. 'ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯ ಮುಂದಿನ ವಾರ ನಡೆಯಲಿದೆ. ಹೂಡಿಕೆದಾರರು ಆ ಸಭೆಯ ತೀರ್ಮಾನಗಳತ್ತ ಒಂದು ದೃಷ್ಟಿ ಇರಿಸಿದ್ದಾರೆ. ಅಲ್ಲದೆ, ದೇಶದಲ್ಲಿ ಓಮೈಕ್ರಾನ್ ರೂಪಾಂತರಿ ತಳಿಯ ಪ್ರಕರಣಗಳು ವರದಿಯಾಗಿರುವ ಕಾರಣ ಹೂಡಿಕೆದಾರರು ಎಚ್ಚರಿಕೆಯ ವಹಿವಾಟು ನಡೆಸುತ್ತಿದ್ದಾರೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಕೊರೊನಾ ವೈರಾಣುವಿನ ಹೊಸ ರೂಪಾಂತರಿ ಪತ್ತೆಯಾಗಿರುವುದು ಮತ್ತು ಅದರ ವಿಚಾರವಾಗಿ ಒಂದಿಷ್ಟು ಅನಿಶ್ಚಿತತೆಗಳು ಇರುವ ಕಾರಣ ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಹೊಂದಾಣಿಕೆಯ ನಿಲುವನ್ನು ಮುಂದುವರಿಸುವ ಸಾಧ್ಯತೆ ಇದೆ' ಎಂದು ನಾಯರ್ ಅವರು ತಿಳಿಸಿದ್ದಾರೆ.

'ಭಾರತದ ಅತಿದೊಡ್ಡ ಐಪಿಒ (ಒನ್97 ಕಮ್ಯುನಿಕೇಷನ್ಸ್) ವಿಚಾರದಲ್ಲಿ ಹೂಡಿಕೆದಾರರು ತೋರಿದ ನಿರುತ್ಸಾಹದ ಪ್ರತಿಕ್ರಿಯೆ, ಯುರೋಪಿನ ವಿವಿಧೆಡೆ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಾಗುತ್ತಿರುವುದು ಕೂಡ ಎಚ್ಚರಿಕೆಯ ವಹಿವಾಟಿಗೆ ಇಂಬು ಕೊಟ್ಟಿತು' ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನಾ ವಿಭಾಗದ ಶ್ರೀಕಾಂತ್ ಚವಾಣ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 2.38ರಷ್ಟು ಹೆಚ್ಚಾಗಿದ್ದು ಪ್ರತಿ ಬ್ಯಾರಲ್‌ಗೆ 71.32 ಅಮೆರಿಕನ್ ಡಾಲರ್‌ಗೆ ತಲುಪಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಭಾರತದ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 14 ಪೈಸೆ ಇಳಿಕೆ ಕಂಡಿದೆ.





ಗುರುದಾಸ್‌ಪುರ: ಟಿಫಿನ್ ಬಾಂಬ್, 4 ಗ್ರೆನೇಡ್ ವಶ

ಚಂಡೀಗಡ (ಪಿಟಿಐ): ಪಂಜಾಬಿನ ಗುರುದಾಸ್‌ಪುರ ಜಿಲ್ಲೆಯಲ್ಲಿ ಒಂದು ಟಿಫಿನ್ ಬಾಂಬ್ ಮತ್ತು ನಾಲ್ಕು ಗ್ರೆನೇಡ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ದೀನನಗರದಲ್ಲಿ ಒಂದು ಕೆ.ಜಿ ಆರ್‌ಡಿಎಕ್ಸ್ ಅನ್ನು ವಶಪಡಿಸಿಕೊಂಡ ಎರಡು ದಿನಗಳ ನಂತರ ಸಲೇಂಪುರ ಪ್ರದೇಶದಲ್ಲಿ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆಯನ್ನು ನಡೆಸಲಾಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಸೇವಾ ವಲಯ: ಎರಡನೆಯ ವೇಗದ ಬೆಳವಣಿಗೆ



ನವದೆಹಲಿ (ಪಿಟಿಐ): ನವೆಂಬರ್ ತಿಂಗಳಿನಲ್ಲಿ ದೇಶದ ಸೇವಾ ವಲಯದ ಚಟುವಟಿಕೆಗಳು ಒಂದು ದಶಕಕ್ಕೂ ಹೆಚ್ಚಿನ ಅವಧಿಯ ಎರಡನೆಯ ಅತಿವೇಗದ ಬೆಳವಣಿಗೆ ದಾಖಲಿಸಿವೆ. ಮಾರುಕಟ್ಟೆ ಪರಿಸ್ಥಿತಿ ಸುಧಾರಣೆ ಆಗಿದ್ದು ಮತ್ತು ಉದ್ಯೋಗದ ಅವಕಾಶಗಳು ಹೆಚ್ಚು ಲಭ್ಯವಾಗಿದ್ದು ಈ ಬೆಳವಣಿಗೆಗೆ ಕಾರಣ.

ಸೇವಾ ವಲಯದ ಚಟುವಟಿಕೆಗಳ ಪ್ರಮಾಣವನ್ನು ಹೇಳುವ ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ನವೆಂಬರ್‌ನಲ್ಲಿ 58.1ರ ಮಟ್ಟ ತಲುಪಿದೆ. ಇದು ಅಕ್ಟೋಬರ್‌ನಲ್ಲಿ 58.4 ಆಗಿತ್ತು. 2011ರ ಜುಲೈ ನಂತರದ ಎರಡನೆಯ ಅತಿ ವೇಗದ ಬೆಳವಣಿಗೆಯು ನವೆಂಬರ್‌ನಲ್ಲಿ ದಾಖಲಾಗಿದೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆ ಹೇಳಿದೆ.

ನವೆಂಬರ್ ತಿಂಗಳ ಬೆಳವಣಿಗೆಯನ್ನೂ ಪರಿಗಣನೆಗೆ ತೆಗೆದುಕೊಂಡರೆ ದೇಶದ ಸೇವಾ ವಲಯದ ಚಟುವಟಿಕೆಗಳು ಸತತ ನಾಲ್ಕು ತಿಂಗಳುಗಳಿಂದ ಏರುಗತಿಯಲ್ಲಿ ಇವೆ. ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಬೆಳವಣಿಗೆ ಎಂದೂ, 50ಕ್ಕಿಂತ ಕಡಿಮೆ ಮಟ್ಟದಲ್ಲಿ ಇದ್ದರೆ ಅದನ್ನು ಕುಸಿತ ಎಂದೂ ಪರಿಗಣಿಸಲಾಗುತ್ತದೆ.

'ಸೇವಾ ವಲಯದಲ್ಲಿ ಮಾರಾಟ ಪ್ರಗತಿಯು ಚೆನ್ನಾಗಿ ಆಗಿರುವ ಕಾರಣ ನವೆಂಬರ್‌ನಲ್ಲಿ ಬೆಳವಣಿಗೆ ದಾಖಲಾಗಿದೆ' ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

ಕೊರೊನಾ ವೈರಾಣುವಿನಿಂದಾಗಿ ಎದುರಾಗಿರುವ ಪ್ರಯಾಣ ನಿರ್ಬಂಧಗಳು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ಸೇವಾ ವಲಯಕ್ಕೆ ಬೇಡಿಕೆ ಕುಗ್ಗಿಸಿವೆ. ಐಎಚ್‌ಎಸ್ ಮರ್ಕಿಟ್ ಸಂಸ್ಥೆ ನಡೆಸಿರುವ ಸಮೀಕ್ಷೆಯ ಪ್ರಕಾರ, ಖಾಸಗಿ ವಲಯದ ಸೇವಾ ಚಟುವಟಿಕೆಗಳು ಬೆಳವಣಿಗೆ ಕಾಣುವುದು ಮುಂದುವರಿದಿದೆ.

ತಯಾರಿಕಾ ವಲಯ ಮತ್ತು ಸೇವಾ ವಲಯದ ಚಟುವಟಿಕೆಗಳನ್ನು ಒಟ್ಟಾಗಿ ಸೂಚಿಸುವ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು ನವೆಂಬರ್‌ನಲ್ಲಿ 59.2ಕ್ಕೆ ಏರಿಕೆ ಆಗಿದೆ. ಇದು ಅಕ್ಟೋಬರ್‌ನಲ್ಲಿ 58.7ರಷ್ಟು ಇತ್ತು.

'ತಯಾರಿಕಾ ವಲಯ ಮತ್ತು ಸೇವಾ ವಲಯದ ಚಟುವಟಿಕೆಗಳನ್ನು ಒಟ್ಟಾಗಿ ಹೇಳುವ ಸೂಚ್ಯಂಕವು ಹೆಚ್ಚಿನ ಭರವಸೆ ಮೂಡಿಸುವ ಮಟ್ಟದಲ್ಲಿ ಇದೆ. ಇದು ಪ್ರಸಕ್ತ ಆರ್ಥಿಕ ವರ್ಷದ ಮೂರನೆಯ ತ್ರೈಮಾಸಿಕದಲ್ಲಿ ಒಳ್ಳೆಯ ಆರ್ಥಿಕ ಬೆಳವಣಿಗೆ ಸಾಧ್ಯವಾಗಬಹುದು ಎಂಬುದನ್ನು ಹೇಳುತ್ತಿದೆ' ಎಂದು ಲಿಮಾ ತಿಳಿಸಿದ್ದಾರೆ.

ಕೆನರಾ ಬ್ಯಾಂಕ್‌ನಲ್ಲಿ ಕಡಿಮೆ ಬಡ್ಡಿ ದರಕ್ಕೆ ಗೃಹಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಸಾಲ ಪಡೆಯಲು ಬಯಸುವವರಿಗೆ ಶೇಕಡ 6.65ರ ಬಡ್ಡಿ ದರದಲ್ಲಿ ಸಾಲ ನೀಡುವುದಾಗಿ ಕೆನರಾ ಬ್ಯಾಂಕ್ ಹೇಳಿದೆ. ಈ ಕೊಡುಗೆಯು ಸೀಮಿತ ಅವಧಿಯದ್ದಾಗಿರಲಿದೆ ಎಂದು ಅದು ತಿಳಿಸಿದೆ.

ಸಾಲದ ಮೊತ್ತ ಎಷ್ಟೇ ಇದ್ದರೂ ಇದೇ ಪ್ರಮಾಣದ ಬಡ್ಡಿ ಅನ್ವಯ ಆಗಲಿದೆ. ಪ್ರೊಸೆಸಿಂಗ್ ಮತ್ತು ದಾಖಲೀಕರಣದ ಶುಲ್ಕಗಳನ್ನು ಮನ್ನಾ ಮಾಡಲಾಗುತ್ತದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಆಂಧ್ರ, ಒಡಿಶಾ ಕರಾವಳಿಯತ್ತ ಇಂದು ಚಂಡಮಾರುತ 'ಜವಾದ್'

ನವದೆಹಲಿ (ಪಿಟಿಐ): ಬಂಗಾಳಕೊಲ್ಲಿಯಲ್ಲಿ ಕಾಣಿಸಿಕೊಂಡಿರುವ ಚಂಡಮಾರುತ 'ಜವಾದ್' ತೀವ್ರಗೊಳ್ಳುತ್ತಿದ್ದು, ಶನಿವಾರ ಬೆಳಿಗ್ಗೆ ವೇಳೆಗೆ ಬಂಗಾಳಕೊಲ್ಲಿಯ ಪಶ್ಚಿಮದ ಕೇಂದ್ರ ಭಾಗ ಅಂದರೆ ಆಂಧ್ರಪ್ರದೇಶ, ಒಡಿಶಾದ ಕರಾವಳಿ ತೀರವನ್ನು ತಲುಪಲಿದೆ.

ಭಾರತೀಯ ಹವಾಮಾನ ಇಲಾಖೆ ಈ ವಿವರ ನೀಡಿದ್ದು, ಚಂಡಮಾರುತವು ತದನಂತರ ಒಡಿಶಾ, ಆಂಧ್ರಪ್ರದೇಶದ ಕರಾವಳಿಗೆ ಹೊಂದಿಕೊಂಡಂತೆ ಈಶಾನ್ಯ ದಿಕ್ಕಿನೆಡೆಗೆ ಸಾಗಲಿದೆ. ಡಿ.5ರ ವೇಳೆಗೆ ಪುರಿ ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳಲಿದೆ ಎಂದು ತಿಳಿಸಿದೆ. 'ಜವಾದ್' ಚಂಡಮಾರುತದ ಪರಿಣಾಮ ಆಂಧ್ರಪ್ರದೇಶದ ಉತ್ತರ ಕರಾವಳಿ ಮತ್ತು ಒಡಿಶಾದ ದಕ್ಷಿಣ ಕರಾವಳಿ ಭಾಗದಲ್ಲಿ ಧಾರಾಕಾರವಾಗಿ ಮಳೆಯಾಗಲಿದೆ. ಶನಿವಾರ ಮಳೆಯ ತೀವ್ರತೆಯೂ ಹೆಚ್ಚಿರಲಿದೆ ಎಂದು ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಮುಂಜಾಗ್ರತೆಯಾಗಿ ಆಂಧ್ರಪ್ರದೇಶದ ಶ್ರೀಕಾಕುಳಂ, ವಿಜಯನಗರಂ, ವಿಶಾಖಪಟ್ಟಣಂ ಜಿಲ್ಲೆಗಳು ಮತ್ತು ಒಡಿಶಾದ ಗಜಪತಿ, ಗಂಜಾಂ, ಪುರಿ, ಜಗತ್ಸಿಂಗ್‌ಪುರ್ ಜಿಲ್ಲೆಗಳ ವ್ಯಾಪ್ತಿಯಲ್ಲಿ ರೆಡ್ ಅಲರ್ಟ್ ನೀಡಲಾಗಿದೆ ಎಂದು ತಿಳಿಸಿದೆ.

ಎನ್‌ಡಿಆರ್‌ಎಫ್‌ನ 64 ತಂಡಗಳು ಸಜ್ಜು

ನವದೆಹಲಿ (ಪಿಟಿಐ): ಒಡಿಶಾ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳದಲ್ಲಿ 'ಜವಾದ್' ಚಂಡಮಾರುತದ ಸಂಭವನೀಯ ಪರಿಣಾಮಗಳನ್ನು ಎದುರಿಸಲು ಎನ್‌ಡಿಆರ್‌ಎಫ್ ಒಟ್ಟು 64 ತಂಡಗಳನ್ನು ಸಜ್ಜುಗೊಳಿಸಿದೆ. ಎನ್‌ಡಿಆರ್‌ಎಫ್ ಮಹಾ ನಿರ್ದೇಶಕ (ಡಿ.ಜಿ) ಅತುಲ್ ಕರ್‍ವಾಲ್ ಅವರು, ಪರಿಣಾಮ ಉಂಟಾಗಬಹುದಾದ ರಾಜ್ಯಗಳಲ್ಲಿ ಪರಿಹಾರ ಕಾರ್ಯಗಳಿಗೆ 46 ತಂಡಗಳನ್ನು ನಿಯೋಜಿಸಿದ್ದು, 18 ತಂಡಗಳನ್ನು ಹೆಚ್ಚುವರಿಯಾಗಿ ಕಾಯ್ದಿರಿಸಲಾಗಿದೆ ಎಂದರು.

ಎನ್‌ಡಿಆರ್‌ಎಫ್‌ನ ಪ್ರತಿ ತುಕಡಿಯಲ್ಲಿ 30 ಸಿಬ್ಬಂದಿ ಇರಲಿದ್ದು, ವಿದ್ಯುತ್ ಚಾಲಿತ ಗರಗಸ, ಮರ ಕಡಿಯುವ ಪರಿಕರಗಳು, ದೋಣಿ ಹಾಗೂ ಇತರೆ ಪರಿಹಾರ ಸಾಮಗ್ರಿಗಳ ಜೊತೆಗೆ ಸಜ್ಜಾಗಿರಲಿವೆ ಎಂದು ತಿಳಿಸಿದರು.



ನೌಕಾಪಡೆ ಸಪ್ತಾಹ ನೌಕಾಪಡೆ ಸಪ್ತಾಹದ ಆಚರಣೆಯ ಪ್ರಯುಕ್ತ ಮುಂಬೈನ ಗೇಟ್‌ವೇ ಆಫ್ ಇಂಡಿಯಾ ಬಳಿ ಭಾರತೀಯ ನೌಕಾಪಡೆಯ ಸಿಬ್ಬಂದಿ ಶುಕ್ರವಾರ ತಮ್ಮ ಕೌಶಲವನ್ನು ಪ್ರದರ್ಶಿಸಿದರು. – ಪಿಟಿಐ ಚಿತ್ರ

ಪೆಪ್ಸಿಕೊ: ಆಲೂಗಡ್ಡೆ ತಳಿಯ ಹಕ್ಕುಸ್ವಾಮ್ಯ ರದ್ದು

ನವದೆಹಲಿ (ಪಿಟಿಐ/ರಾಯಿಟರ್ಸ್): ಪೆಪ್ಸಿಕೊ ಇಂಡಿಯಾ ಕಂಪನಿಗೆ ಆಲೂಗಡ್ಡೆ ತಳಿಯೊಂದರ ಬೌದ್ಧಿಕ ಹಕ್ಕು ಸ್ವಾಮ್ಯ ನೀಡಿದ್ದನ್ನು ಸಸ್ಯ ತಳಿಗಳ ಸಂರಕ್ಷಣಾ ಪ್ರಾಧಿಕಾರವಾಗಿರುವ ಪಿಪಿವಿ ಆ್ಯಂಡ್ ಎಫ್‌ಆರ್ ರದ್ದುಗೊಳಿಸಿದೆ. ಎಫ್‌ಎಲ್–2027 ತಳಿಯ ಬೌದ್ಧಿಕ ಹಕ್ಕುಸ್ವಾಮ್ಯವನ್ನು ಪೆಪ್ಸಿಕೊ ಕಂಪನಿಗೆ ನೀಡಲಾಗಿತ್ತು.

ಈ ವಿಚಾರವಾಗಿ ಪ್ರತಿಕ್ರಿಯೆ ನೀಡಿರುವ ಕಂಪನಿಯು, ಆದೇಶವನ್ನು ಪರಿಶೀಲಿಸುತ್ತಿರುವುದಾಗಿ ಹೇಳಿದೆ. ಕೃಷಿ ಕಾರ್ಯಕರ್ತೆ ಕವಿತಾ ಕುರುಗಂಟಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಪ್ರಾಧಿಕಾರವು ಈ ತೀರ್ಮಾನ ಕೈಗೊಂಡಿದೆ. ಪೆಪ್ಸಿಕೊ ಕಂಪನಿಯು ಈ ಹಿಂದೆ ಎಫ್‌ಎಲ್–2027 ಆಲೂಗಡ್ಡೆ ತಳಿಯ ವಿಚಾರವಾಗಿ ಗುಜರಾತಿನ ರೈತರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಿತ್ತು.

ಈ ತಳಿಯ ಆಲೂಗಡ್ಡೆಯಿಂದ ಪೆಪ್ಸಿಕೊ ಕಂಪನಿಯು ಲೇಯ್ಸ್ ಚಿಪ್ಸ್ ತಯಾರಿಸುತ್ತಿದೆ ಎಂದು ರಾಯಿಟರ್ಸ್ ಸುದ್ದಿಸಂಸ್ಥೆ ವರದಿ ಮಾಡಿದೆ. ಪ್ರಾಧಿಕಾರ ನೀಡಿರುವ ಆದೇಶವನ್ನು ಸ್ವಾಗತಿಸಿರುವ ಗುಜರಾತಿನ ಆಲೂಗಡ್ಡೆ ಬೆಳೆಗಾರರು, ಇದು ರೈತರಿಗೆ ಸಿಕ್ಕ ಜಯ ಎಂದು ಹೇಳಿದ್ದಾರೆ. 'ಇದು ಯಾವುದೇ ಬೆಳೆಯನ್ನು ಬೆಳೆಯುವ ಹಕ್ಕನ್ನು ಖಾತರಿಪಡಿಸುವಂತಿದೆ' ಎಂದು ಗುಜರಾತಿನ ರೈತ ಬಿಪಿನ್ ಪಟೇಲ್ ಹೇಳಿದ್ದಾರೆ. ಪಟೇಲ್ ಅವರ ವಿರುದ್ಧ ಪೆಪ್ಸಿಕೊ ಕಂಪನಿಯು 2019ರಲ್ಲಿ ಕಾನೂನು ಕ್ರಮಕ್ಕೆ ಮುಂದಾಗಿತ್ತು.

ಹಳಿತಪ್ಪಿದ ದುರಂತೊ ಎಕ್ಸ್‌ಪ್ರೆಸ್

ಭುವನೇಶ್ವರ (ಪಿಟಿಐ): ಒಡಿಶಾದ ಜಾಜ್‌ಪುರ ಜಿಲ್ಲೆಯ ಹರಿದಾಸ್‌ಪುರ ರೈಲು ನಿಲ್ದಾಣದಲ್ಲಿ ದುರಂತೊ ಎಕ್ಸ್‌ಪ್ರೆಸ್‌ನ ಪಾರ್ಸೆಲ್ ವ್ಯಾನ್‌ನ ಕನಿಷ್ಠ ಎರಡು ಚಕ್ರಗಳು ಶುಕ್ರವಾರ ಹಳಿತಪ್ಪಿದ್ದು, ಯಾರಿಗೂ ಯಾವುದೇ ಗಾಯವಾಗಿಲ್ಲ ಎಂದು ಪೂರ್ವ ಕರಾವಳಿ ರೈಲ್ವೆ (ಇಸಿಒಆರ್) ತಿಳಿಸಿದೆ.

'ಯಶವಂತಪುರ- ಹೌರಾ (12246) ದುರಂತೊ ಎಕ್ಸ್‌ಪ್ರೆಸ್‌ನ ಹೆಚ್ಚಿನ ಸಾಮರ್ಥ್ಯದ ಪಾರ್ಸೆಲ್ ವ್ಯಾನ್‌ನ ಎರಡು ಮುಂಭಾಗದ ಚಕ್ರಗಳು ಬೆಳಿಗ್ಗೆ 11.14ಕ್ಕೆ ಹರಿದಾಸ್‌ಪುರ ರೈಲು ನಿಲ್ದಾಣದ ಯಾರ್ಡ್ ಮೂಲಕ ಹಾದು ಹೋಗುತ್ತಿದ್ದಾಗ ಹಳಿತಪ್ಪಿವೆ.

ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ' ಎಂದು ಇಸಿಒಆರ್ ಹೇಳಿಕೆಯಲ್ಲಿ ತಿಳಿಸಿದೆ.

'ಎಲ್ಲಾ ಪ್ರಯಾಣಿಕರ ಬೋಗಿಗಳನ್ನು ಮತ್ತೊಂದು ಎಂಜಿನ್‌ನೊಂದಿಗೆ ಜೋಡಿಸಿ ಕಳುಹಿಸಲಾಗುತ್ತದೆ' ಎಂದು ತಿಳಿಸಿದೆ.

5 ರಾಜ್ಯಗಳ ಚುನಾವಣೆ– ₹ 1,100 ಕೋಟಿ ಸ್ವೀಕಾರ

ನವದೆಹಲಿ (ಪಿಟಿಐ):5ರಾಜ್ಯಗಳು, ಕೇಂದ್ರಾಡಳಿತ ಪ್ರದೇಶದಲ್ಲಿ 2021ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ವಿವಿಧ ರಾಜಕೀಯ ಪಕ್ಷಗಳು ₹ 1,100 ಕೋಟಿ ಪಡೆದುಕೊಂಡಿದ್ದು, ₹ 500 ಕೋಟಿಗೂ ಅಧಿಕ ವೆಚ್ಚ ಮಾಡಿವೆ. ದೊಡ್ಡ ಮೊತ್ತವನ್ನು ಜಾಹೀರಾತು ಮತ್ತು ಸ್ಟಾರ್ ಪ್ರಚಾರಕರ ಪ್ರಯಾಣ ವೆಚ್ಚಕ್ಕಾಗಿ ವ್ಯಯಿಸಲಾಗಿದೆ ಎಂದು ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಮತ್ತು ನ್ಯಾಷನಲ್ ಎಲೆಕ್ಷನ್ ವಾಚ್ ಸಂಸ್ಥೆಗಳು ಸಿದ್ಧಪಡಿಸಿದ ವರದಿಯಲ್ಲಿ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

'ಹಿಂದೂ ವಿವಾಹ ಕಾಯ್ದೆ: ಸಲಿಂಗ ವಿವಾಹಕ್ಕೆ ಅವಕಾಶ ನೀಡಬಾರದು'

ನವದೆಹಲಿ (ಪಿಟಿಐ): ಹಿಂದೂ ಧರ್ಮದಲ್ಲಿ ಅನಾದಿ ಕಾಲದಿಂದಲೂ ಸ್ತ್ರೀ ಮತ್ತು ಪುರುಷನ ನಡುವೆ ವಿವಾಹದ ಗಂಟು ಹಾಕಲು ಅವಕಾಶವಿರುವುದರಿಂದ ಹಿಂದೂ ವಿವಾಹ ಕಾಯ್ದೆಯಡಿ ಸಲಿಂಗ ವಿವಾಹ ನಡೆಸಲು ಅನುಮತಿ ನೀಡಬಾರದು ಎಂದು ಮನವಿ ಮಾಡಿ ದೆಹಲಿ ಹೈಕೋರ್ಟ್‌ನಲ್ಲಿ ಶುಕ್ರವಾರ ಅರ್ಜಿಯೊಂದು ಸಲ್ಲಿಕೆಯಾಗಿದೆ.

'ಹಿಂದೂಗಳಲ್ಲಿನ ವಿವಾಹವು ಅವರ ಧರ್ಮದ ಭಾಗವಾಗಿದೆ. ಇದರ ಧಾರ್ಮಿಕ ಆಚರಣೆಗಳು ಸಮಾಜದಲ್ಲಿ ಭಾವನಾತ್ಮಕ ಮೌಲ್ಯಗಳನ್ನು ಹೊಂದಿವೆ' ಎಂದು ಅರ್ಜಿ ಹೇಳಿದೆ.

ಸೇವಾ ನ್ಯಾಯ ಉತ್ಥಾನ ಫೌಂಡೇಷನ್ ಸಂಸ್ಥೆಯು ಸಲ್ಲಿಸಿದ ಅರ್ಜಿಯನ್ನು ಫೆಬ್ರವರಿ 3 ರಂದು ಸಲಿಂಗ ವಿವಾಹಗಳನ್ನು ಅಂಗೀಕರಿಸುವ ಮುಖ್ಯ ಅರ್ಜಿ ಜೊತೆ ವಿಚಾರಣೆ ನಡೆಸಲು ಮುಖ್ಯ ನ್ಯಾಯಮೂರ್ತಿ ಡಿ.ಎನ್.ಪಟೇಲ್ ಮತ್ತು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರ ಪೀಠವು ಪಟ್ಟಿ ಮಾಡಿದೆ.

ಯುದ್ಧನೌಕೆಗಳಿಗೆ ಮಹಿಳಾ ಅಧಿಕಾರಿ ನೇಮಿಸಲು ಕ್ರಮ

ನವದೆಹಲಿ (ಪಿಟಿಐ): 'ಪ್ರಮುಖ ಯುದ್ಧನೌಕೆಗಳಿಗೆ ಮಹಿಳಾ ಅಧಿಕಾರಿಗಳನ್ನು ನೇಮಿಸಲಾಗುತ್ತಿದೆ' ಎಂದು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ಅವರು ಶುಕ್ರವಾರ ಹೇಳಿದರು.

'ಇದುವರೆಗೂ 15 ಯುದ್ಧನೌಕೆಗಳಿಗೆ 28 ಅಧಿಕಾರಿಗಳನ್ನು ನೇಮಿಸಲಾಗಿದೆ. ಶೀಘ್ರದಲ್ಲಿಯೇ ಈ ಸಂಖ್ಯೆ ಇನ್ನಷ್ಟು ಹೆಚ್ಚಲಿದೆ' ಎಂದು 'ನೌಕಾಪಡೆ ದಿನ'ದ ಮುನ್ನಾದಿನದಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿವಿಧ ಹಂತಗಳಲ್ಲಿ ಮಹಿಳಾ ಅಧಿಕಾರಿಗಳನ್ನು ನೇಮಿಸಲು ನೌಕಾಪಡೆಯು ಸಜ್ಜಾಗಿದೆ. ಮಹಿಳಾ ಸಬಲೀಕರಣ ಕುರಿತ ಕೇಂದ್ರ ಸರ್ಕಾರದ ಚಿಂತನೆಗೆ ಅನುಗುಣವಾಗಿ ನೌಕಾಪಡೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ಕಲ್ಪಿಸಲಾಗುತ್ತಿದೆ. ಬಹುತೇಕ ಎಲ್ಲ ಯುದ್ಧನೌಕೆಗಳಿಗೆ ಮಹಿಳೆಯರನ್ನು ನೇಮಿಸಲಾಗುತ್ತಿದೆ ಎಂದು ತಿಳಿಸಿದರು.

ನೌಕಾಪಡೆಯ ಪ್ರವೇಶ ಹಂತದಲ್ಲಿ ಮಹಿಳೆಯರಿಗೆ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ತರಬೇತಿ ನೀಡುವ ಕುರಿತು ರೂಪುರೇಷೆಯನ್ನು ಅಂತಿಮಗೊಳಿಸಲಾಗುತ್ತಿದೆ ಎಂದು ಹೇಳಿದರು.

ಟೆಸ್ಟ್: ನಾಲ್ಕು ವಿಕೆಟ್ ಗಳಿಸಿದ ಎಜಾಜ್ ಪಟೇಲ್: ಸೊನ್ನೆ ಸುತ್ತಿದ ಚೇತೇಶ್ವರ್ ಪೂಜಾರ, ನಾಯಕ ವಿರಾಟ್ ಕೊಹ್ಲಿ

ಮಯಂಕ್ ಮನಮೋಹಕ ಶತಕ

ಪ್ರಜಾವಾಣಿ ವಾರ್ತೆ

ಮುಂಬೈ: ಬೆಂಗಳೂರು ಹುಡುಗ ಮಯಂಕ್ ಅಗರವಾಲ್ ಶುಕ್ರವಾರ ಗಳಿಸಿದ ಸುಂದರ ಶತಕದಿಂದಾಗಿ ಭಾರತ ತಂಡದ ಆತಂಕ ದೂರವಾಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಆರಂಭವಾದ ಎರಡನೇ ಟೆಸ್ಟ್‌ನಲ್ಲಿ ನ್ಯೂಜಿಲೆಂಡ್ ತಂಡದ ಎಡಗೈ ಸ್ಪಿನ್ನರ್ ಎಜಾಜ್ ಪಟೇಲ್ (73ಕ್ಕೆ4) ಕೊಟ್ಟ ಪೆಟ್ಟಿಗೆ ಆತಿಥೇಯರ ಬಳಗ ನಲುಗಿತ್ತು. ಆದರೆ ಆರಂಭಿಕ ಬ್ಯಾಟರ್ ಮಯಂಕ್ (ಔಟಾಗದೆ 120; 246ಎಸೆತ, 4X14, 6X4) ಸರಿಯಾದ ಸಮಯದಲ್ಲಿ ಲಯಕ್ಕೆ ಮರಳಿದರು. ಇದರೊಂದಿಗೆ ಮೊದಲ ದಿನದಾಟದಲ್ಲಿ ಭಾರತ ತಂಡವು 70 ಓವರ್‌ಗಳಲ್ಲಿ 4ಕ್ಕೆ 221 ರನ್ ಗಳಿಸಿತು. ಮಯಂಕ್ ಮತ್ತು ವೃದ್ಧಿಮಾನ್ ಸಹಾ (ಔಟಾಗದೆ 25) ಕ್ರೀಸ್‌ನಲ್ಲಿದ್ದಾರೆ.

2019ರ ನವೆಂಬರ್‌ನಲ್ಲಿ ದ್ವಿಶತಕ ಬಾರಿಸಿದ ನಂತರ ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸಿದ್ದ ಮಯಂಕ್ ವಾಂಖೆಡೆಯಲ್ಲಿ ಅಮೋಘ ಆಟವಾಡಿದರು. ಈ ಸರಣಿಯ ಮೊದಲ ಪಂದ್ಯದಲ್ಲಿಯೂ ಅವರು ಹೆಚ್ಚು ರನ್ ಗಳಿಸಿರಲಿಲ್ಲ. ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ಗಾಯಗೊಂಡಿರುವ ಕೆ.ಎಲ್. ರಾಹುಲ್ ತಂಡದಲ್ಲಿ ಇಲ್ಲದ ಕಾರಣಕ್ಕೆ ಸ್ಥಾನ ಪಡೆದಿದ್ದ ಮಯಂಕ್ ತಮ್ಮ ಸಾಮರ್ಥ್ಯ ಸಾಬೀತು ಮಾಡಿದರು. ಆದರೆ, ನಿರಾಶೆ, ವೈಫಲ್ಯಗಳನ್ನು ಗಂಟುಮೂಟೆ ಕಟ್ಟಿ ಮುಂಬೈನ ಸಮುದ್ರಕ್ಕೆ ಎಸೆದುಬಿಟ್ಟರು!



ಮಯಂಕ್ ಅಗರವಾಲ್ ಆಟದ ಸೊಗಸು –ಎಎಫ್‌ಪಿ ಚಿತ್ರ



ಎಜಾಜ್ ಪಟೇಲ್

ಗುರುವಾರ ರಾತ್ರಿ ಸುರಿದ ಮಳೆಯಿಂದಾಗಿ ಹಸಿಯಾಗಿದ್ದ ಕ್ರೀಡಾಂಗಣದಲ್ಲಿ ಊಟದ ವಿರಾಮದ ನಂತರ ಪಂದ್ಯ ಆರಂಭವಾಯಿತು. ಟಾಸ್ ಗೆದ್ದ ಆತಿಥೇಯ ನಾಯಕ ವಿರಾಟ್ ಕೊಹ್ಲಿ ಬ್ಯಾಟಿಂಗ್ ಮಾಡಲು ನಿರ್ಧರಿಸಿದರು. ಮಯಂಕ್ ಮತ್ತು ಶುಭಮನ್ ಗಿಲ್ (44; 71ಎಸೆತ) ಉತ್ತಮ ಆರಂಭ ನೀಡಿದರು.

ಮುಖ್ಯಾಂಶಗಳು

- ಟೆಸ್ಟ್ ಕ್ರಿಕೆಟ್‌ನಲ್ಲಿ ಮಯಂಕ್ ಅಗರವಾಲ್ ನಾಲ್ಕನೇ ಶತಕ
- ಅಜಿಂಕ್ಯ ರಹಾನೆ, ರವೀಂದ್ರ ಜಡೇಜ, ಇಶಾಂತ್ ಶರ್ಮಾಗೆ ವಿಶ್ರಾಂತಿ
- ಆಲ್‌ರೌಂಡರ್ ಜಯಂತ್ ಯಾದವ್‌ಗೆ ಅವಕಾಶ

ಮೊದಲ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು. ಈ ಹಂತದಲ್ಲಿ ಭಾರತ ತಂಡದ ಇನಿಂಗ್ಸ್‌ಗೆ ಎಜಾಜ್ ಪಟೇಲ್ ಬಲವಾದ ಪೆಟ್ಟುಕೊಟ್ಟರು.

28ನೇ ಓವರ್‌ನಲ್ಲಿ ಗಿಲ್ ವಿಕೆಟ್ ಪಡೆದ ಪಟೇಲ್, ತಮ್ಮ ಇನ್ನೊಂದು ಓವರ್‌ನಲ್ಲಿ ಚೇತೇಶ್ವರ್ ಪೂಜಾರ ಮತ್ತು ವಿರಾಟ್ ಕೊಹ್ಲಿ ಅವರಿಗೆ ಖಾತೆ ತೆರೆಯಲೂ ಬಿಡದೇ ಪೆವಿಲಿಯನ್‌ಗೆ ಮರಳಿ ಕಳಿಸಿದರು. ವಿರಾಟ್ ಯುಡಿಆರ್‌ಎಸ್‌ನಲ್ಲಿಯೂ ತಮ್ಮ ವಿರುದ್ಧ ಬಂದ ಎಲ್‌ಬಿಡಬ್ಲ್ಯು ತೀರ್ಪಿಗೆ ಅಸಮಾಧಾನ ವ್ಯಕ್ತಪಡಿಸುತ್ತಲೇ ನಿರ್ಗಮಿಸಿದರು.

ತವರಿನಂಗಳದಲ್ಲಿ ಮೊದಲ ಬಾರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಆಡುತ್ತಿರುವ ಶ್ರೇಯಸ್ ಅಯ್ಯರ್ (18; 41ಎ, 4X3) ಮಯಂಕ್ ಜೊತೆಗೂಡಿದರು. ಕಾನ್ಪುರ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದ್ದ ಶ್ರೇಯಸ್ ಶತಕ ಬಾರಿಸಿದ್ದರು. ಇಲ್ಲಿಯೂ ಅವರು ಉತ್ತಮವಾಗಿ ಬ್ಯಾಟಿಂಗ್ ಮಾಡಿದರು. ಇಬ್ಬರೂ ವಿಕೆಟ್ ಪತನಕ್ಕೆ ತಡೆಯೊಡ್ಡಿದರು. 119 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಮಯಂಕ್ ನಂತರದ ಆಟದಲ್ಲಿ ವೇಗ ಹೆಚ್ಚಿಸಿದರು.

ಅದರಲ್ಲೂ ಯಶಸ್ವಿ ಬೌಲರ್ ಪಟೇಲ್ ಮತ್ತು ಕೈಲ್ ಜೆಮಿಸನ್‌ಗೆ ಪಾಠ ಕಲಿಸಿದರು. ಪ್ಯಾಡಲ್ ಸ್ವೀಪ್‌ಗಳ ಮೂಲಕ ತಮ್ಮ ಸುತ್ತಲೂ ನಿಂತ ಫೀಲ್ಡರ್‌ಗಳ ಮಧ್ಯದಿಂದ ಚೆಂಡನ್ನು ಬೌಂಡರಿಗೆ ಕಳಿಸಿದ ಮಯಂಕ್ ಆಟ ಚಿತ್ತಾಪಹಾರಿಯಾಗಿತ್ತು. ಎರಡು ಅಡಿ ಮುಂದಿಟ್ಟು ಸಿಕ್ಸರ್ ಕೂಡ ಹೊಡೆದರು. ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಕೂಡ ಮಯಂಕ್ ಆಟಕ್ಕೆ ತಲೆದೂಗಿದರು.

ಇನ್ನೊಂದು ಬದಿಯಲ್ಲಿ ಶ್ರೇಯಸ್ ತಮ್ಮ ಗೆಳೆಯನ ಆಟವನ್ನು ಕಣ್ತುಂಬಿಕೊಂಡರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು. ಶ್ರೇಯಸ್ ವಿಕೆಟ್ ಗಳಿಸಿದ ಪಟೇಲ್ ಈ ಜೊತೆಯಾಟವನ್ನೂ ಮುರಿದರು.

ತಾವೆದುರಿಸಿದ 196ನೇ ಎಸೆತದಲ್ಲಿ ಶತಕದ ಗಡಿ ಮುಟ್ಟಿದ ಮಯಂಕ್ ಮೇಲಕ್ಕೆ ಜಿಗಿದು, ಗಾಳಿಯಲ್ಲಿ ಬ್ಯಾಟ್ ಬೀಸಿ ಸಂಭ್ರಮಿಸಿದರು. ಆಗಸದತ್ತ ನೋಡಿ ಭಾವುಕರಾದರು. ಮತ್ತೆ ತಮ್ಮ ಅಂದದ ಆಟ ಮುಂದುವರಿಸಿದರು. ಅವರಿಗೆ ಸಹಾ ಜೊತೆಗೂಡಿದರು.

ದ್ರಾವಿಡ್ ಸಲಹೆ; ಸನ್ನಿ ಶೈಲಿ!



ರಾಹುಲ್ ದ್ರಾವಿಡ್ –ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ಸತತ ವೈಫಲ್ಯ ಅನುಭವಿಸಿದ್ದ ಮಯಂಕ್ ಅಗರವಾಲ್ ಶುಕ್ರವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಶತಕ ಸಾಧನೆಯ ಹಿಂದಿನ ಗುಟ್ಟು ಬಿಚ್ಚಿಟ್ಟಿದ್ದಾರೆ.

ಅವರ ಈ ಸಾಧನೆಯ ಹಿಂದೆ ಇಬ್ಬರು ದಿಗ್ಗಜ ಬ್ಯಾಟ್ಸ್‌ಮನ್‌ಗಳ ಮಾರ್ಗದರ್ಶನವಿದೆ. ಭಾರತದ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ಮಾಜಿ ಕ್ರಿಕೆಟಿಗ ಸುನೀಲ್ ಗಾವಸ್ಕರ್ ಅವರ ಸಲಹೆಗಳಿಂದಾಗಿ ಮಯಂಕ್ ಮತ್ತೆ ಲಯಕ್ಕೆ ಮರಳಿದ್ದಾರೆ.

‘ಹನ್ನೊಂದರ ಬಳಗದಲ್ಲಿ ಆಯ್ಕೆಯಾದ ಮೇಲೆ ರಾಹುಲ್ ಭಾಯ್ (ದ್ರಾವಿಡ್) ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡಿ ಆಡು. ಶ್ರೇಷ್ಠ ಆಟವಾಡು ಎಂದು ಬೆನ್ನುತಟ್ಟಿದರು. ಯಾವುದು ನಿನ್ನ ನಿಯಂತ್ರಣದಲ್ಲಿದಿಯೊ ಅದರ ಬಗ್ಗೆ ಮಾತ್ರ ಯೋಚಿಸು. ಉಳಿದೆಲ್ಲವನ್ನೂ ಬಿಟ್ಟುಬಿಡು ಎಂದೂ ರಾಹುಲ್ ಹೇಳಿದ್ದರು. ಅವರ ಮಾತುಗಳು ನನ್ನ ಮೇಲೆ ಪ್ರಭಾವ ಬೀರಿದವು’ ಎಂದು ಮಯಂಕ್ ದಿನದಾಟದ ನಂತರ ಹೇಳಿದರು.

‘ಕ್ರೀಸ್‌ನಲ್ಲಿ ಒಂದೊಮ್ಮೆ ಕಾಲೂರಿದ ನಂತರ ದೊಡ್ಡ ಮೊತ್ತ ಗಳಿಸುವತ್ತ ಚಿತ್ತ ಹರಿಸು. ಏಕಾಗ್ರತೆ ಕಳೆದುಕೊಳ್ಳಬೇಡವೆಂದು ರಾಹುಲ್ ಹೇಳಿದ್ದರು. ಅದರಂತೆ ಆಡಿದೆ’ ಎಂದರು.

‘ನನ್ನ ಬ್ಯಾಟಿಂಗ್ ಶೈಲಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಲು ಸುನೀಲ್ ಗಾವಸ್ಕರ್ ನೀಡಿದ್ದ ಸಲಹೆ ನೆರವಾಯಿತು. ಬ್ಯಾಕ್ ಲಿಫ್ಟ್ ನಲ್ಲಿ ಬ್ಯಾಟ್ ಎತ್ತರಕ್ಕೆ ಹಿಡಿಯುವ ನನ್ನ ರೂಢಿಯನ್ನು ಬದಲಿಸಿ, ತುಸು ಕೆಳಮಟ್ಟದಲ್ಲಿ ಬ್ಯಾಟ್ ಹಿಡಿಯುವಂತೆ ಹೇಳಿದ್ದರು. ಅವರ ಭುಜದ ಚಲನೆ ಮತ್ತು ಶೈಲಿಯನ್ನು ನಾನು ಅನುಕರಿಸಿದೆ‘ ಎಂದು ಮಯಂಕ್ ಹೇಳಿದರು.

ಹುಟ್ಟೂರಿನಲ್ಲಿ ಮಿಂಚಿದ ಪಟೇಲ್

ನ್ಯೂಜಿಲೆಂಡ್ ತಂಡದ ಎಡಗೈ ಸ್ಪಿನ್ನರ್ ಎಜಾಜ್ ಪಟೇಲ್ ಅವರಿಗೆ ಶುಕ್ರವಾರ ಅವಿಸ್ಮರಣೀಯ ದಿನವಾಯಿತು.

ತಾವು ಜನಿಸಿದ ಊರಿನಲ್ಲಿಯೇ ಟೆಸ್ಟ್ ಆಡುವ ಅವಕಾಶ ಪಡೆದ ಅವರು, ಭಾರತದ ಅಗ್ರಕ್ರಮಾಂಕದ ನಾಲ್ಕು ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡ ಸಾಧನೆಯನ್ನೂ ಮಾಡಿದರು.

‘ತವರಿನಂಗಳದಲ್ಲಿ ಆಡುವ ಕನಸಿತ್ತು. ಆದರೆ, ಪಂದ್ಯದ ಮೊದಲ ದಿನವೇ ಇಂತಹದೊಂದು ಸಾಧನೆ ಮಾಡಿದ್ದು ಅಪಾರ ಖುಷಿಯಾಗಿದೆ. ಆದರೆ ಇನ್ನೂ ಅರ್ಧ ಕೆಲಸ ಬಾಕಿಯಿದೆ. ತಂಡದ ಗೆಲುವಿಗೆ ಮತ್ತಷ್ಟು ಕಾಣಿಕೆ ನೀಡಬೇಕಿದೆ’ ಎಂದು ಪಟೇಲ್ ಹೇಳಿದರು.

ಅವರು ಮೊದಲ ದಿನದಾಟದಲ್ಲಿ ನಾಲ್ಕು ವಿಕೆಟ್‌ಗಳನ್ನು ಗಳಿಸಿದ್ದಾರೆ.

ಸ್ಕೋರ್ ಕಾರ್ಡ್

ಭಾರತ, ಮೊದಲ ಇನಿಂಗ್ಸ್ 4ಕ್ಕೆ 221 (70 ಓವರ್)

ಮಯಂಕ್ ಬ್ಯಾಟಿಂಗ್ 120 (246ಎ, 4X14, 6X4), ಗಿಲ್ ಸಿ ಟೇಲರ್ ಬಿ ಪಟೇಲ್ 44 (71ಎ, 4X7, 6X1), ಪೂಜಾರ ಬಿ ಪಟೇಲ್ 0 (5ಎ), ಕೊಹ್ಲಿ ಎಲ್‌ಬಿಡಬ್ಲ್ಯು ಬಿ ಪಟೇಲ್ 0(4ಎ), ಅಯ್ಯರ್ ಸಿ ಬ್ಲಂಡೆಲ್ ಬಿ ಪಟೇಲ್ 18 (41ಎ, 4X3), ಸಹಾ ಬ್ಯಾಟಿಂಗ್ 25 (53ಎ, 4X3, 6X1)

ಇತರೆ (ಬೈ 9, ಲೆಗ್‌ಬೈ 5) 14

ವಿಕೆಟ್ ಪತನ: 1–80 (ಶುಭಮನ್ ಗಿಲ್; 27.3), 2–80 (ಚೇತೇಶ್ವರ್ ಪೂಜಾರ; 29.2), 3–80 (ವಿರಾಟ್ ಕೊಹ್ಲಿ; 29.6), 4–160 (ಶ್ರೇಯಸ್ ಅಯ್ಯರ್; 47.4)

ಬೌಲಿಂಗ್: ಟಿಮ್ ಸೌಥಿ 15–5–29–0, ಕೈಲ್ ಜೆಮಿಸನ್ 9–2–30–0, ಎಜಾಜ್ ಪಟೇಲ್ 29–10–71–4, ವಿಲಿಯಂ ಸೋಮರ್‌ವಿಲ್ 8–0–46–0, ರಚಿನ್ ರವೀಂದ್ರ 4–0–20–0, ಡೆರಿಲ್ ಮಿಚೆಲ್ 5–3–9–0.

ಚರ್ಚೆಗೆ ಗ್ರಾಸವಾದ ವಿರಾಟ್ ವಿಕೆಟ್

ಮುಂಬೈ: ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ವಿರುದ್ಧ ನೀಡಲಾದ ಎಲ್‌ಬಿಡಬ್ಲ್ಯು ತೀರ್ಪಿನ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪರ–ವಿರೋಧ ಚರ್ಚೆಗಳು ನಡೆಯುತ್ತಿವೆ.

ಎಜಾಜ್ ಪಟೇಲ್ ಹಾಕಿದ 30ನೇ ಓವರ್‌ನ ಕೊನೆಯ ಎಸೆತದಲ್ಲಿ ರಕ್ಷಣಾತ್ಮಕವಾಗಿ ಆಡಲು ಯತ್ನಿಸಿದ ವಿರಾಟ್ ಪ್ಯಾಡ್‌ಗೆ ಚೆಂಡು ಬಡಿಯಿತು. ಬೌಲರ್ ಮನವಿಗೆ ಫೀಲ್ಡ್ ಅಂಪೈರ್ ನಿಲ್ ಚೌಧರಿ ಔಟ್ ತೀರ್ಪು ನೀಡಿದರು. ಆದರೆ ವಿರಾಟ್ ಕೊಹ್ಲಿ ಚೆಂಡು ಪ್ಯಾಡ್‌ಗೆ ತಗಲುವ ಮುನ್ನ ಬ್ಯಾಟ್ ಅಂಚು ಸವರಿದೆ ಎಂದುಕೊಂಡಿದ್ದ ವಿರಾಟ್, ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ (ಯುಡಿಆರ್‌ಎಸ್) ಮನವಿಗೆ ಮೊರೆ ಹೋದರು.

ಟಿವಿ ಅಂಪೈರ್ ವೀರೇಂದ್ರ ಶರ್ಮಾ ಹಲವು ಆಯಾಮಗಳಲ್ಲಿ ಚೆಂಡಿನ ಚಲನೆಯನ್ನು ಪರಿಶೀಲಿಸಿದರು. ಆದರೆ ಚೆಂಡು ಬ್ಯಾಟ್‌ಗೆ ತಾಗಿದ್ದು ಸ್ಪಷ್ಟವಾಗದ ಕಾರಣ ವಿರಾಟ್ ಅವರನ್ನು ಔಟ್ ಎಂದು ತೀರ್ಪು ನೀಡಿದರು. ಈ ಸಂದರ್ಭದಲ್ಲಿ ಅಸಮಾಧಾನಗೊಂಡ ವಿರಾಟ್, ಫೀಲ್ಡ್ ಅಂಪೈರ್ ನಿತಿನ್ ಮೆನನ್ ನತ್ತಯ ಚೌಧರಿಯವರೊಂದಿಗೆ ವಾದ ನಡೆಸಿದರು. ನಂತರ ಪೆವಿಲಿಯನ್‌ನತ್ತ ಮರಳಿದರು. ಬೌಂಡರಿ ಲೈನ್‌ಗೆ ಹಾಕಿದ ಜಾಹೀರಾತು ಪ್ಯಾಡ್‌ಗೆ ಬ್ಯಾಟ್‌ನಿಂದ ಹೊಡೆದು ಮುಂದೆ ಸಾಗಿದರು.

ಬಿಸಿಸಿಐ ಕಾರ್ಯದರ್ಶಿ ಪಡೆಗೆ ಶರಣಾದ ಗಂಗೂಲಿ ಬಳಗ!



ಸೌರವ್ ಗಂಗೂಲಿ



ಜಯ್ ಶಾ

ಕೋಲ್ಕತ್ತ (ಪಿಟಿಐ): ಭಾರತ ತಂಡದ ಮಾಜಿ ನಾಯಕ ಸೌರವ್ ಗಂಗೂಲಿಯ ಆಫ್‌ಸೈಡ್ ಡ್ರೈವ್ ಮತ್ತು ಸ್ಟೆಪ್ ಔಟ್ ಶಾಟ್‌ಗಳನ್ನು ಶುಕ್ರವಾರ ಕ್ರಿಕೆಟ್ ಅಭಿಮಾನಿಗಳು ಕಣ್ತುಂಬಿಕೊಂಡರು.

ಶನಿವಾರ ನಡೆಯಲಿರುವ ಬಿಸಿಸಿಐ ವಾರ್ಷಿಕ ಸಭೆಯ ಅಂಗವಾಗಿ ಏರ್ಪಡಿಸಲಾಗಿದ್ದ ಪ್ರದರ್ಶನ ಪಂದ್ಯದಲ್ಲಿ ಗಂಗೂಲಿ ನಾಯಕತ್ವದ ಅಧ್ಯಕ್ಷರ ಇಲೆವನ್ 1 ರನ್ ಅಂತರದಿಂದ ಜಯ್ ಶಾ ನೇತೃತ್ವದ ಕಾರ್ಯದರ್ಶಿಗಳ ಇಲೆವನ್ ವಿರುದ್ಧ ಹಿನ್ನಡೆ ಸಾಧಿಸಿತು. ಮಂಡಳಿಯ ವಿವಿಧ ಹುದ್ದೆಗಳಲ್ಲಿರುವ ಮಾಜಿ ಆಟಗಾರರೆಲ್ಲರೂ ಬ್ಯಾಟ್ ಹಿಡಿದು ಕಣಕ್ಕಿಳಿದಿದ್ದರು.

ಮೊದಲು ಬ್ಯಾಟಿಂಗ್ ಮಾಡಿದ ಕಾರ್ಯದರ್ಶಿ ಇಲೆವನ್ 15 ಓವರ್‌ಗಳಲ್ಲಿ 3 ವಿಕೆಟ್‌ಗಳ ನಷ್ಟಕ್ಕೆ 128 ರನ್ ಗಳಿಸಿತು. ಸೌರಾಷ್ಟ್ರದ ಜಯದೇವ್ ಶಾ 40 ಮತ್ತು ಖಜಾಂಚಿಯಾಗಿರುವ ಅರುಣ ಧುಮಾಲ್ 36 ರನ್ ಗಳಿಸಿದರು. ಕಾರ್ಯದರ್ಶಿ ಶಾ 10 ರನ್ ಗಳಿಸಿದರು ಮತ್ತು ನಂತರ ಗಂಗೂಲಿ ತಂಡದ ಎದುರು ಮೂರು ವಿಕೆಟ್ ಕೂಡ ಪಡೆದರು. ಭಾರತ ತಂಡದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್ ಗಂಗೂಲಿ ತಂಡದಲ್ಲಿ ಆಡಿದರು.

ಸಂಕ್ಷಿಪ್ತ ಸ್ಕೋರು: ಬಿಸಿಸಿಐ ಕಾರ್ಯದರ್ಶಿ ಇಲೆವನ್: 15 ಓವರ್‌ಗಳಲ್ಲಿ 3ಕ್ಕೆ 128 (ಜಯದೇವ್ ಶಾ ಗಾಯಗೊಂಡು ನಿವೃತ್ತಿ 40, ಅರುಣ ಧುಮಾಲ್ 36, ಜಯ್ ಶಾ ಔಟಾಗದೇ 10, ಸೌರವ್ ಗಂಗೂಲಿ 19ಕ್ಕೆ1), ಬಿಸಿಸಿಐ ಅಧ್ಯಕ್ಷರ ಇಲೆವನ್: 15 ಓವರ್‌ಗಳಲ್ಲಿ 5ಕ್ಕೆ 127 (ಸೌರವ್ ಗಂಗೂಲಿ ಗಾಯಗೊಂಡು ನಿವೃತ್ತಿ 35, ಮೊಹಮ್ಮದ್ ಅಜರುದ್ದೀನ್ 2, ಅವಿಷೇಕ್ ದಾಲ್ಮಿಯಾ 13, ಜಯ್ ಶಾ 58ಕ್ಕೆ3)

ಜೂನಿಯರ್ ಹಾಕಿ ವಿಶ್ವಕಪ್: ಫೈನಲ್‌ಗೆ ಜರ್ಮನಿ ತಂಡ

‘ಚಾಂಪಿಯನ್’ ಭಾರತಕ್ಕೆ ಆಘಾತ

ಭುವನೇಶ್ವರ (ಪಿಟಿಐ): ‘ಹಾಲಿ ಚಾಂಪಿಯನ್’ ಕೂಡ ಆಗಿರುವ ಆತಿಥೇಯ ಭಾರತ ತಂಡವು ಶುಕ್ರವಾರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಸೋತು ಹೊರಬಿದ್ದಿತು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡವು 2–4ರಿಂದ ಜರ್ಮನಿ ಎದುರು ಸೋತಿತು. ಇದರಿಂದಾಗಿ ಸತತ ಎರಡನೇ ಸಲ ಪ್ರಶಸ್ತಿ ಜಯಿಸುವ ಭಾರತ ತಂಡದ ಕನಸು ಕಮರಿತು.

ಆರಂಭದಿಂದಲೇ ಆಕ್ರಮಣಕಾರಿ ಶೈಲಿ ಆಟವಾಡಿದ ಜರ್ಮನಿ ಕೊನೆಯವರೆಗೂ ಪ್ರಾಬಲ್ಯ ಸಾದಿಸಿತು.

15ನೇ ನಿಮಿಷದಲ್ಲಿ ಕ್ಲೆನ್ಸ್ ಎರಿಕ್ ಗೋಲು ಹೊಡೆದು ತಂಡದ ಖಾತೆ ತೆರೆದರು. ಆರು ನಿಮಿಷಗಳ ನಂತರ ಫಿಲಿಪ್ ಹಾಲ್ಜ್‌ಮುಲ್ಲರ್ (21ನೇ ನಿ), ಹೆನೆಸ್ ಮುಲ್ಲರ್ (24ನೇ ನಿ) ಅವರು ಫೀಲ್ಡ್‌ಗೋಲ್‌ಗಳನ್ನು ಹೊಡೆದರು. 25ನೇ ನಿಮಿಷದಲ್ಲಿ ಕ್ರಿಸ್ಟೋಫರ್ ಕಟರ್ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದರು.

ಭಾರತದ ಸುದೀಪ್ ಚಿರ್ಮಾಕೊ (25ನೇ ನಿ) ಮತ್ತು ಬಾಬಿ ಸಿಂಗ್ ಧಾಮಿ (60ನೇ ನಿ) ತಲಾ ಒಂದು ಗೋಲು ಹೊಡೆದು ಸೋಲಿನ ಅಂತರ ಕಡಿಮೆಗೊಳಿಸಿದರು.

ಮೊದಲ ಸೆಮಿಫೈನಲ್‌ನಲ್ಲಿ ಫ್ರಾನ್ಸ್–ಅರ್ಜೆಂಟೀನಾ

ರೋಚಕ ಶೂಟೌಟ್‌ನಲ್ಲಿ ಬೆಲ್ಜಿಯಂ ತಂಡ ಸ್ಪೇನ್ ವಿರುದ್ಧ ಗೆಲುವು ಸಾಧಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಎರಡು ಗೋಲು ಗಳಿಸಿದ್ದವು. ನಾಲ್ಕನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಕುನಿಲ್ ಪಾವು ಅವರು ಗೋಲು ಗಳಿಸಿ ಸ್ಪೇನ್‌ಗೆ ಮುನ್ನಡೆ ತಂದುಕೊಟ್ಟರು. 24ನೇ ನಿಮಿಷದಲ್ಲಿ ಪೆನಾಲ್ಟಿ ಸ್ಟ್ರೋಕ್‌ನಲ್ಲೂ ಕುನಿಲ್ ಚೆಂಡನ್ನು ಗುರಿ ಮುಟ್ಟಿಸಿದರು.

ದ್ವಿತೀಯಾರ್ಧದಲ್ಲಿ ಬೆಲ್ಜಿಯಂ ತಿರುಗೇಟು ನೀಡಿತು. 33ನೇ ನಿಮಿಷದಲ್ಲಿ ಜೆರೆಮಿ ವಿಲ್ಬರ್ಸ್ ಮತ್ತು 56ನೇ ನಿಮಿಷದಲ್ಲಿ ತಿಬಿಯು ಸ್ಟಾಕ್‌ಬರೆಕ್ಸ್ ಅವರು ಸೊಗಸಾದ ಫೀಲ್ಡ್ ಗೋಲುಗಳ ಮೂಲಕ ಸಮಬಲ ಗಳಿಸಿಕೊಟ್ಟರು.

ಶೂಟೌಟ್‌ನಲ್ಲಿ ಬಿಯು ಸ್ಟಾಕ್‌ಬರೆಕ್ಸ್, ಜೆರೆಮಿ ವಿಲ್ಬರ್ಸ್, ತೊಬಿಯಾಸ್ ಬಿಕೆನ್ಸ್ ಮತ್ತು ರೋಮನ್ ಡುವೆಕಾಟ್ ಅವರು ಬೆಲ್ಜಿಯಂ ಪರವಾಗಿ ಯಶಸ್ಸು ಸಾಧಿಸಿದರು. ಸ್ಪೇನ್‌ನ ರಫೆಲ್ ವಿಲೋಂಗ, ಇಗ್ನೇಷಿಯೊ ಅಬಾಜೊ ಮತ್ತು ಜೆರಾರ್ಡ್ ಕ್ಲೆಪ್ಸ್ ಚೆಂಡನ್ನು ಗುರಿ ಸೇರಿಸಿದರೆ ಬೋರ್ಜಾ ಲಕಾಲಿ ಮೊದಲ ಅವಕಾಶದಲ್ಲೂ ಮ್ಯಾನ್ಯುಯೆಲ್ ರಾಡ್ರಿಗಸ್ ಕೊನೆಯ ಅವಕಾಶದಲ್ಲೂ ವೈಫಲ್ಯ ಕಂಡರು.



ಜರ್ಮನಿ ತಂಡದ ಜಯದ ಸಂಭ್ರಮ –ಪಿಟಿಐ ಚಿತ್ರ

ವೈದೇಹಿ ಸವಾಲು ಮೀರಿದ ಪ್ರಾಂಜಲ

ಮಹಿಳೆಯರ ಅಂತರರಾಷ್ಟ್ರೀಯ ಟೆನಿಸ್ ಟೂರ್ ಚಾಂಪಿಯನ್‌ಷಿಪ್: ಸೆಮಿಗೆ ಋತುಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಮೋಘ ಆಟವಾಡಿದ ಪ್ರಾಂಜಲ ಯಡ್ಲಪಲ್ಲಿ ಅವರು ಕೆಎಸ್‌ಎಲ್‌ಟಿಎ ಆಶ್ರಯದಲ್ಲಿ ನಡೆಯುತ್ತಿರುವ ಮಹಿಳೆಯರ ಐಟಿಎಫ್ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿದರು. ಅರನೇ ಶ್ರೇಯಾಂಕಿತೆ ವೈದೇಹಿ ಚೌಧರಿ ಅವರ ಸವಾಲನ್ನು ಮೀರಿದ ನಾಲ್ಕನೇ ಶ್ರೇಯಾಂಕದ ಪ್ರಾಂಜಲ 6-7 (3), 6-4, 6-4ರಲ್ಲಿ ಗೆಲುವು ಸಾಧಿಸಿದರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಶುಕ್ರವಾರ ನಡೆದ ಎರಡು ತಾಸು 27 ನಿಮಿಷಗಳ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 22 ವರ್ಷದ ಪ್ರಾಂಜಲ ಮೊದಲ ಸೆಟ್ ಸೋತಿದ್ದರು. ನಂತರ ಚೇತರಿಸಿಕೊಂಡು ಗೆಲುವಿನ ಹಾದಿಯಲ್ಲಿ ಮುನ್ನಡೆದರು.

ಆರಂಭದಲ್ಲೇ ಸರ್ವ್ ಕಳೆದುಕೊಂಡು ನಿರಾಸೆಗೊಂಡ ಪ್ರಾಂಜಲ 0–2ರ ಹಿನ್ನಡೆಯಲ್ಲಿದ್ದರು. ನಂತರ ಚೇತರಿಸಿಕೊಂಡರೂ ತಪ್ಪುಗಳನ್ನು ಎಸಗಿದ್ದರಿಂದ ಎದುರಾಳಿಗೆ ಪಾಯಿಂಟ್ ಗಳಿಸಲು ಅನುಕೂಲವಾಯಿತು.

ಸೆಟ್‌ನ ಫಲಿತಾಂಶ ನಿರ್ಣಯಕ್ಕೆ ಟೈ ಬ್ರೇಕರ್ ಮೊರೆಹೋಗಬೇಕಾಯಿತು. ಅದರಲ್ಲಿ ವೈದೇಹಿ ಯಶಸ್ಸು ಸಾಧಿಸಿದರು.

ಎರಡನೇ ಸೆಟ್ ಜಿದ್ದಾಜಿದ್ದಿಯ ಹಣಾಹಣಿಗೆ ಸಾಕ್ಷಿಯಾಯಿತು. ಒಂಬತ್ತನೇ ಗೇಮ್ ವರೆಗೆ ಇಬ್ಬರೂ ಪಟ್ಟು ಬಿಡದೆ ಕಾದಾಡಿದರು. ನಂತರ ಮೇಲುಗೈ ಸಾಧಿಸಿದ ಪ್ರಾಂಜಲ 6–4ರಲ್ಲಿ ಸೆಟ್ ತಮ್ಮದಾಗಿಸಿಕೊಂಡರು.

ನಿರ್ಣಾಯಕ ಸೆಟ್‌ನಲ್ಲೂ ಪ್ರಾಂಜಲ್ ತಪ್ಪುಗಳನ್ನು ಎಸಗಿದರು. ಹೀಗಾಗಿ 2–3ರ ಹಿನ್ನಡೆ ಅನುಭವಿಸಿದರು. ಮುಂದಿನ ಮೂರು ಗೇಮ್‌ಗಳಲ್ಲಿ ಗೆಲುವು ಸಾಧಿಸಿದ ಅವರು 5–3ರಲ್ಲಿ ಮುನ್ನುಗ್ಗಿದರು. ಗುಜರಾತ್‌ನ ವೈದೇಹಿ ಚೆಂಡನ್ನು ನೆಟ್ ಮೇಲೆ ಹಾಕಿ ಕೊನೆಯ ಎರಡು ಪಾಯಿಂಟ್‌ಗಳನ್ನು ಕಳೆದುಕೊಂಡರು. ಇದರಿಂದ ಪ್ರಾಂಜಲ ಹಾದಿ ಸುಗಮವಾಯಿತು.

ಅಗ್ರ ಶ್ರೇಯಾಂಕದ ಋತುಜಾ ಭೋಸಲೆ ಅವರಿಗೆ ಎರಡನೇ ಸೆಟ್‌ನಲ್ಲಿ ಕಠಿಣ ಸವಾಲು ಎದುರಾಯಿತು. ಅರ್ಹತಾ ಸುತ್ತಿನ ಮೂಲಕ ಬಂದಿದ್ದ ಪ್ರತ್ಯೂಷಾ ರಾಚಪುಡಿ ಎದುರಿನ ಪಂದ್ಯದಲ್ಲಿ ಅವರು 6-0, 6-3ರಲ್ಲಿ ಜಯ ಸಾಧಿಸಿದರು. ನಾಲ್ಕರ ಘಟ್ಟದ ಪಂದ್ಯದಲ್ಲಿ ಅವರು ಮೂರನೇ ಶ್ರೇಯಾಂಕದ ಸೌಜನ್ಯ ಬಾವಿಸೆಟ್ಟಿ ಅವರನ್ನು ಎದುರಿಸುವರು. ಏಳನೇ ಶ್ರೇಯಾಂಕಿತೆ, ಕೊರಿಯಾದ ಸೊ ರಾ ಲೀ ವಿರುದ್ಧದ ಪಂದ್ಯದಲ್ಲಿ ಸೌಜನ್ಯ 6-0, 6-4ರ ಜಯ ಸಾಧಿಸಿದ್ದರು.

ಅರ್ಹತಾ ಸುತ್ತಿನಲ್ಲಿ ಗೆದ್ದು ಮುಖ್ಯ ಸುತ್ತು ಪ್ರವೇಶಿಸಿದ್ದ ಶ್ರೀವಲ್ಲಿ ರಶ್ಮಿಕಾ ಭಾಮಿಪತಿ ಮತ್ತು ಆಕಾಂಕ್ಷ ನಿಟ್ಟುರೆ ಕೂಡ ಪ್ರಬಲ ಪೈಪೋಟಿ ನಡೆಸಿದರು. ಶ್ರೀವಲ್ಲಿ 7-6 (4), 6-4ರಲ್ಲಿ ಜಯ ಗಳಿಸಿದರು.



ಸೊ ರಾ ಲೀ ಎದುರಿನ ಪಂದ್ಯದಲ್ಲಿ ಚೆಂಡನ್ನು ರಿಟರ್ನ್ ಮಾಡಿದ ಸೌಜನ್ಯ ಬಾವಿಸೆಟ್ಟಿ –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ

ವೈದೇಹಿ–ಮಿಹಿಕಾ ಜೋಡಿಗೆ ಜಯ

ಡಬಲ್ಸ್‌ನಲ್ಲಿ ವೈದೇಹಿ ಜೋಡಿ ಪಾರಮ್ಯ ಮೆರೆಯಿತು. ಮಿಹಿಕಾ ಯಾದವ್ ಅವರ ಜೊತೆಗೂಡಿ ಆಡಿದ ವೈದೇಹಿ ನಾಲ್ಕನೇ ಶ್ರೇಯಾಂಕದ ಶರ್ಮಡಾ ಬಾಲು ಮತ್ತು ಶ್ರವ್ಯ ಶಿವಾನಿ ಚಿಲಕಪುಡಿ ಅವರನ್ನು 6-1, 3-6, 10-7 ರಲ್ಲಿ ಮಣಿಸಿದರು. ಸಾಯಿ ಸಂಹಿತಾ–ಸಾದಿಕ್ ಸೋಹಾ ಮತ್ತು ಸೌಜನ್ಯ ಬಾವಿಸೆಟ್ಟಿ–ಋತುಜಾ ಭೋಸಲೆ ಜೋಡಿಯ ಹಣಾಹಣಿಗೆ ಮಳೆ ಅಡ್ಡಿಯಾಯಿತು. ಪಂದ್ಯ ನಿಂತಾಗ ಸೌಜನ್ಯ–ಋತುಜಾ 5–4ರ ಮುನ್ನಡೆಯಲ್ಲಿದ್ದರು.

ರೊನಾಲ್ಡೊ 800 ಗೋಲು



ಕ್ರಿಸ್ಟಿಯಾನೊ ರೊನಾಲ್ಡೊ

ಮ್ಯಾಂಚೆಸ್ಟರ್ (ಎಎಫ್‌ಪಿ): ಮ್ಯಾಂಚೆಸ್ಟರ್ ಯುನೈಟೆಡ್‌ಗೆ ಗೆಲುವು ತಂದುಕೊಟ್ಟ ಕ್ರಿಸ್ಟಿಯಾನೊ ರೊನಾಲ್ಡೊ 800ನೇ ಗೋಲು ಗಳಿಸಿದ ದಾಖಲೆಗೆ ಪಾತ್ರರಾದರು. ಗುರುವಾರ ರಾತ್ರಿ ನಡೆದ ಪ್ರೀಮಿಯರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಅವರ ಎರಡು ಗೋಲುಗಳ ಬಲದಿಂದ ಆರ್ಸೆನಲ್ ವಿರುದ್ಧ ಮ್ಯಾಂಚೆಸ್ಟರ್ ಯುನೈಟೆಡ್ 3–2ರಿಂದ ಗೆಲುವು ಸಾಧಿಸಿತು.

13ನೇ ನಿಮಿಷದಲ್ಲಿ ಎಮಿಲಿ ಸ್ಮಿತ್ ಗಳಿಸಿದ ಗೋಲಿನೊಂದಿಗೆ ಆರ್ಸೆನಲ್ ಮುನ್ನಡೆ ಸಾಧಿಸಿತ್ತು. 34ನೇ ನಿಮಿಷದಲ್ಲಿ ಬ್ರೂನೊ ಫೆರ್ನಾಂಡಿಸ್ ಅವರು ಮ್ಯಾಂಚೆಸ್ಟರ್‌ಗೆ ಸಮಬಲ ತಂದುಕೊಟ್ಟರು. 52ನೇ ನಿಮಿಷದಲ್ಲಿ ಕ್ರಿಸ್ಟಿಯಾನೊ ರೊನಾಲ್ಡೊ ಗಳಿಸಿದ ಗೋಲಿನೊಂದಿಗೆ ತಂಡ ಮುನ್ನಡೆ ಸಾಧಿಸಿತು. ಆದರೆ ಎರಡು ನಿಮಿಷಗಳ ನಂತರ ಮಾರ್ಟಿನ್ ಒಡ್ಗಾರ್ಡ್ ಅವರು ಆರ್ಸೆನಲ್‌ಗೆ ಸಮಬಲ ಗಳಿಸಿಕೊಟ್ಟರು. 70ನೇ ನಿಮಿಷದಲ್ಲಿ ಮ್ಯಾಂಚೆಸ್ಟರ್‌ಗೆ ರೊನಾಲ್ಡೊ ಗೆಲುವಿನ ಗೋಲು ತಂದುಕೊಟ್ಟರು.

ರಿಯಲ್ ಮ್ಯಾಡ್ರಿಡ್ ಪರ 450 ಗೋಲು ಗಳಿಸಿರುವ ರೊನಾಲ್ಡೊ ಯುವೆಂಟಸ್‌ಗಾಗಿ 101, ಸ್ಪೋರ್ಟಿಂಗ್ ಲಿಸ್ಬನ್‌ಗಾಗಿ ಐದು ಗೋಲು ಗಳಿಸಿದ್ದಾರೆ. 115 ಅಂತರರಾಷ್ಟ್ರೀಯ ಗೋಲುಗಳು ಅವರ ಖಾತೆಯಲ್ಲಿವೆ.

ಪಂಜಾಬ್ ಪೊಲೀಸ್ ಜಯಭೇರಿ

ಬೆಂಗಳೂರು: ಭಾರತ ತಂಡದ ಸ್ಟ್ರೈಕರ್ ರಮಣ್‌ದೀಪ್ ಸಿಂಗ್ ನಾಯಕತ್ವದ ಪಂಜಾಬ್ ಪೊಲೀಸ್ ತಂಡ ನಗರದಲ್ಲಿ ನಡೆಯುತ್ತಿರುವ ಅಖಿಲ ಭಾರತ ಪೊಲೀಸ್ ಹಾಕಿ ಟೂರ್ನಿಯಲ್ಲಿ ಶುಕ್ರವಾರ ಭರ್ಜರಿ ಜಯ ಗಳಿಸಿತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಕಿ ಕ್ರೀಡಾಂಗಣದಲ್ಲಿ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಪಂಜಾಬ್ ಪೊಲೀಸ್ ತಂಡ ಉತ್ತರಾಖಂಡ ಪೊಲೀಸ್ ತಂಡವನ್ನು 17–0ರಲ್ಲಿ ಮಣಿಸಿತು. ರಮಣ್‌ದೀಪ್ ಸಿಂಗ್ ಐದು (5, 7, 37, 52 ಮತ್ತು 55ನೇ ನಿಮಿಷ) ಗೋಲು ಗಳಿಸಿದರು. ಹರದೀಪ್ ಸಿಂಗ್ ಕೂಡ ಐದು (9, 21, 26, 48, 60) ಗೋಲು ಗಳಿಸಿದರು. ವರಿಂದರ್ ಸಿಂಗ್ (20, 24, 45ನೇ ನಿ) ಕರಣ್‌ಬೀರ್ ಸಿಂಗ್ (11ನೇ ನಿ), ಸಿಮ್ರಾನ್ ಜೀತ್ ಸಿಂಗ್ (12ನೇ ನಿ), ಕನ್ವರ್‌ಜೀತ್ ಸಿಂಗ್ (22ನೇ ನಿ), ಬಲ್ವಿಂದರ್ ಸಿಂಗ್ (51ನೇ ನಿ) ಕೂಡ ಮಿಂಚಿದರು. ಚಂಡೀಗಢ ಪೊಲೀಸ್ ತಂಡ ಮಧ್ಯಪ್ರದೇಶ ಪೊಲೀಸ್ ವಿರುದ್ಧ 4–2ರಲ್ಲಿ, ರಾಜಸ್ಥಾನ ಪೊಲೀಸ್ ಕೇರಳ ಪೊಲೀಸ್ ವಿರುದ್ಧ 12–1ರಲ್ಲಿ, ‘ಸಶಸ್ತ್ರ ಸೀಮಾ ಬಲ್’ ಗುಜರಾತ್ ಪೊಲೀಸ್ ವಿರುದ್ಧ 9–0ಯಿಂದ ಜಯ ಗಳಿಸಿತು.

ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್: ಸಿಂಧುಗೆ ಸೋಲು

ಕಿದಂಬಿ ಶ್ರೀಕಾಂತ್‌ಗೆ ನಿರಾಶೆ

ಬಾಲಿ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ನಲ್ಲಿ ಸೋತು ಹೊರಬಿದ್ದರು.

ಶುಕ್ರವಾರ ನಡೆದ ಬಿ ಗುಂಪಿನ ಮೂರನೇ ಪಂದ್ಯದಲ್ಲಿ ಶ್ರೀಕಾಂತ್ 19–21, 14–21 ರಿಂದ ಮಲೇಷ್ಯಾದ ಲೀ ಝಿಲ್ ಜಿಯಾ ವಿರುದ್ಧ ಸೋತರು. 37 ನಿಮಿಷ ನಡೆದ ಪಂದ್ಯದಲ್ಲಿ ಶ್ರೀಕಾಂತ್ ಶರಣಾದರು.

ಈ ಋತುವಿನಲ್ಲಿ ಶ್ರೀಕಾಂತ್ ಅವರು ಲೀ ಎದುರು ಎರಡನೇ ಬಾರಿ ಸೋತಿದ್ದಾರೆ. ಈಚೆಗೆ ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿಯೂ ಶ್ರೀಕಾಂತ್ ಲೀ ಎದುರು ಪರಾಭವಗೊಂಡಿದ್ದರು.

ಪಂದ್ಯದ ಮೊದಲ ಗೇಮ್‌ನಲ್ಲಿ ಶ್ರೀಕಾಂತ್ ಆರಂಭದಲ್ಲಿಯೇ 0–3ರ ಹಿನ್ನಡೆ ಅನುಭವಿಸಿದರು. ಆದರೆ ಪುಟಿದೆದ್ದ ಅವರು 9–8ರ ಮುನ್ನಡೆ ಸಾಧಿಸಿದರು. ಅರ್ಧವಿರಾಮದ ವೇಳೆಗೆ ಲೀ 11–9ರ ಮುನ್ನಡೆ ಸಾಧಿಸಿದರು. ನಂತರದ ಆಟ ತುರುಸಿನಿಂದ ಕೂಡಿತ್ತು. ಸತತ ಪಾಯಿಂಟ್‌ಗಳೊಂದಿಗೆ ಶ್ರೀಕಾಂತ್ 17–15ರ ಮುನ್ನಡೆ ಗಳಿಸಿದ್ದರು. ಆದರೆ ಲೀ ಚುರುಕಿನ ಆಟದ ಮೂಲಕ ಮೇಲುಗೈ ಸಾಧಿಸಿದರು.

ಎರಡನೇ ಗೇಮ್‌ನಲ್ಲಿ ಶ್ರೀಕಾಂತ್ 7–3ರ ಮುನ್ನಡೆ ಸಾಧಿಸಿ, ತಿರುಗೇಟು ನೀಡುವತ್ತ ಹೆಜ್ಜೆಯಿಟ್ಟಿದ್ದವು. ಈ ಹಂತದಲ್ಲಿ ಲೀ ಮತ್ತೆ ತಿರುಗೇಟು ಕೊಟ್ಟರು.

ಶ್ರೀಕಾಂತ್‌ಗೆ ಕಠಿಣ ಸವಾಲೊಡ್ಡಿದರು. 13–9ರ ಮುನ್ನಡೆ ಸಾಧಿಸುವಲ್ಲಿ ಲೀ ಯಶಸ್ವಿಯಾದರು. ಇದರ ನಂತರ ಶ್ರೀಕಾಂತ್ ಮಂಕಾದರು.

ಸಿಂಧುಗೆ ಸೋಲು: ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ಪಿ.ವಿ. ಸಿಂಧು ಗುಂಪು ಹಂತದ ಕೊನೆಯ ಪಂದ್ಯದಲ್ಲಿ ನಿರಾಸೆ ಅನುಭವಿಸಿದರು. ಶುಕ್ರವಾರದ ಹಣಾಹಣಿಯಲ್ಲಿ ಥಾಯ್ಲೆಂಡ್‌ನ ಪರ್ನಾಪಿ ಚೊಚೊವಾಂಗ್ ಎದುರು ಸಿಂಧು 12–21, 21–19, 14–21ರಲ್ಲಿ ಸೋತರು.



ಮಲೇಷ್ಯಾದ ಲೀ ಝೀ ಜೆಯಾ ಆಟ –ಎಎಫ್‌ಪಿ ಚಿತ್ರ

ಚೀನಾ–ಲಾವೋಸ್ ರೈಲು ಆರಂಭ

ಬೀಜಿಂಗ್ /ವಿಯೆಂಟಿಯಾನ್ (ಪಿಟಿಐ): ಬೆಲ್ಟ್ ಆ್ಯಂಡ್ ರೋಡ್ ಇನಿಶಿಯೇಟಿವ್ (ಬಿಆರ್‌ಐ) ಯೋಜನೆಯಡಿ ಚೀನಾವು ಲಾವೋಸ್ ದೇಶಕ್ಕೆ ಶುಕ್ರವಾರ ತನ್ನ ಮೊದಲ ಗಡಿಯಾಚೆಗಿನ (ಅಂತರ ರಾಷ್ಟ್ರೀಯ) ರೈಲನ್ನು ಆರಂಭಿಸಿತು.

ಆಗ್ನೇಯ ಏಷ್ಯಾದ ಸಣ್ಣ ದೇಶವಾದ ಲಾವೋಸ್ ಅನ್ನು ಒಂದು ಪ್ರಾದೇಶಿಕ ಸಂಪರ್ಕ ಹೊಂದಿದ ಕೇಂದ್ರವನ್ನಾಗಿಸಲು ಇದು ಸಹಾಯಕವಾಗಿದೆ ಎಂದು ಚೀನಾ ಹೇಳಿದೆ.

ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಮತ್ತು ಲಾವೋಸ್‌ನ ಥೋಂಗ್ಲೌನ್ ಸಿಸೌಲಿತ್ ಅವರು ಜಂಟಿಯಾಗಿ ಆನ್ ಲೈನ್ ಮೂಲಕ ಚೀನಾ–ಲಾವೋಸ್ ರೈಲು ಮಾರ್ಗದ ಉದ್ಘಾಟನೆಗೆ ಸಾಕ್ಷಿಯಾದರು.

ಗಡಿಯಾಚೆಗಿನ ರೈಲು ಮಾರ್ಗದ ಅಧಿಕೃತ ಉದ್ಘಾಟನೆಯ ನಂತರ ಚೀನಾ–ಲಾವೋಸ್ ರೈಲ್ವೆಯ ಮೊದಲ ರೈಲು ವಿಯೆಂಟಿಯಾನ್‌ನಿಂದ ಹೊರಟಿತು. 1,035 ಕಿ.ಮೀ. ಉದ್ದದ ರೈಲು ಮಾರ್ಗ ಇದಾಗಿದ್ದು, ಸಂಪೂರ್ಣ ವಿದ್ಯುಚ್ಛಕ್ತಿಯಿಂದ ಚಲಿಸುವ ರೈಲು 10 ಗಂಟೆಯ ಅವಧಿಯಲ್ಲಿ ಚೀನಾದ ಯುನಾನ್ ಪ್ರಾಂತ್ಯದಿಂದ ವಿಯೆಂಟಿಯಾನ್ ತಲುಪುತ್ತದೆ ಎಂದು ಸರ್ಕಾರಿ ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಲಾವೋಸ್ ಚೀನಾದ ಹೊರತಾಗಿ ವಿಯೆಟ್ನಾಂ, ಥಾಯ್ಲೆಂಡ್, ಮ್ಯಾನ್ಮಾರ್ ಮತ್ತು ಕಾಂಬೋಡಿಯಾ ದೇಶಗಳೊಂದಿಗೆ ತನ್ನ ಗಡಿಗಳನ್ನು ಹಂಚಿಕೊಂಡಿದೆ. ಇವುಗಳಿಗೂ ರೈಲು ಮಾರ್ಗವನ್ನು ವಿಸ್ತರಿಸುವಂತೆ ಲಾವೋಸ್ ಬೀಜಿಂಗ್‌ಗೆ ಕೋರಿದೆ.

ಇರಾಕ್: ಐಸಿಸ್ ಉಗ್ರರ ದಾಳಿ, 12 ಮಂದಿ ಸಾವು

ಇರ್ಬಿಲ್, ಇರಾಕ್ (ಎಪಿ): ಉತ್ತರ ಇರಾಕ್‌ನ ಗ್ರಾಮವೊಂದರ ಮೇಲೆ ಇಸ್ಲಾಮಿಕ್ ಸ್ಟೇಟ್ (ಐಸಿಸ್‌ಎ) ಉಗ್ರರು ನಡೆಸಿದ ದಾಳಿಯಲ್ಲಿ ಕುರ್ದಿಷ್ ಪಡೆಗಳ ಸೈನಿಕರು ಸೇರಿದಂತೆ 12 ಮಂದಿ ಮೃತಪಟ್ಟಿದ್ದಾರೆ ಎಂದು ಕುರ್ದಿಶ್ ಮಾಧ್ಯಮ ಶುಕ್ರವಾರ ವರದಿ ಮಾಡಿದೆ.

ಕುರ್ದಿಶ್ ಪೇಶ್ಮೆರ್ಗಾ ಪಡೆಯೊಂದಿಗಿನ ಸಂಘರ್ಷದಿಂದಾಗಿ ಐಸಿಸ್ ಉಗ್ರರು ಮಖ್‌ಮೌರ್ ಪ್ರದೇಶದ ಗ್ರಾಮವೊಂದರ ಮೇಲೆ ಗುರುವಾರ ತಡರಾತ್ರಿ ದಾಳಿ ನಡೆಸಿದ್ದಾರೆ. ಮೃತರಲ್ಲಿ ಒಂಬತ್ತು ಮಂದಿ ಕುರ್ದಿಶ್ ಪಡೆಯ ಸೈನಿಕರು ಮತ್ತು ಮೂವರು ನಾಗರಿಕರು ಸೇರಿದ್ದಾರೆ ಎಂದು ಖಾಸಗಿ ವಾಹಿನಿ ರುಡಾವ್ ತನ್ನ ವೆಬ್‌ಸೈಟ್‌ನಲ್ಲಿ ಹೇಳಿದೆ.

ದಾಳಿಯ ಬಗ್ಗೆ ಉಗ್ರರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಬಿಎಫ್‌ಸಿಗೆ ಮುಂಬೈ ಸವಾಲು

ಬ್ಯಾಂಬೊಲಿಮ್ (ಪಿಟಿಐ): ಅಮೋಘ ಆರಂಭ ಕಂಡರೂ ನಂತರ ಮುಗ್ಗರಿಸಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಈಗ ಮತ್ತೊಂದು ಸವಾಲಿಗೆ ಸಜ್ಜಾಗಿದೆ.

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಪಂದ್ಯದಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಶನಿವಾರ ಮುಂಬೈ ಸಿಟಿ ಎಫ್‌ಸಿಯನ್ನು ಎದುರಿಸಲಿದೆ. ಕೇರಳ ಬ್ಲಾಸ್ಟರ್ಸ್ ಎದುರು ನಡೆದ ಹಿಂದಿನ ಪಂದ್ಯವನ್ನು ಬಿಎಫ್‌ಸಿ 1–1ರಲ್ಲಿ ಡ್ರಾ ಮಾಡಿಕೊಂಡಿತ್ತು. ಹಾಲಿ ಚಾಂಪಿಯನ್ ಮುಂಬೈ 5–1ರಲ್ಲಿ ಎಟಿಕೆ ಮೋಹನ್ ಬಾಗನ್ ವಿರುದ್ಧ ಜಯ ಗಳಿಸಿ ಆತ್ಮವಿಶ್ವಾಸದಲ್ಲಿದೆ.

ಬಿಎಫ್‌ಸಿ ಈ ಪಂದ್ಯದಲ್ಲೂ ಮಿಡ್ ಫೀಲ್ಡರ್ ಲಿಯಾನ್ ಆಗಸ್ಟಿನ್ ಅವರ ಅನುಪಸ್ಥಿತಿಯಲ್ಲಿ ಕಣಕ್ಕೆ ಇಳಿಯಲಿದೆ. ಪಂದ್ಯ ರಾತ್ರಿ 9.30ಕ್ಕೆ ನಡೆಯಲಿದೆ. ಮೊದಲ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಮತ್ತು ಎಫ್‌ಸಿ ಗೋವಾ ತಂಡಗಳು ಸೆಣಸಲಿವೆ.

ಈ ಪಂದ್ಯ ರಾತ್ರಿ 7.30ಕ್ಕೆ ನಡೆಯಲಿದ್ದು ಬಿಎಫ್‌ಸಿ–ಮುಂಬೈ **ಡ್ರಾ ಪಂದ್ಯದಲ್ಲಿ ಚೆನ್ನೈಯಿನ್:** ಶುಕ್ರವಾರ ರಾತ್ರಿ ನಡೆದ ಚೆನ್ನೈಯಿನ್ ಎಫ್‌ಸಿ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ನಡುವಿನ ಪಂದ್ಯ ಗೋಲು ರಹಿತ ಡ್ರಾದಲ್ಲಿ ಕೊನೆಗೊಂಡಿತು.

ಈ ಬಾರಿ ಬಿಎಫ್‌ಸಿಯ ಹಾದಿ

- ಮೊದಲ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ 4–2ರ ಜಯ
- ಎರಡನೇ ಪಂದ್ಯದಲ್ಲಿ ಒಡಿಶಾ ಎಫ್‌ಸಿ ವಿರುದ್ಧ 1–3ರಲ್ಲಿ ಸೋಲು
- ಮೂರನೇ ಪಂದ್ಯ: ಕೇರಳ ಬ್ಲಾಸ್ಟರ್ಸ್ ಜೊತೆ 1–1 ಡ್ರಾ



ಸುನಿಲ್ ಚೆಟ್ರಿ

ಫುಟ್‌ಬಾಲ್: ಕಿಕ್‌ಸ್ಟಾರ್ಟ್ ಜಯಭೇರಿ

ಬೆಂಗಳೂರು: ಧನುಷ್, ಪ್ರಿನ್ಸ್‌ವಿಲ್ ಮತ್ತು ಸುಧೀರ್ ಗಳಿಸಿದ ತಲಾ ಎರಡು ಗೋಲುಗಳ ಬಲದಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಗೆಲುವು ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗನದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ 7–0ಯಿಂದ ಎಡಿಇ ಎಫ್‌ಸಿಯನ್ನು ಮಣಿಸಿತು. ಡಿ.ಧನುಷ್ 34 ಮತ್ತು 89ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಪ್ರಿನ್ಸ್‌ವಿಲ್ ಎಮಾಕ 36 ಹಾಗೂ 66ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರೆ ಸುಧೀರ್ ಕೋಟಿಕೇಲ 73 ಮತ್ತು 80ನೇ ನಿಮಿಷಗಳಲ್ಲಿ ಯಶಸ್ಸು ಕಂಡರು. ಒಂದು ಗೋಲು ಅಂಕಿತ್ (58ನೇ ನಿ) ಅವರಿಂದ ಬಂತು.

ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ಎದುರಿನ ಪಂದ್ಯದಲ್ಲಿ ಎಎಸ್‌ಸಿ ಮತ್ತು ಸೆಂಟರ್ ಎಫ್‌ಸಿ 1–0 ಅಂತರದಲ್ಲಿ ಜಯ ಗಳಿಸಿತು. 64ನೇ ನಿಮಿಷದಲ್ಲಿ ಸರೋಜ್ ರಾಯ್ ಪಂದ್ಯದ ಏಕೈಕ ಗೋಲು ಗಳಿಸಿದರು.

ಕರ್ನಾಟಕ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶಾಲ್ ಓಣಾಟ್ ಮತ್ತು ಜಾಸ್ಪರ್ ಅವರ ಅಮೋಘ ಶತಕಗಳ ಬಲದಿಂದ ಕರ್ನಾಟಕ ತಂಡ 19 ವರ್ಷದೊಳಗಿನವರ ಕೂಚ್ ಬೆಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಇನಿಂಗ್ಸ್ ಜಯ ಸಾಧಿಸಿತು.

ವಿಶಾಖಪಟ್ಟಣದ ಕಂದುಕೂರಿ ಕ್ರಿಕೆಟ್ ಅಕಾಡೆಮಿಯ ಅಂಗಣದಲ್ಲಿ ಶುಕ್ರವಾರ ಮುಕ್ತಾಯಗೊಂಡ ಪಂದ್ಯದಲ್ಲಿ ಕರ್ನಾಟಕ ತಂಡ ಜಮ್ಮು ಮತ್ತು ಕಾಶ್ಮೀರ ವಿರುದ್ಧ ಇನಿಂಗ್ಸ್ ಹಾಗೂ 210 ರನ್‌ಗಳಿಂದ ಗೆಲುವು ಸಾಧಿಸಿತು.

ಜಮ್ಮು ಮತ್ತು ಕಾಶ್ಮೀರವನ್ನು ಮೊದಲ ಇನಿಂಗ್ಸ್‌ನಲ್ಲಿ 114 ರನ್‌ಗಳಿಗೆ ಕೆಡವಿದ ಕರ್ನಾಟಕ ನಾಲ್ಕು ವಿಕೆಟ್‌ಗಳಿಗೆ 517 ರನ್ ಗಳಿಸಿತ್ತು. ವಿಶಾಲ್ ಔಟಾಗದೆ 252 (425 ಎಸೆತ, 37 ಬೌಂಡರಿ) ಗಳಿಸಿದ್ದರು. ಜಾಸ್ಪರ್ 148 (269 ಎ, 24 ಬೌಂ, 1 ಸಿಕ್ಸರ್) ರನ್ ಕಲೆ ಹಾಕಿದ್ದರು. ಯಶೋವರ್ಧನ್ ಪತಾಂತಪ್ (50; 53 ಎ, 9 ಬೌಂ, 1 ಸಿ) ಅರ್ಧಶತಕ ಸಿಡಿಸಿದ್ದರು.

ಎರಡನೇ ಇನಿಂಗ್ಸ್‌ನಲ್ಲಿ ಜಮ್ಮು ಮತ್ತು ಕಾಶ್ಮೀರ 193 ರನ್‌ಗಳಿಗೆ ಪತನ ಕಂಡಿತು.

ಸಂಕ್ಷಿಪ್ತ ಸ್ಕೋರು: ಜಮ್ಮು ಮತ್ತು ಕಾಶ್ಮೀರ: ಮೊದಲ ಇನಿಂಗ್ಸ್: 55.3 ಓವರ್‌ಗಳಲ್ಲಿ 114 (ಮಯಮ್ಮದ್ ಮಂಜಿರ್ 41; ಆದಿತ್ಯ ನಾಯರ್ 33ಕ್ಕೆ2, ಶಶಿಕುಮಾರ್ 25ಕ್ಕೆ4, ರಾಹುಲ್ ಪ್ರಸನ್ನ 14ಕ್ಕೆ2); ಎರಡನೇ ಇನಿಂಗ್ಸ್: 104.4 ಓವರ್‌ಗಳಲ್ಲಿ 193 (ಮೊಮೀಮ್ ಮುಜಾಫರ್ 44, ಮೊಹಮ್ಮದ್ ಮಂಜಿರ್ 68; ಆದಿತ್ಯ ನಾಯರ್ 36ಕ್ಕೆ2, ಶಶಿಕುಮಾರ್ 47ಕ್ಕೆ6); **ಕರ್ನಾಟಕ: ಮೊದಲ ಇನಿಂಗ್ಸ್:** 136.2 ಓವರ್‌ಗಳಲ್ಲಿ 517 ಡಿಕ್ಲೇರ್ (ವಿಶಾಲ್ ಓಣಾಟ್ ಔಟಾಗದೆ 252, ಜಾಸ್ಪರ್ ಇಜೆ 148, ಯಶೋವರ್ಧನ್ ಪರಾಂತಪ್ 50, ಸ್ಮರಣ್ 23). **ಫಲಿತಾಂಶ:** ಕರ್ನಾಟಕಕ್ಕೆ ಇನಿಂಗ್ಸ್ ಮತ್ತು 210 ರನ್‌ಗಳ ಜಯ.

ಬೆಂಗಳೂರು ರೇಸ್

ಸ್ಕಾಫನ್‌ಬರ್ಗ್ ಗೆಲ್ಲುವ ನಿರೀಕ್ಷೆ

ಕ್ಲಾಸಿಕ್ ಸ್ಟೋರಿ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಸ್ಕಾಫನ್‌ಬರ್ಗ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಪ್ರೌಡ್‌ವಿಷ್ 8, ಸದರ್ನ್ ಪವರ್ 7, ಕಮಾಂಡ್‌ಪೋಸ್ಟ್ 1
2ನೇ ರೇಸ್: ಮೈಟಿ ರೆಡ್ 4, ಸೈಂಟ್‌ಹುಡ್ 5, ಲೆಜೆಂಡರಿ ಪ್ರಿನ್ಸೆಸ್ 6
3ನೇ ರೇಸ್: ಮಾರ್ಗನೈಟ್ 12, ರೂಲ್ ಆಫ್ ಲಾ 2, ಸೀಕ್ರೆಟ್ ಸೌರ್ಸ್ 6
4ನೇ ರೇಸ್: ಓಸ್ವಾಲ್ಡ್ 4, ಮಿಲ್‌ಬ್ರೂಕ್ 7, ಮ್ಯಾಲೋರಿ 6
5ನೇ ರೇಸ್: ಸ್ಕಾಫನ್‌ಬರ್ಗ್ 3, ಆಚೆನ್ 2, ಸೆಟ್ ಟು ವಿನ್ 1
6ನೇ ರೇಸ್: ಒಬ್ಸಿಡಿಯನ್ 3, ಡಿ ವಿಲ್ಲಿಯರ್ಸ್ 5, ಲಿವಿಸಿಲ್ಲಾ 7
7ನೇ ರೇಸ್: ಕೋಡ್ ಆಫ್ ಹಾನರ್ 7, ಇಂಪೆಕಬಲ್ 9, ನಾಸ್ಟ್ರಡಾಮಸ್ 3

ಉತ್ತಮ ಬೆಟ್: ಮಾರ್ಗನೈಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7